ಅಧ್ಯಕ್ಷರು: ನೋಡಿ, ನಾನು ಮತ್ತೊಮ್ಮೆ request ಮಾಡುತ್ತೇನೆ, ತಾವು ತಮ್ಮ ಸ್ಥಾನಕ್ಕೆ ಹೋಗಿ. ಅವರಿಗೆ ನಾನೇನು ಒತ್ತಾಯ ಮಾಡಿಲ್ಲ. ಅವರೇ ಮಾಡಿದ್ದಾರೆ. ಅವರನ್ನು convince ಮಾಡಿ, ಇದು ಸರ್ಕಾರಕ್ಕೆ ಬಿಟ್ಟಿದ್ದು, ಸರ್ಕಾರದವರು, oppositionನವರು ಇದ್ದೀರಿ, ನಾನು decision ತೆಗೆದುಕೊಳ್ಳುವುದಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- House is not in order, How can you debate...

ಅಧ್ಯಕ್ಷರು: ಈ ವಿಷಯವನ್ನು ಈಗ close ಮಾಡಿದ್ದೇನೆ. ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ. ಇನ್ನು proceedings ಬಹಳ ಇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- No, this is...

ಅಧ್ಯಕ್ಷರು:- Calling attention ಸಲುವಾಗಿ ಎಲ್ಲಾ ಶಾಸಕರು wait ಮಾಡುತ್ತಿದ್ದಾರೆ. ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ, ನಿಮ್ಮದು ಸಹ ಸಾಕಷ್ಟು calling attentions ಇವೆ, ದಯವಿಟ್ಟು proceedings ನಡೆಸುವುದಕ್ಕೆ ಅವಕಾಶ ಕೊಡಿ. ಕೊನೆಯದಾಗಿ ನಾನು request ಮಾಡುತ್ತಿದ್ದೇನೆ, ನಿಮ್ಮ ಸ್ಥಾನಕ್ಕೆ ಹೋಗಿ. ಈಗ ಸದನವನ್ನು 10 ನಿಮಿಷದವರೆಗೆ ಮುಂದಕ್ಕೆ ಹಾಕಿದ್ದೇನೆ.

(ಸದನದ ಕಲಾಪವು 6 ಗಂಟೆ 46 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ 10 ನಿಮಿಷದ ನಂತರ ಸಮಾವೇಶಗೊಳ್ಳಲು ತೀರ್ಮಾನಿಸಿತು)

8.ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ: ರಾಮನಗರ ಜಿಲ್ಲೆಗೆ ಮಂಜೂರಾಗಿದ್ದ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯವನ್ನು ಬೇರೆಡೆಗೆ ಸ್ಥಳಾಂತರಿಸಲು ಹಾಗೂ ಕ್ಯಾಂಪಸ್ ಮತ್ತು ಹಣಕಾಸು ವಿಷಯದಲ್ಲಿ ಹಗರಣ ನಡೆದಿದೆ ಎಂದು ಮುಖ್ಯಮಂತ್ರಿಯವರು ನೀಡಿರುವ ಹೇಳಿಕೆಗಳಿಂದ ಉಂಟಾಗಿರುವ ಗೊಂದಲದ ಬಗ್ಗೆ

ಶ್ರೀ ಹೆಚ್.ಡಿ.ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ ವಿಚಾರದಲ್ಲಿ ನಾನು ಮತ್ತು ನಮ್ಮ ಸಹೋದ್ಯೋಗಿಗಳು ಏನು ನಿಲುವಳಿ ಸೂಚನೆಯನ್ನು ತಂದಿದ್ದೆವು ಆ ಸಂದರ್ಭದಲ್ಲಿ ತಾವು ಈ ದಿವಸ ಈ ವಿಚಾರಕ್ಕೆ ಸಂಬಂಧಿಸಿದಂತೆ ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿ ಇವತ್ತು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಅದಕ್ಕಾಗಿ ಮೊದಲನೆಯದಾಗಿ ತಮಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ ಬಗ್ಗೆ 1996ನೇ ಇಸವಿಯಲ್ಲಿ

ಪ್ರಾರಂಭ ಮಾಡಬೇಕು ಎನ್ನತಕ್ಕ ದೃಷ್ಟಿಯಿಂದ ಪ್ರಾರಂಭವಾಗಿ ಇದುವರೆಗೆ ಈ ವಿಶ್ವವಿದ್ಯಾಲಯ ಯಶಸ್ವಿಯಾಗಿ ಕೆಲಸ ನಿರ್ವಹಿಸುವುದಕ್ಕೆ ಹಲವಾರು ರೀತಿ ತೊಂದರೆಗಳು ಏನು ಬಂದಿದೆ, ಈ ವಿಶ್ವವಿದ್ಯಾನಿಲಯವನ್ನು 1996ನೇ ಇಸವಿಯಲ್ಲಿ ಪ್ರಾರಂಭ ಮಾಡಬೇಕೆಂದು ಅಂದು ನಿರ್ಧಾರ ಮಾಡಿದಾಗ ಮೊದಲು ಮೈಸೂರಿನಲ್ಲಿ ಮಾಡಬೇಕೆಂದು ತೀರ್ಮಾನ ಮಾಡಿ ಅಲ್ಲೂ ಸಾಧ್ಯವಾಗದೇ ಬೆಂಗಳೂರು ನಗರದಲ್ಲಿ ಮಾಡಬೇಕೆಂದು ನಿರ್ಣಯವನ್ನು ಏನು ಮಾಡಿದರು, ಬೆಂಗಳೂರು ನಗರದಲ್ಲಿ ಈ ವಿಶ್ವವಿದ್ಯಾನಿಲಯದ ಕಾರ್ಯಚಟುವಟಿಕೆಗಳನ್ನು ಪ್ರಾರಂಭ ಮಾಡತಕ್ಕ ಹಂತದಲ್ಲಿ ಕಳೆದ ಸಮ್ಮಿಶ್ರ ಸರ್ಕಾರದಲ್ಲಿ ಏನು ರಾಮನಗರದಲ್ಲಿ ಈ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುವುದಕ್ಕೆ ಪುನಃ ನಿರ್ಧಾರ ಮಾಡತಕ್ಕ ಒಂದು ತೀರ್ಮಾನವನ್ನು ಈ ಹೌಸ್‌ನಲ್ಲಿ ಮಾಡಿದ್ದೇವೆ, ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ನಲ್ಲೂ ಏನು ತೀರ್ಮಾನ ಮಾಡಿದರು, ಅದಕ್ಕೆ ಮೂಲ ಕಾರಣ ಏನು ಈ ಮಹಾವಿದ್ಯಾನಿಲಯ ಬೆಂಗಳೂರಿನ ಜಯನಗರದ ಎರಡು ಎಕರೆ ಜಮೀನಿನಲ್ಲಿ ಕಾರ್ಯಚಟುವಟಿಕೆ ಆಗುತ್ತಿತ್ತು. ಇದನ್ನು ಗಮನದಲ್ಲಿ ಇಟ್ಟುಕೊಂಡು ನಮ್ಮ ಸರ್ಕಾರ, ಸಮ್ಮಿಶ್ರ ಸರ್ಕಾರವನ್ನು ನಡೆಸತಕ್ಕ ಸಂದರ್ಭದಲ್ಲಿ ಮಾಗಡಿ ರಸ್ತೆಯಲ್ಲಿರತಕ್ಕ ಬೆಗ್ಗರ್ಸ್ ಕಾಲೋನಿಯಲ್ಲಿರತಕ್ಕ ಜಾಗವನ್ನು ಕೇಳಿ ವಿಶ್ವವಿದ್ಯಾನಿಲಯದಿಂದ ಏನು ಮನವಿಯನ್ನು ಸಲ್ಲಿಸಿದರು, ಇವೆಲ್ಲಾ ಒಂದು ಇತಿಹಾಸ. ಇದರ ಆಧಾರದ ಮೇಲೆ ರಾಮನಗರದಲ್ಲಿ, ಬೆಂಗಳೂರಿನ ಒತ್ತಡದ ಸಂದರ್ಭದಲ್ಲಿ ರಾಮನಗರ ಜಿಲ್ಲೆಯಾಗಿ ಏನು ಕಳೆದ ಸಮ್ಮಿಶ್ರ ಸರ್ಕಾರದಲ್ಲಿ ಹೊಸದಾಗಿ ಜಿಲ್ಲೆಯಾಗಿ ತಾವೇ ಕಂದಾಯ ಸಚಿವರಾಗಿ ಮಾಡತಕ್ಕ ನಿರ್ಧಾರ ಮಾಡಿದಂಥ ಸನ್ನಿವೇಶದಲ್ಲಿ ರಾಮನಗರದಲ್ಲಿ ಹಲವಾರು ಜಿಲ್ಲಾ ಆಡಳಿತವನ್ನು ನಡೆಸತಕ್ಕದಕ್ಕೆ ಕಛೇರಿಗೆ ಶಂಕುಸ್ಥಾಪನೆ ನಿರ್ವಹಿಸತಕ್ಕ ಸಂದರ್ಭದಲ್ಲಿ ಈ ಒಂದು ವಿಶ್ವವಿದ್ಯಾನಿಲಯವನ್ನು ಅಲ್ಲಿ ಪ್ರಾರಂಭ ಮಾಡತಕ್ಕದ್ದು ಅದರ ಜೊತೆಗೆ ಹೈಟೆಕ್ ಆಸ್ಪತ್ರೆ ಮತ್ತು ನರ್ಸಿಂಗ್ ಕಾಲೇಜುಗಳು ಇರಬಹುದು, ಹೀಗೆ ನಾವು ಏನು ಒಂದು ತೀರ್ಮಾನಕ್ಕೆ ಬಂದಿದ್ದೆವು, ಕಳೆದ ಬಜೆಟ್‌ನಲ್ಲಿ ಅಂದಿನ ಉಪಮುಖ್ಯಮಂತ್ರಿಯಾಗಿದ್ದ ಇಂದಿನ ಮುಖ್ಯಮಂತ್ರಿಗಳಾದ ಮಾನ್ಯ ಯಡಿಯೂರಪ್ಪನವರು 2007–08ನೇ ಸಾಲಿನ ಆಯವ್ಯಯವನ್ನು ಸದನದಲ್ಲಿ ಮಂಡನೆ ಮಾಡತಕ್ಕ ಸಂದರ್ಭದಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಬಜೆಟ್‌ನಲ್ಲೂ ಹೇಳಿದ್ದಾರೆ. ನಮ್ಮ ಸರ್ಕಾರ ರಾಮನಗರವನ್ನು ಆರೋಗ್ಯ ನಗರವನ್ನಾಗಿ ಅಭಿವೃದ್ಧಿಪಡಿಸಲು ಯೋಚಿಸಿದ್ದೇವೆ. ಅಲ್ಲಿ ಆರೋಗ್ಯ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಯೋಜಿಸಿರುವುದಾಗಿ, ವೈದ್ಯಕೀಯ ಕಾಲೇಜು, ಉನ್ನತಮಟ್ಟದ ಆಸ್ಪತ್ರೆ ಇತ್ಯಾದಿಗಳನ್ನು ನಿರ್ಮಾಣ ಮಾಡಲಾಗುವುದು. ಈ ಉದ್ದೇಶಕ್ಕಾಗಿ 284 ಕೋಟಿ ರೂಪಾಯಿ ವೆಚ್ಚವಾಗುತ್ತದೆಂದು ಅಂದಾಜು ಮಾಡಲಾಗಿದೆ. ಆರೋಗ್ಯ ವಿಶ್ವವಿದ್ಯಾನಿಲಯವು 150 ಕೋಟಿ ರೂಪಾಯಿಗಳನ್ನು ನೀಡಲಿದೆ ಮತ್ತು ನಮ್ಮ ಸರ್ಕಾರ ಮುಂದಿನ ಮೂರು

ವರ್ಷಗಳ ಅವಧಿಗೆ 133 ಕೋಟಿ ಒದಗಿಸಲಿದೆಯೆಂದು ಘೋಷಣೆ ಮಾಡಿರುತ್ತಾರೆ. ಅಲ್ಲದೆ ಈ ಉದ್ದೇಶಕ್ಕಾಗಿ 2007–08ನೇ ಸಾಲಿನಲ್ಲಿ 43 ಕೋಟಿ ರೂಪಾಯಿಗಳ ಅನುದಾನವನ್ನು ಒದಗಿಸಿರುವುದಾಗಿ ಅವರು ಘೋಷಣೆ ಮಾಡಿದ್ದಾರೆ. ಇದು ಆದನಂತರ, ಈ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಚಿವ ಸಂಪುಟದ ಅನುಮತಿಯನ್ನು ಪಡೆದು ಸೂಕ್ತ ಸರ್ಕಾರಿ ಆದೇಶಗಳನ್ನೇನು ಹೊರಡಿಸಿದ್ದೇವೆ. ವಿಶ್ವವಿದ್ಯಾನಿಲಯ ಕ್ಯಾಂಪಸ್ ಸ್ಥಳಾಂತರ ಮಾಡುವುದಕ್ಕೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದಕ್ಕೆ ಸರ್ಕಾರದ ಆದೇಶಗಳನ್ನು ಹೊರಡಿಸಲಾಗಿದೆ. ಈ ಎಲ್ಲಾ ಪ್ರಕ್ರಿಯೆಗಳ ನಂತರ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ ತನ್ನ ಅಧಿನಿಯಮ 1994ರ 3ನೇ ಪ್ರಕರಣದ (4)ನೇ ಉಪ ಪ್ರಕರಣಕ್ಕೆ ತಿದ್ದುಪಡಿ ಮಾಡಿ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಿಗಳ ವಿಶ್ವವಿದ್ಯಾನಿಲಯವನ್ನು ಬೆಂಗಳೂರಿನಲ್ಲಿ ಇರತಕ್ಕದ್ದು ಎನ್ನುವುದಕ್ಕೆ ಬದಲಾಗಿ ರಾಮನಗರದಲ್ಲಿ ಇರತಕ್ಕದ್ದು ಎಂದು ಬದಲಾವಣೆ ಮಾಡಿ ದಿನಾಂಕ 10.08.2007 ರಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಶ್ರೀ ಮಾಲೀಕಯ್ಯ ಗುತ್ತೇದಾರ್:– ಮಾನ್ಯ ಅಧ್ಯಕ್ಷರೆ, ನಾವು ನಿಲುವಳಿ ಸೂಚನೆಗೆ ಕೊಟ್ಟು ಒಂದು ವಾರದಿಂದ ಕಾಯುತ್ತಿದ್ದೇವೆ.

ಅಧ್ಯಕ್ಷರು:– ಆಗಲಿ, ಇದು ಆದಮೇಲೆ ಕೊಡುತ್ತೇನೆ.

ಶ್ರೀ ಮಾಲೀಕಯ್ಯ ಗುತ್ತೇದಾರ್:– ತೆಗೆದುಕೊಳ್ಳಿ, 9 ಗಂಟೆಯಾದರು ನಾವು ಇರುತ್ತೇವೆ. ನಾವು ಒಂದು ವಾರದಿಂದ ಇದ್ದೇವೆ. ಬಹಳ ಮಹತ್ವವಾದ ವಿಚಾರ. ಇದನ್ನು ಮುಗಿಸಿ ತೆಗೆದುಕೊಳ್ಳಿ. ನಾವು ಒಂದು ವಾರದಿಂದ ಇದನ್ನು ಹಾಕಿ ಕಾಯುತ್ತಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಎಂ.ಖರ್ಗೆ:– ಸದನವನ್ನು ನಾಳೆಗೂ ಮುಂದುವರೆಸಿದರೆ ಒಳ್ಳೆಯದಾಗುತ್ತದೆ. ನಾಳೆ ಹೇಗೂ ಶುಕ್ರವಾರ.

ಶ್ರೀ ಹೆಚ್.ಡಿ.ರೇವಣ್ಣ:– ಒಂದು ದಿವಸ ಸದನವನ್ನು ಮುಂದೂಡಿ. ನಾಳೆ ಗಮನಸೆಳೆಯುವ ವಿಚಾರವನ್ನು ತೆಗೆದುಕೊಳ್ಳಿ.

ಅಧ್ಯಕ್ಷರು:– ಶಾಸಕರು ತಮ್ಮ ತಮ್ಮ ಕ್ಷೇತ್ರಕ್ಕೆ ಹೋಗಲು...

ಶ್ರೀ ಮಲ್ಲಿಕಾರ್ಜುನ ಎಂ.ಖರ್ಗೆ:– ತಮಗೆ ಗೊತ್ತಿರುವಂತೆ ಯಾವ ಶಾಸಕರೂ ತಮ್ಮ ಸಮಯವನ್ನು ವೇಸ್ಟ್ ಮಾಡುತ್ತಿಲ್ಲ. ಸಮಸ್ಯೆಗೆ ಎಲ್ಲರೂ ಚೆನ್ನಾಗಿ ಮಾತನಾಡುತ್ತಿದ್ದಾರೆ. ಪ್ರತಿಯೊಂದು ವಿಚಾರವನ್ನು ಸದನದ ಮುಂದಿಡುತ್ತಿದ್ದಾರೆ. ಎಲ್ಲಾ ಸ್ಮೂಥ್ ಆಗಿ ನಡೆಯುತ್ತಿದೆ. ಆದ್ದರಿಂದ ಒಂದು ದಿವಸ ಸದನವನ್ನು ಇಡಿ. ಬಾಕಿ ಇರುವ ಎಲ್ಲರೂ ಪೂರ್ಣ ಮಾಡುತ್ತಾರೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:– ನಾಳೆ ಭೀಮನ ಅಮವಾಸ್ಯೆ! ಹಬ್ಬ ಇದೆ.

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್:- ಮಾನ್ಯ ಅಧ್ಯಕ್ಷರೆ, ಎಲ್ಲ ಶಾಸಕರುಗಳಿಗೆ ನಾಳೆ ಅವರವರ ಊರಿನಲ್ಲಿ ಕಾರ್ಯಕ್ರಮವಿದೆ. ಇಲ್ಲಿ Bill pass ಆಗುವುದಕ್ಕೆ ಕಾಯುತ್ತಿದ್ದಾರೆ. ಆ ಕಡೆಯ ಶಾಸಕರುಗಳಿಗೂ ಸಮಸ್ಯೆ ಇದೆ. ನಾಳೆ ನಡೆಸುತ್ತೇವೆ ಎಂದರೆ ಆಗುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ:- B.A.C.ನಲ್ಲಿ ತೀರ್ಮಾನವಾದ ಹಾಗೆ ಎಲ್ಲವೂ ನಡೆಯುತ್ತಿಲ್ಲ. ಮುಂದಿನ ತಿಂಗಳು 8ನೇ ತಾರೀಖಿನವರೆಗೆ ಇದ್ದುದನ್ನು ಇವತ್ತು ಕೊನೆ ಎಂದು ಮಾಡಲಾಯಿತು. ಅದನ್ನು ಒಂದು ದಿವಸ extend ಮಾಡಿದರೆ ಏನೂ ತೊಂದರೆಯಾಗುವುದಿಲ್ಲ.

(ಗೊಂದಲ)

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್:- ಅಜೆಂಡಾ ಪ್ರಕಾರ ಹೋಗಿದ್ದರೆ ನಮ್ಮ ಅಭ್ಯಂತರವಿರಲಿಲ್ಲ. ನಮಗೆ ಅವಕಾಶ ಕೊಡಿ, ಇಲ್ಲದಿದ್ದರೆ ಆಗುವುದಿಲ್ಲ.

ಅಧ್ಯಕ್ಷರು:- ನಾನು ಎಲ್ಲರ ಅಭಿಪ್ರಾಯಗಳನ್ನೂ ಕೇಳುತ್ತೇನೆ. ಏಕೆಂದರೆ, ಕೆಲವು ಶಾಸಕರು ಪ್ರೋಗ್ರಾಂ ಹಾಕಿಕೊಂಡುಬಿಟ್ಟಿದ್ದಾರೆ. ನಾವು ಒಂದೆರಡು ದಿವಸ ಮುಂಚೆಯೇ ನಿರ್ಣಯ ತೆಗೆದುಕೊಂಡಿದ್ದರೆ ಅನುಕೂಲವಾಗುತ್ತಿತ್ತು.

ಶ್ರೀ ಸಿದ್ದರಾಮಯ್ಯ:- ಮತ್ತೆ ನಾವು ಅಕ್ಟೋಬರ್‌ಗೋ, ಸೆಪ್ಟೆಂಬರ್‌ಗೋ ಅಥವಾ ಯಾವಾಗ ಸಭೆ ಸೇರುತ್ತೇವೆಂದು ಗೊತ್ತಿಲ್ಲ. ದಯಮಾಡಿ ಇನ್ನೊಂದು ದಿನ extend ಮಾಡಿ.

ಅಧ್ಯಕ್ಷರು:- ಸರ್ಕಾರವನ್ನು ಕೇಳೋಣ.

ಶ್ರೀ ಸಿದ್ದರಾಮಯ್ಯ:- ಸರ್ಕಾರದವರು ಒಪ್ಪಿಕೊಳ್ಳುತ್ತಾರೆ. 8ನೇ ತಾರೀಖಿನವರೆಗೇ ಒಪ್ಪಿಕೊಂಡಿದ್ದರು. ನೀವು ಮಲೇಷಿಯಾಗೆ ಹೋಗುತ್ತೀರಿ ಎಂದು ಕಡಿಮೆ ಮಾಡಲಾಯಿತು.

ಅಧ್ಯಕ್ಷರು:- ಎಲ್ಲರ ಅಭಿಪ್ರಾಯವನ್ನು ಕೇಳಿ ಸರ್ಕಾರವನ್ನು ಕೇಳೋಣ. ಎಲ್ಲರೂ ಯಾವ ರೀತಿ ಹೇಳುತ್ತಾರೂ ನೋಡಿಕೊಂಡು ಮಾಡೋಣ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:- ಬಿ.ಜೆ.ಪಿ.ಸರ್ಕಾರ ಈಗ ಚೆನ್ನಾಗಿ ನಡೆಯುತ್ತಿದೆ. ನಾಳೆ ಮಾಡಿದರೆ ಗ್ರಹಣ ಹಿಡಿದುಕೊಂಡು ಬಿಡುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಇವತ್ತು 7 ಗಂಟೆಯವರೆಗೆ ನಡೆಸಿ, ನಾಳೆಯೂ ಮುಂದುವರೆಸಿ.

ಅಧ್ಯಕ್ಷರು:- ಈಗ ನಾನು ನಿಮ್ಮನ್ನು ಮತ್ತು ಆ ಕಡೆಯ ಕೆಲವು leadersಅನ್ನು ಕರೆಯುತ್ತೇನೆ. Decision ತೆಗೆದುಕೊಳ್ಳೋಣ. ಈಗ ಚರ್ಚೆ ನಡೆಯಲಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರುಗಳಲ್ಲಿ ನಾನು ಮನವಿ ಮಾಡುತ್ತೇನೆ. ಈ ಒಂದು ವಿಶ್ವವಿದ್ಯಾನಿಲಯದ ವಿಷಯದಲ್ಲಿ

1996ನೇ ಇಸವಿಯಲ್ಲಿ ತೆಗೆದುಕೊಂಡಿರತಕ್ಕ ನಿರ್ಧಾರ, ಇಲ್ಲಿಯವರೆಗೆ ಈ ವಿಶ್ವವಿದ್ಯಾನಿಲಯಕ್ಕೆ ಯಾವ ಒಂದು ಸೌಲಭ್ಯಗಳನ್ನು ಕಲ್ಪಿಸಬೇಕಾಗಿತ್ತು. ಈ ಸೌಲಭ್ಯಗಳನ್ನು ಕೊಡುವಲ್ಲಿ ಕೆಲವು ತೊಂದರೆಗಳು, ಅದು ಭೂಮಿಯ ತೊಂದರೆ ಇರಬಹುದು, ಅಥವಾ ಇಲ್ಲಿಯವರೆಗೆ ಬೇರೆ ಬೇರೆ ರೀತಿಯ ತೊಂದರೆಗಳಾಗಿ ಕನಿಷ್ಠ ಈಗಲಾದರೂ ಇದು ಕಾರ್ಯರೂಪಕ್ಕೆ ಬರುತ್ತದೆ ಎನ್ನುವ ಸಂದರ್ಭದಲ್ಲಿ ಮತ್ತೊಮ್ಮೆ ಸಾರ್ವಜನಿಕರಲ್ಲಿ ಒಂದು ರೀತಿಯ ಗೊಂದಲ ಮೂಡಿದೆ. ಇದು ಮತ್ತೆ ಅಲ್ಲಿಂದ ಹಿಂದೆ ಹೋಗತಕ್ಕಂಥಾದ್ದು, ಸಾರ್ವಜನಿಕವಾಗಿ ಬಹಳ ಪ್ರಮುಖವಾಗಿರತಕ್ಕಂಥ ವಿಷಯವಾಗಿರುವುದರಿಂದ ನಾನು ಸದಸ್ಯರಲ್ಲಿ ಮನವಿ ಮಾಡುತ್ತೇನೆ, ದಯವಿಟ್ಟು ಸಹಕರಿಸಿ, ನಾನು ಇದನ್ನು ಇನ್ನೊಂದು ಅರ್ಧ ಅಥವಾ ಮುಕ್ಕಾಲು ಗಂಟೆಯಲ್ಲಿ ಮುಗಿಸಿಬಿಡುತ್ತೇನೆ. ಜಾಸ್ತಿ ಎಳೆಯುವುದಕ್ಕೆ ಹೋಗುವುದಿಲ್ಲ ಮತ್ತು ಇನ್ಯಾರೂ ಮಾತನಾಡುವುದಿಲ್ಲ, ನಾನೇ ಎಲ್ಲ ವಿಷಯಗಳನ್ನು ಹೇಳುತ್ತೇನೆ. 2007ರ ಫೆಬ್ರವರಿ 15ನೇ ತಾರೀಖು ಈ ಒಂದು ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುವುದಕ್ಕೆ ಕಟ್ಟಡದ ಕೆಲಸ ಮತ್ತು ಭೂಮಿಯ ಕೆಲಸಕ್ಕೆ ಸಂಬಂಧಪಟ್ಟ ಹಾಗೆ ಒಂದು ಸಭೆಯನ್ನು ಕರೆದು, ಆ ಸಭೆಯಲ್ಲಿ ಹಲವಾರು ವಿಷಯಗಳನ್ನು ತೀರ್ಮಾನ ಮಾಡಿದೆವು. 15-02-2007ರಲ್ಲಿ ಅಂತಿಮವಾಗಿ ಆ ಸಭೆಯಲ್ಲಿ ತೆಗೆದುಕೊಂಡಂಥ ನಿರ್ಧಾರವೆಂದರೆ, "ರಾಮನಗರ ತಾಲ್ಲೂಕು ಕಸಬಾ ಹೋಬಳಿ, ಅರ್ಚಕರಹಳ್ಳಿ ಗ್ರಾಮದಲ್ಲಿ ಗುರುತಿಸಲಾಗಿರುವ 150 ಎಕರೆ ಖಾಸಗಿ ಜಮೀನು ಹಾಗೂ 70 ಎಕರೆ ಸರ್ಕಾರಿ ಜಮೀನನ್ನು ಉಪಯೋಗಿಸಿಕೊಂಡು ರಾಜೀವ್‌ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯ, ವೈದ್ಯಕೀಯ ಕಾಲೇಜು, ಡೆಂಟಲ್ ಕಾಲೇಜು, ನರ್ಸಿಂಗ್ ಕಾಲೇಜು, ಫಾರ್ಮಸಿ ಕಾಲೇಜು ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಇತರ ಪೂರಕ ಸಂಸ್ಥೆಗಳನ್ನು ನಿರ್ಮಾಣ ಮಾಡುವುದು." ಯಾವ ಒಂದು ಭೂಮಿಯಲ್ಲಿ ನಾವು ಈ ಒಂದು ಕೆಲಸಕ್ಕೆ ಅನುಮತಿಯನ್ನು ಕೊಡಬೇಕೆಂದಿದ್ದೆವೋ, ಆ ಸಂದರ್ಭದಲ್ಲಿ ಕರ್ನಾಟಕ ಗೃಹ ಮಂಡಳಿಯವರು ಇದೇ ಜಾಗದಲ್ಲಿ ವಸತಿ ಬಡಾವಣೆಯನ್ನು ನಿರ್ಮಿಸಬೇಕೆಂದು ತೀರ್ಮಾನವನ್ನು ಮಾಡಿದ್ದರು. ಆದ್ದರಿಂದ ಆವತ್ತು ಗೃಹ ಮಂಡಳಿಯ ಅಧಿಕಾರಿಗಳನ್ನೂ ಆ ಸಭೆಗೆ ಕರೆದು, ಗೃಹ ಮಂಡಳಿಯವರು ಹೊರಡಿಸಿದ್ದ ಅಧಿಸೂಚನೆಯನ್ನು ರದ್ದು ಪಡಿಸಲು ಆದೇಶ ಮಾಡಿ, ಆವತ್ತಿನ ದಿನವೇ, "ಸದರಿ ಜಮೀನನ್ನು ಮೇಲ್ಕಂಡ ಉದ್ದೇಶಕ್ಕಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಮುಖಾಂತರ ಹೊಸದಾಗಿ ಭೂಸ್ವಾಧೀನ ಪಡಿಸಲು ಪ್ರಕ್ರಿಯೆಯನ್ನು ಕೂಡಲೇ ಕೈಗೊಳ್ಳುವುದು ಹಾಗೂ ಭೂಸ್ವಾಧೀನಕ್ಕೆ ತಗಲುವ ವೆಚ್ಚವನ್ನು 2006-07 ಮತ್ತು 2007-08ರ ಆಯವ್ಯಯದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಅನುದಾನದ ಮೂಲಕ ವೈದ್ಯಕೀಯ ಶಿಕ್ಷಣ ಇಲಾಖೆಯು ಒದಗಿಸುವುದು ಮತ್ತು ವೈದ್ಯಕೀಯ ವಿಶ್ವವಿದ್ಯಾಲಯ, ವೈದ್ಯಕೀಯ ಕಾಲೇಜು, ಡೆಂಟಲ್ ಕಾಲೇಜು ಹೀಗೆ ಹಲವಾರು ಪೂರಕ ಸಂಸ್ಥೆಗಳ ಕಟ್ಟಡಗಳ

ನಿರ್ಮಾಣ ಕಾರ್ಯವನ್ನು ಲೋಕೋಪಯೋಗಿ ಇಲಾಖೆಯ ವತಿಯಿಂದ ಠೇವಣಿ ಕೊಡುಗೆಯ ಕಾಮಗಾರಿಯನ್ನು ಕೈಗೊಳ್ಳಬೇಕೆಂದು ತೀರ್ಮಾನಿಸಲಾಯಿತು. ಹಾಗೂ ಈ ಕಾಮಗಾರಿಗೆ ಅಗತ್ಯವಾದ ನಕ್ಷೆ, ಅಂದಾಜು ಪಟ್ಟಿಗಳನ್ನು ಕೂಡಲೇ ಸಿದ್ಧಪಡಿಸಿ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಯಿತು. ರಾಜೀವ್‌ಗಾಂಧಿ ವೈದ್ಯಕೀಯ ವಿಶ್ವವಿದ್ಯಾನಿಲಯದಲ್ಲಿ ಸದರಿ ಉದ್ದೇಶಕ್ಕಾಗಿ ಲಭ್ಯವಿರುವ 120 ಕೋಟಿ ರೂ.ಗಳನ್ನು ಉಪಯೋಗಿಸಿಕೊಳ್ಳುವುದು ಮತ್ತು ಹೆಚ್ಚುವರಿಯಾಗಿ ಬೇಕಾಗುವ ಅನುದಾನವನ್ನು ಪಡೆಯಲು ಸರ್ಕಾರದ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ, ಇವರು ಸೂಕ್ತ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಿ ಕೊಡುವುದು, ಅವಶ್ಯ ಕಟ್ಟಡಗಳ ನಿರ್ಮಾಣಕ್ಕಾಗಿ ಬೇಕಾಗುವ ಮೂರನೇ ಒಂದಂಶದ ಅನುದಾನವನ್ನು ರಾಜೀವ ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ, ಲೋಕೋಪಯೋಗಿ ಇಲಾಖೆಗೆ ಒದಗಿಸಿಕೊಟ್ಟು ಕೂಡಲೇ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲು ಅನುವು ಮಾಡಿಕೊಡುವುದು. ಮೇಲೆ ಕ್ರಮ ಸಂಖ್ಯೆ 1 ರಿಂದ 4 ರವರೆಗಿನ ಅಂಶಗಳ ಬಗ್ಗೆ ವೈದ್ಯಕೀಯ ಶಿಕ್ಷಣ ಇಲಾಖೆಯು ಆರ್ಥಿಕ ಇಲಾಖೆ ಹಾಗೂ ಸಂಬಂಧಪಟ್ಟ ಇತರ ಇಲಾಖೆಗಳ ಸಹಮತಿ ಪಡೆದು ಒಂದು ಸಮಗ್ರವಾದ ಪ್ರಸ್ತಾವನೆಯನ್ನು ಮುಂದಿನ ಸಚಿವ ಸಂಪುಟದ ಸಭೆಯ ಪರಿಗಣನೆಗೆ ಮಂಡಿಸುವುದು." ಈ ಒಂದು ತೀರ್ಮಾನವನ್ನು 15-02-2007ರಲ್ಲಿ ಮಾಡುತ್ತೇವೆ. ಅದಾದ ನಂತರ ದಿನಾಂಕ 2-03-2007ರಂದು ನಡೆದ ಸಭೆಯಲ್ಲಿ, ಈ ಒಂದು ಕ್ಯಾಂಪಸ್‌ಅನ್ನು ಸ್ಥಾಪಿಸತಕ್ಕಂಥ ವಿಷಯದಲ್ಲಿ ಲೋಕೋಪಯೋಗಿ ಸಚಿವರು, ಹಣಕಾಸು ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳವರು ಹಾಗೂ ಕಾರ್ಯದರ್ಶಿಯವರು ಮತ್ತು ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದ ಕುಲಪತಿಯವರು ಇವರೆಲ್ಲಾ ಭಾಗವಹಿಸಿದ್ದರು. "ಅರ್ಚಕರಹಳ್ಳಿಯಲ್ಲಿರತಕ್ಕಂಥ 250 ಎಕರೆ ಪ್ರದೇಶವನ್ನು ಭೂಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಾರಂಭಿಸುವಂತೆ ಮತ್ತು ರಾಜೀವ್‌ಗಾಂಧಿ ವಿಶ್ವವಿದ್ಯಾಲಯ ಕ್ಯಾಂಪಸ್ ಮತ್ತು ಇತರೆ ಪೂರಕ ಕಟ್ಟಡಗಳನ್ನು ನಿರ್ಮಿಸುವ ಸಲುವಾಗಿ ವಿವರವಾದ ಸರ್ವೆ ಮಾಡಿ, ನಕ್ಷೆ, ಅಂದಾಜು ಪಟ್ಟಿಗಳನ್ನು ಸಿದ್ಧಪಡಿಸಿ, ಟೆಂಡರ್ ಕರೆಯುವಂತೆ ಸಭೆಯಲ್ಲಿ ಸೂಚಿಸಲಾಯಿತು". ಆವತ್ತಿನ ಸಭೆಯಲ್ಲಿ ಏನು ತೀರ್ಮಾನ ಮಾಡಿದರು ಅದರ ಆಧಾರದ ಮೇಲೆ, "ಆವತ್ತು K.I.A.D.B.ವತಿಯಿಂದ ಅಧಿಸೂಚನೆ ಹೊರಡಿಸಲಾಗಿದ್ದು, ಈ ಜಮೀನನ್ನು ಕೂಡಲೇ ಸ್ವಾಧೀನಪಡಿಸಿಕೊಂಡು ವೈದ್ಯಕೀಯ ಶಿಕ್ಷಣ ಇಲಾಖೆಯ ವಶಕ್ಕೆ ನೀಡುವಂತೆ K.I.A.D.B.ಯ ಅಧಿಕಾರಿಗಳಿಗೆ ಸೂಚಿಸಲಾಯಿತು. ನಂತರ ಮಾತನಾಡಿದ ವೈದ್ಯಕೀಯ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು ರಾಮನಗರ ತಾಲ್ಲೂಕಿನ ಅರ್ಚರಕರಹಳ್ಳಿ ಗ್ರಾಮದಲ್ಲಿ ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯ ಕ್ಯಾಂಪಸ್ಸು ಮತ್ತು..." ಇದನ್ನೆಲ್ಲ ನಾನು ಮತ್ತೆ ಓದಲಿಕ್ಕೆ ಹೋಗುವುದಿಲ್ಲ. "...ದಿನಾಂಕ

5–3–2007ರಂದು ಹೊರಡಿಸಿ, ರಾಜೀವ್‌ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯ ಸಿಂಡಿಕೇಟ್ ಮತ್ತು ಫೈನ್ಯಾನ್ಸ್ ಸಮಿತಿಗಳಿಂದ ನಿರ್ಣಯ ತೆಗೆದುಕೊಳ್ಳುವಂತೆ ನಿರ್ದೇಶನ ನೀಡುವುದಾಗಿ ಸಭೆಗೆ ತಿಳಿಸಿದರು. ಮೇಲ್ಕಂಡ ರಾಜೀವ್‌ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯದ ಕ್ಯಾಂಪಸ್ಸು, ಸರ್ಕಾರಿ ವೈದ್ಯಕೀಯ ಕಾಲೇಜು, ಹೈಟೆಕ್ ಆಸ್ಪತ್ರೆಗಳ ನಿರ್ಮಾಣ ಕಾಮಗಾರಿಯನ್ನು 2007–08ನೇ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭಿಸಬೇಕಾಗಿರುವುದರಿಂದ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ವೈದ್ಯಕೀಯ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು ಈ ವಿಷಯದಲ್ಲಿ ವಿಶೇಷ ಆಸಕ್ತಿ ವಹಿಸಿ ಕೂಡಲೇ ಸರ್ಕಾರಿ ಆದೇಶ ಹೊರಡಿಸಲು ಹಾಗೂ ರಾಜೀವ್‌ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯದ ಸಿಂಡಿಕೇಟ್ ಮತ್ತು ಫೈನ್ಯಾನ್ಸ್ ಸಮಿತಿಗಳ ಅನುಮತಿಯನ್ನು ಪಡೆದುಕೊಳ್ಳುವಲ್ಲಿ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಮುಖ್ಯಮಂತ್ರಿಗಳು ಸೂಚಿಸಿದರು. ಮೈಸೂರು ವಿಶ್ವವಿದ್ಯಾಲಯ, ವೈದ್ಯಕೀಯ ಕಾಲೇಜು, ಡೆಂಟಲ್ ಕಾಲೇಜು, ನರ್ಸಿಂಗ್ ಕಾಲೇಜು, ಫಾರ್ಮಸಿ ಕಾಲೇಜು ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಇತರ ಪೂರಕ ಸಂಸ್ಥೆಗಳ ಕಟ್ಟಡಗಳ ನಿರ್ಮಾಣ ಕಾರ್ಯವನ್ನು ಲೋಕೋಪಯೋಗಿ ಇಲಾಖೆಯ ವತಿಯಿಂದ ಠೇವಣಿ ಕೊಡುಗೆ ಕಾಮಗಾರಿಯಾಗಿ ಕೈಗೊಳ್ಳಬೇಕೆಂದು ತೀರ್ಮಾನಿಸಲಾಯಿತು. ರಾಜೀವ್‌ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯದ ಸದರಿ ಉದ್ದೇಶಕ್ಕಾಗಿ ಲಭ್ಯವಿರುವ 120 ಕೋಟಿ ರೂ.ಗಳನ್ನು ಉಪಯೋಗಿಸಿಕೊಳ್ಳುವುದು ಮತ್ತು ಹೆಚ್ಚುವರಿಯಾಗಿ ಬೇಕಾಗುವ ಅನುದಾನವನ್ನು ಪಡೆಯಲು ಸರ್ಕಾರದ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ ಇವರು ಸೂಕ್ತ ಪ್ರಸ್ತಾನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಿಕೊಡುವುದು. ಅವಶ್ಯ ಕಟ್ಟಡಗಳ ನಿರ್ಮಾಣಕ್ಕೆ ಬೇಕಾಗುವ ಮೂರನೇ ಒಂದಂಶದ ಅನುದಾನವನ್ನು ರಾಜೀವ್‌ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ, ಲೋಕೋಪಯೋಗಿ ಇಲಾಖೆಗೆ ಒದಗಿಸಿಕೊಟ್ಟು ಕೂಡಲೇ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲು ಅನುವು ಮಾಡಿಕೊಡುವುದು. ಲೋಕೋಪಯೋಗಿ ಇಲಾಖೆಯು ರಾಮನಗರ ತಾಲ್ಲೂಕು ವ್ಯಾಪ್ತಿಯಲ್ಲಿನ ಅರ್ಚಕರಹಳ್ಳಿ ವ್ಯಾಪ್ತಿಯಲ್ಲಿರುವ ಸುಮಾರು 250 ಎಕರೆ ಪ್ರದೇಶದಲ್ಲಿನ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ, ಯೋಜಿತ ಜಮೀನನ್ನು ವಿವರವಾದ ಸರ್ವೆ ಮಾಡಿ, ನಕ್ಷೆ, ಅಂದಾಜು ಪಟ್ಟಿಗಳನ್ನು ಸಿದ್ಧಪಡಿಸಿ ಕೂಡಲೆ ಟೆಂಡರ್ ಕರೆಯಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಯಿತು." ಆ ಸಂದರ್ಭದಲ್ಲಿ ಮುಖ್ಯ ವಾಸ್ತು ಶಿಲ್ಪಿಯವರು ಆ ಒಂದು ಸಭೆಯಲ್ಲಿ ಭಾಗವಹಿಸಿದ್ದರು. ಸಭೆಗೆ ಎಲ್ಲ ವಿವರ ನೀಡಿ, ಇವತ್ತು ಮುಖ್ಯ ವಾಸ್ತು ಶಿಲ್ಪಿಯವರು ಕರ್ನಾಟಕದ ಸಂಪೂರ್ಣ ಜವಾಬ್ದಾರಿಯನ್ನು ನಿರ್ವಹಿಸಬೇಕಾದಂಥ ಸಂದರ್ಭದಲ್ಲಿ ಅವರಿಗೆ ಕಾಲದ ಅಭಾವ ಆಗಬಹುದು. ಆದ್ದರಿಂದ ಅಂಥ ಸಂದರ್ಭದಲ್ಲಿ ಬೇರೆ ಪರಿಣಿತ architect ಗಳ ಸೇವೆಯನ್ನು ಇದಕ್ಕೆ ಪಡೆದುಕೊಳ್ಳತಕ್ಕಂಥಾದ್ದಕ್ಕೂ ಆವತ್ತಿನ

ಸಭೆಯಲ್ಲಿ ಸೂಚಿಸಲಾಗಿದೆ. ಇದಾದ ನಂತರ, ದಿ:12-03-2007ರಂದು ಅಂದಿನ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ KIADB ವತಿಯಿಂದ 247.20 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಅಧಿಸೂಚನೆ ಹೊರಡಿಸಿರುವುದಾಗಿ ಸಭೆಯಲ್ಲಿ ಹಾಜರಿದ್ದ KIADB ಅಧಿಕಾರಿಗಳು ತಿಳಿಸಿದರು ಮತ್ತು ಸಂಬಂಧಿಸಿದ ಕಾಮಗಾರಿಯನ್ನು ತ್ವರಿತವಾಗಿ ಪ್ರಾರಂಭಿಸಲು ಅನುಕೂಲವಾಗುವಂತೆ ದಿನಾಂಕ:15-03-2007ರಂದು 45 ದಿವಸಗಳ ಕಾಲಾವಕಾಶವನ್ನು ಒದಗಿಸಿ ಟೆಂಡರ್ ಕರೆಯಲು ಲೋಕೋಪಯೋಗಿ ಇಲಾಖೆಯು ಸಹಮತಿ ನೀಡುವಂತೆ ಕಾರ್ಯದರ್ಶಿಯವರು, ವೈದ್ಯಕೀಯ ಶಿಕ್ಷಣ ಇಲಾಖೆ, ಇವರಿಗೆ ಸೂಚಿಸಲಾಯಿತು. ಅಲ್ಲದೆ, ರಾಜೀವ್‌ಗಾಂಧಿ campus ಪೂರಕ ಕಟ್ಟಡಗಳನ್ನು ನಿರ್ಮಾಣ ಮಾಡುವ ಸಲುವಾಗಿ ಈ ಕೆಳಕಂಡಂತೆ ಹಣ ಭರಿಸಲು ಆದೇಶಿಸಲಾಯಿತು. 2007-08ರ ಆರ್ಥಿಕ ವರ್ಷದಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದಿಂದ 100 ಕೋಟಿ ರೂಪಾಯಿಗಳನ್ನು ತೊಡಗಿಸುವಂಥದ್ದು, ಕೇಂದ್ರದಿಂದ ಅಧಿಕ ಸಹಾಯ ರೂಪದಲ್ಲಿ ಬರತಕ್ಕಂಥ 80 ಕೋಟಿ ರೂಪಾಯಿಗಳನ್ನು ಉಪಯೋಗ ಮಾಡತಕ್ಕಂಥದ್ದು, ರಾಜ್ಯ ಸರ್ಕಾರದ ಆಯವ್ಯಯದಿಂದ 50 ಕೋಟಿ ರೂಪಾಯಿಗಳನ್ನು ರಾಜೀವಗಾಂಧಿ ವಿಶ್ವವಿದ್ಯಾನಿಲಯದಿಂದ ತೊಡಗಿಸತಕ್ಕಂಥದ್ದು ಮತ್ತು ರಾಜ್ಯ ಸರ್ಕಾರದಿಂದ 55 ಕೋಟಿ ರೂಪಾಯಿಗಳನ್ನು ತೊಡಗಿಸತಕ್ಕಂಥದ್ದಕ್ಕೆ ದಿ:15.03.2007ರಲ್ಲಿ ತೀರ್ಮಾನ ಮಾಡಿದ್ದೇವೆ. ಮೇಲ್ಕಂಡ ಸಭೆಯ ತೀರ್ಮಾನದನ್ವಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಅವರು ದಿನಾಂಕ:15.03.2007ರ ತಮ್ಮ ಪತ್ರದಲ್ಲಿ ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದ campus ಕಾಮಗಾರಿಯನ್ನು ಆದಷ್ಟು ಬೇಗನೆ ಕೈಗೊಳ್ಳುವ ಸಲುವಾಗಿ ಅಲ್ಪಾವಧಿ ಟೆಂಡರ್ ಕರೆದು ಕ್ರಮ ಕೈಗೊಳ್ಳುವಂತೆ ಮುಖ್ಯ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಇವರಿಗೆ ಸೂಚಿಸಿರುತ್ತಾರೆ. ಏಕೆಂದರೆ, ದಿ:12.03.2007ರಂದು ಆರೋಗ್ಯ ಸಚಿವರು ಮತ್ತು ಆರೋಗ್ಯ ಇಲಾಖೆಯ ಕಾರ್ಯದರ್ಶಿಯವರು ಇಬ್ಬರೂ ಲೋಕೋಪಯೋಗಿ ಇಲಾಖೆಗೆ ಅನುಮತಿಯನ್ನು ಸೂಚಿಸಿ ಅವರೇ ಸಹಮತಿಯನ್ನು ವ್ಯಕ್ತಪಡಿಸಿ ಈ ಪ್ರಕ್ರಿಯೆಯನ್ನು ಮುಂದುವರಿಸುವುದಕ್ಕೆ direction, ಸೂಚನೆಯನ್ನು ಕೊಟ್ಟಿದ್ದಾರೆ. ಇದಾದ ನಂತರ ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಪಟ್ಟಂತೆ, ಮಾನ್ಯ ಮುಖ್ಯಮಂತ್ರಿಗಳು ನಿನ್ನೆಯ ದಿವಸ ಮಾತನಾಡುತ್ತಾ, ಯಾವುದೇ ರೀತಿಯ ತೀರ್ಮಾನಗಳು ಸರ್ಕಾರದಿಂದ ಆಗದೆ, ಸರ್ಕಾರದಿಂದ ಯಾವುದೇ ರೀತಿಯ ಆದೇಶಗಳಿಲ್ಲದೆ ಟೆಂಡರ್ ಕರೆದು ಈ ಕೆಲಸಗಳನ್ನು ಪ್ರಾರಂಭ ಮಾಡಿದ್ದಾರೆನ್ನುವ ವಿಷಯವನ್ನು ಹೇಳಿದ್ದಾರೆ. ಕಟ್ಟಡ ನಿರ್ಮಾಣ ಕಾಮಗಾರಿಯ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ಇಲ್ಲದೆ ದಿನಾಂಕ:15.03.2007ರಂದು ಕಾಮಗಾರಿಗೆ ಟೆಂಡರ್ ಅಧಿಸೂಚನೆ ಹೊರಡಿಸಲಾಗಿದೆ ಎಂದು ನಿನ್ನೆ ಉತ್ತರ ಕೊಟ್ಟಿದ್ದಾರೆ. ಆದರೆ,

ಸಭೆಯಲ್ಲಿ ಆರೋಗ್ಯ ಇಲಾಖೆಯ ಸಚಿವರೇ ಇದಕ್ಕೇನು ಸೂಚನೆ ಕೊಟ್ಟಿದ್ದಾರೆ, ಸಹಮತವನ್ನು ವ್ಯಕ್ತಪಡಿಸಿದ್ದಾರೆ, ಇದೆಲ್ಲ ಸರ್ಕಾರದ ಆರ್ಥಿಕ ಇಲಾಖೆಯಿಂದಲೂ ಅನುಮತಿ ಪಡೆದು ಈ tender ಪ್ರಕ್ರಿಯೆ ಮಾಡಿರುವುದು ಎನ್ನುವುದನ್ನು ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ನಂತರ, ಭೂ ಸ್ವಾಧೀನದ ವಿಷಯದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು– KIADB ಯಿಂದ ಯಾವುದೇ ರೀತಿಯ ಭೂ ಸ್ವಾಧೀನ ಅಧಿಸೂಚನೆ ಹೊರಡಿಸದೆ ಕೆಲಸ ಮಾಡಲಿಕ್ಕೆ tender ಕರೆಯಲಿಕ್ಕೆ ಹೋದರೆಂದು ಹೇಳಿದ್ದಾರೆ. ಆದರೆ, ಸರ್ಕಾರದ ತಿರ್ಮಾನದಂತೆ ಈ ಉದ್ದೇಶಕ್ಕಾಗಿ ಅರ್ಚಕರಹಳ್ಳಿ ಗ್ರಾಮದ ಜಮೀನಿನ ಪೈಕಿ 60.18 ಎಕರೆ ಸರ್ಕಾರಿ ಖರಾಬ್ ಜಮೀನು, 187.02 ಎಕರೆ ಖಾಸಗಿ ಜಮೀನು ಒಳಗೊಂಡಂತೆ ಒಟ್ಟು 247 ಎಕರೆ ಜಮೀನನ್ನು KIADB ಮೂಲಕ ಸ್ವಾಧೀನಪಡಿಸಿಕೊಳ್ಳುವ ಸಲುವಾಗಿ ವೈದ್ಯಕೀಯ ಶಿಕ್ಷಣ ಇಲಾಖೆಯು ಕಳುಹಿಸಿದ ಪ್ರಸ್ತಾವನೆಯ ಮೇರೆಗೆ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ರಾಜ್ಯ ಪತ್ರದಲ್ಲಿ ದಿ:27/02/07ರಂದು KIADB ಯ ಕಾಯ್ದೆಯ ವಿಧಿ 28(1)ರನ್ವಯ preliminary ಅಧಿಸೂಚನೆ ಹೊರಡಿಸಿದೆ. ಸದರಿ ಭೂಸ್ವಧೀನಕ್ಕಾಗಿ ಸುಮಾರು 50 ಕೋ.ರೂ.ಗಳು ಅವಶ್ಯವೆಂದು ಅಂದಾಜಿಸಿತ್ತು. ಅಲ್ಲದೆ, ಭೂಸ್ವಾಧೀನಕ್ಕಾಗಿ ಬೇಕಾಗುವ ವೆಚ್ಚವನ್ನು ಭರಿಸಲು ವೈದ್ಯಕೀಯ ಶಿಕ್ಷಣ ಇಲಾಖೆಯು ಹಣಕಾಸು ಇಲಾಖೆಗೆ ದಿ:26/04/07ರಂದು ಕಳುಹಿಸಿದ ಪ್ರಸ್ತಾವನೆಗೆ ಸಹಮತಿಯನ್ನು ಸಹ ನೀಡಿದೆ. ತದನಂತರ, ವೈದ್ಯಕೀಯ ಶಿಕ್ಷಣ ಇಲಾಖೆಯು ದಿ:9/07/07ರಂದು 5 ಕೋ.ರೂ.ಗಳನ್ನು KIADB ಗೆ ಬಿಡುಗಡೆ ಮಾಡಿದೆ. ತದನಂತರ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಕಾಯ್ದೆಯನ್ವಯ 28(4)ರ ಮೇರೆಗೆ 216 ಎಕರೆ 28 ಗುಂಟೆ ಜಮೀನನ್ನು KIADB ಮೂಲಕ ಭೂಸ್ವಾಧೀನಪಡಿಸಿಕೊಳ್ಳಲು ದಿ:18/06/07ರಂದು ರಾಜ್ಯಪತ್ರದಲ್ಲಿ ಅಂತಿಮ ಅಧಿಸೂಚನೆ ಹೊರಡಿಸಿ, ಭೂಸ್ವಾಧೀನಪಡಿಸಿಕೊಳ್ಳಲಾಗಿದೆ. KIADB ಕಾಯ್ದೆ ವಿಧಿ 28(4)ರಲ್ಲಿ ತಿಳಿಸಿರುವಂತೆ ಭೂಸ್ವಾಧೀನದ ಅಂತಿಮ ಅಧಿಸೂಚನೆ ಪ್ರಕಟಣೆ ಹೊರಡಿಸಿದ ನಂತರ ಸದರಿ ಭೂ ಪ್ರದೇಶವು ಯಾವುದೇ ಋಣಭಾರವಿಲ್ಲದೆ ಸರ್ಕಾರಿ ಸ್ವತ್ತೆಂದು ಪರಿಗಣಿಸತಕ್ಕದ್ದೆಂದು ಕಾಯ್ದೆ 28(5)ರಲ್ಲಿ ಪ್ರಸ್ತಾಪಿಸಲಾಗಿದೆ. ಸದರಿ ಕ್ಯಾಂಪಸ್ ನಿರ್ಮಾಣಕ್ಕಾಗಿ ಒಟ್ಟು 216 ಎಕರೆ 26 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡಿರುವುದಾಗಿ ಈ ಬಾಬ್ತು ಭೂ ಪರಿಹಾರಕ್ಕಾಗಿ ಸರ್ಕಾರದಿಂದ 9.63 ಕೋಟಿ ರೂ.ಗಳು ಬಿಡುಗಡೆಯಾಗಿರುವುದಾಗಿ KIADB ಯ ವಿಶೇಷ ಭೂ ಸ್ವಾಧೀನಾಧಿಕಾರಿ ದಿ:16/05/08ರ ಪತ್ರದಲ್ಲಿ ತಿಳಿಸಿರುತ್ತಾರೆ ಹಾಗೂ ಈ ಪೈಕಿ 6 ಕೋಟಿ 1 ಲಕ್ಷದ 62 ಸಾವಿರ ರೂಪಾಯಿಗಳ ಭೂ ಪರಿಹಾರ ಪಾವತಿಸಿರುವುದಾಗಿ ತಿಳಿಸಿರುತ್ತಾರೆ. ಇವೆಲ್ಲ Annexure ನಲ್ಲಿದೆ. ಸರ್ಕಾರಿ ಆದೇಶಗಳೆಲ್ಲ ಇವೆ. ನಂತರ, 216.24 ಎಕರೆ ಪೈಕಿ ಮೂರನೇ ಒಂದು ಭಾಗ

ಎಂದರೆ 71 ಎಕರೆ 15 ಗುಂಟೆ ಜಮೀನನ್ನು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ ಸ್ಥಾಪಿಸುವ ಸಲುವಾಗಿ ವಿಶ್ವವಿದ್ಯಾನಿಲಯ ಕುಲಸಚಿವರಿಗೆ ಹಸ್ತಾಂತರಿಸಿ, ವೈದ್ಯಕೀಯ ಶಿಕ್ಷಣ ಇಲಾಖೆಯು ದಿ:18/08/07ರಂದು ಸರ್ಕಾರಿ ಆದೇಶ ಹೊರಡಿಸಿದ್ದಾರೆ. 216.24 ಎಕರೆ, ಪೈಕಿ ಉಳಿದ ಮೂರನೇ ಎರಡು ಭಾಗ ಎಂದರೆ 145 ಎಕರೆ 09 ಗುಂಟೆ ಜಮೀನಿದ್ದು, ಅದರಲ್ಲಿ 29 ಎಕರೆ 4 ಗುಂಟೆ ಸರ್ಕಾರಿ ಜಮೀನು ಆಗಿದೆ. ವೈದ್ಯಕೀಯ ಮಹಾ ವಿದ್ಯಾಲಯ, Pharmacy College, ದಂತ ವೈದ್ಯ ಕಾಲೇಜು, Super Specialty Hospital ಇತ್ಯಾದಿಗಳನ್ನು ಸ್ಥಾಪಿಸುವ ಸಲುವಾಗಿ ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕರಿಗೆ ಹಸ್ತಾಂತರಿಸಲು ಆದೇಶಿಸಿ, ವೈದ್ಯಕೀಯ ಶಿಕ್ಷಣ ಇಲಾಖೆಯು ದಿ:18/08/2007ರಂದು ಆದೇಶ ಹೊರಡಿಸಿದೆ. ಅದಾದನಂತರ; ದಿ:11/09/2007ರಂದು KIADB ಯ ಸದರಿ 245 ಎಕರೆ 09 ಗುಂಟೆ ಜಮೀನನ್ನು KIADB ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆಯವರಿಗೆ free from all encumbrances ಎನ್ನತಕ್ಕಂಥ ಒಂದು ನೋಟ್ ಅನ್ನು ಹಾಕಿ ವೈದ್ಯಕೀಯ ಇಲಾಖೆಗೆ ಹಸ್ತಾಂತರ ಮಾಡಿದ್ದಾರೆ. ವಿಶ್ವವಿದ್ಯಾನಿಲಯ ಕ್ಯಾಂಪಸ್ ನಿರ್ಮಾಣ ಕೈಗೊಳ್ಳುವ ಸಲುವಾಗಿ ವೈದ್ಯಕೀಯ ಶಿಕ್ಷಣ ಇಲಾಖೆ ನಂತರ 145 ಎಕರೆ ಭೂಮಿಯನ್ನು ದಿ:13/09/07ರಂದು ಲೊಕೋಪಯೋಗಿ ಇಲಾಖೆಗೆ ಋಣಮುಕ್ತವಾಗಿ ಹಸ್ತಾಂತರಿಸಿದೆ. 11ನೇ ತಾರೀಖು KIADB ಯಿಂದ ವೈದ್ಯಕೀಯ ಇಲಾಖೆಗೆ transfer ಮಾಡುತ್ತಾರೆ. 13ನೇ ತಾರೀಖು ವೈದ್ಯಕೀಯ ಇಲಾಖೆಯಿಂದ ಲೋಕೋಪಯೋಗಿ ಇಲಾಖೆಗೆ transfer ಮಾಡಿದ್ದಾರೆ. ಈ ರೀತಿ ಋಣಮುಕ್ತವಾಗಿ ಭೂಸ್ವಾಧೀನ ಮಾಡಿದ ಜಮೀನನ್ನು ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಿದ ವೈದ್ಯಕೀಯ ಶಿಕ್ಷಣ ಇಲಾಖೆಯು High Court ನಲ್ಲಿ ಭೂ ಮಾಲೀಕರು ಹೂಡಿರುವ ದಾವೆಯ ಬಗ್ಗೆಯಾಗಲಿ, ಮರ ಗಿಡಗಳನ್ನು ಕಡಿಯಬಾರದೆಂಬ ಬಗ್ಗೆ ನೀಡಿರುವ ಸೂಚನೆಯಾಗಿರಲಿ ಅಥವಾ ಈ ಬಗ್ಗೆ ನಡೆದಿರುವ ಪತ್ರ ವ್ಯವಹಾರಗಳ ಬಗ್ಗೆಯಾಗಲಿ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಾಗಲಿ, ಪ್ರಧಾನ ಕಾರ್ಯದರ್ಶಿ, ಆರೋಗ್ಯ ಹಾಗು ಕುಟುಂಬ ಕಲ್ಯಾಣ ಇಲಾಖೆಯವರಾಗಲಿ, ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆಯವರಾಗಲಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, KIADB ಅವರಾಗಲಿ ಮತ್ತು ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ ಇವರ್‍ಯಾರೂ ಇಷ್ಟೆಲ್ಲಾ ಆದ ಮೇಲೂ ಲೋಕೋಪಯೋಗಿ ಇಲಾಖೆಯ ಗಮನಕ್ಕೆ Court ನಲ್ಲಿ ಈ ವ್ಯಾಜ್ಯವಿದೆ ಎನ್ನತಕ್ಕಂಥ ವಿಷಯವನ್ನು ತಂದಿಲ್ಲ. ಆದರೆ, Court ನವರು ಭೂಮಿಯ ವಿಚಾರದಲ್ಲಿ stay ಕೊಟ್ಟಿಲ್ಲ. Court ನವರು ಮರಗಿಡಗಳನ್ನು ಕಟ್

ಮಾಡಬಾರದೆಂದು stay ಕೊಟ್ಟಿದ್ದಾರೆ. ಕೆಲಸ ಮಾಡಬೇಡಿ ಎಂದು ಅವರಿಗೆ stay ಕೊಟ್ಟಿಲ್ಲ. ನಂತರ, ದಿ:17/08/07ರಂದು ಗುತ್ತಿಗೆದಾರರಿಗೆ ಶೇ.10ರಷ್ಟು ಮುಂಗಡ ಹಣವನ್ನು ಬಿಡುಗಡೆ ಮಾಡಿದ ಸಂದರ್ಭದಲ್ಲಿಯೂ ವೈದ್ಯಕೀಯ ಇಲಾಖೆಯು ರೈತರು High Court ನಲ್ಲಿ ಸಲ್ಲಿಸಿರುವ ರಿಟ್ ಅರ್ಜಿಗಳ ಬಗ್ಗೆ ಲೋಕೋಪಯೋಗಿ ಇಲಾಖೆಯ ಗಮನಕ್ಕೆ ತಂದಿಲ್ಲ. ಇದನ್ನೆಲ್ಲ ಬಹುಶಃ ವೈದ್ಯಕೀಯ ಶಿಕ್ಷಣ ಸಚಿವರು ವಿಧಾನ ಪರಿಷತ್ತಿನಲ್ಲಿ ಹೇಳಿರಬಹುದೆಂದು ತೋರುತ್ತದೆ. ದಿ:18/08/07ರಂದು ವೈದ್ಯಕೀಯ ಶಿಕ್ಷಣ ಇಲಾಖೆಯು ಹೊರಡಿಸಿರುವ ಸರ್ಕಾರಿ ಆದೇಶ ಸಂ:ಆಕುಕ/196/ಎಂಪಿಎಸ್,2006ರ ಅನ್ವಯ ಭೂ ಸ್ವಾಧೀನಪಡಿಸಿಕೊಂಡಿರುವ ಒಟ್ಟು 216.24 ಎಕರೆ ಜಮೀನಿನ ಪೈಕಿ ಮೂರನೇ ಒಂದು ಭಾಗದಷ್ಟು ಜಮೀನು ಅಂದರೆ 71 ಎಕರೆ 15 ಗುಂಟೆ ಜಮೀನನ್ನು ಕುಲ ಸಚಿವರು, ರಾಜೀವ್‌ಗಾಂಧಿ ವಿಶ್ವವಿದ್ಯಾಲಯ ಇವರಿಗೆ ವಿಶ್ವವಿದ್ಯಾನಿಲಯದ ಕ್ಯಾಂಪಸ್ ಸ್ಥಾಪನೆಗೆ ಹಸ್ತಾಂತರಿಸಿ, ಉಳಿದ 145.09 ಎಕರೆ ಜಮೀನನ್ನು ವೈದ್ಯಕೀಯ ಶಿಕ್ಷಣ ಇಲಾಖೆಗೆ ಋಣಮುಕ್ತವಾಗಿ ಹಸ್ತಾಂತರಿಸಿ, ಆದೇಶಿಸಿದೆ. ಸದರಿ ಆದೇಶದಲ್ಲಿ ಸಹ High Court ನಲ್ಲಿ ದಾವೆ ಇರುವ ವಿಚಾರವನ್ನು ಉಲ್ಲೇಖಿಸಿರುವುದಿಲ್ಲ ಹಾಗೂ ಲೋಕೋಪಯೋಗಿ ಇಲಾಖೆಯ ಗಮನಕ್ಕೂ ತಂದಿರುವುದಿಲ್ಲ. High Court ನಲ್ಲಿ ವ್ಯಾಜ್ಯ ಹೂಡಿರುವ ಬಗ್ಗೆ ಮಾಹಿತಿಯು ಸಂಬಂಧಿಸಿದ ಇಲಾಖೆಗಳಿಂದ ಯಾವುದೇ ಹಂತದಲ್ಲಿಯೂ ಲೋಕೋಪಯೋಗಿ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ. ಅಲ್ಲದೆ, ದಿ:11/09/2007ರಂದು KIADB ಯು ವೈದ್ಯಕೀಯ ಶಿಕ್ಷಣ ಇಲಾಖೆಗೆ 145.09 ಎಕರೆ ಜಮೀನನ್ನು ಹಸ್ತಾಂತರಿಸಿದೆ. ತದನಂತರ, ಈ ಜಮೀನನ್ನು Assistant Engineer, ಲೋಕೋಪಯೋಗಿ ಇಲಾಖೆಗೆ ಹಸ್ತಾಂತರ ಮಾಡಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಇಂದಿನ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಮೊನ್ನೆ ಹೇಳಿಕೆ ಕೊಟ್ಟಿದ್ದಾರೆ. ನಂತರ, 33.37 ಕೋ.ರೂ.ಗಳನ್ನು ಬಡ್ಡಿರಹಿತ ಸಂಗ್ರಹಣ ಮುಂಗಡವಾಗಿ ನೀಡಿರುವ ಬಗ್ಗೆ ಹೇಳುತ್ತೇನೆ. ಅಂದಿನ ಹಣಕಾಸು ಸಚಿವರು ಮಂಡಿಸಿದ 2007–08ರ ಆಯವ್ಯಯದಲ್ಲಿ Ramnagar Health City ಶೀರ್ಷಿಕೆಯಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯಕ್ಕೆ 43 ಮೂರು ಕೋಟಿ.ರೂ.ಗಳ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಕಾರ್ಯದರ್ಶಿಯವರು, ವೈದ್ಯಕೀಯ ಶಿಕ್ಷಣ ಇಲಾಖೆ ಇವರಿಗೆ ತಿಳಿಸಿದ್ದಾರೆ. ರಾಮನಗರವನ್ನು ಆರೋಗ್ಯ ನಗರವನ್ನಾಗಿ ಅಭಿವೃದ್ಧಿಪಡಿಸಲು ಹಣಕಾಸು ಇಲಾಖೆಯು ತನ್ನ ಸಹಮತಿಯನ್ನು ಸಂ:898/ವೆಚ್ಚ 5,2007, ದಿ:08/05/07ರಂದು ಕೋಟಿ ರೂ.ಗಳನ್ನು ಒದಗಿಸಿದೆ. ದಿ:14/05/07ರಂದು ಜರುಗಿದ ಸಚಿವ ಸಂಪುಟ ಸಭೆಯು ರಾಮನಗರದಲ್ಲಿ ವಿಶ್ವವಿದ್ಯಾನಿಲಯ, ಆರೋಗ್ಯ ಕ್ಯಾಂಪಸ್ ಮತ್ತು ಇತರೆ ಪೂರಕ ಕಟ್ಟಡಗಳ ನಿರ್ಮಾಣಕ್ಕಾಗಿ 310 ಕೋ.ರೂ.ಗಳ ಅಂದಾಜು ಪ್ರಸ್ತಾವನೆಗೆ

ಆಡಳಿತಾತ್ಮಕ ಅನುಮೋದನೆ ನೀಡಿದೆ. ಅದರಂತೆ, ವೈದ್ಯಕೀಯ ಶಿಕ್ಷಣ ಇಲಾಖೆಯು 310 ಕೋ.ರೂ.ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ ಸರ್ಕಾರಿ ಆದೇಶ ಹೊರಡಿಸಿದೆ. ದಿ:16/04/07ರಂದು ಟೆಂಡರ್ ಅರ್ಜಿಗಳನ್ನು ಸ್ವೀಕರಿಸಲು ಕಡೆಯ ದಿನಾಂಕವೆಂದು ನಿಗದಿಪಡಿಸಲಾಗಿತ್ತು. ಅಧ್ಯಕ್ಷರೆ, ನಾನು ಇದನ್ನು detail ಆಗಿ ಹೇಳಲಿಕ್ಕೆ ಹೋಗುವುದಿಲ್ಲ. Notification for land acquisition, 216 ಎಕರೆ 24 ಗುಂಟೆ was issued by KIADB on 27/02/2007. Notice inviting tenders published in paper was issued by PWD on 15/03/07. Tender submitted by Constractors on 04/06/07. Number of Contractors participated and quoted value M/S L & T 377 crores. M/S NCCL ನವರು 318 ಕೋ.ರೂ.ಗಳಿಗೆ ಬಿಡ್ ಮಾಡಿದ್ದಾರೆ. M/S IVRCL ರವರು 369 ಕೋ.ರೂ.ಗಳಿಗೆ ಬಿಡ್ ಮಾಡಿದ್ದಾರೆ. Work order was issued for lowest bidder M/S NCCL quoted value Rs.358 crores was reduced to 333 crores after negotiations and was awarded that is on 25/06/07. Agreement entered with the NCCL No.16 to 2007 and 2008 by PWD that is on 25/06/07. Total land acquired by KIADB is 216 acres. 216 ಎಕರೆಯನ್ನು ದಿ:23/07/07ರಲ್ಲಿ acquire ಮಾಡಿಕೊಂಡಿದ್ದಾರೆ. Mobilization advance ಅನ್ನು ಅವರು ಕೊಟ್ಟಿರುವುದು 29ನೇ ತಾರೀಖು. ಆದರೆ, ಇದರಲ್ಲಿ ಯಾವ ತರಾತುರಿಯನ್ನೂ ತೋರಿಸಿಲ್ಲ. ಆದರೆ, ಏನಾಗಿದೆ ಎಂದರೆ, ಅಷ್ಟರೊಳಗೆ ಸರ್ಕಾರ ಹೋಯಿತು. ಸರ್ಕಾರ ಹೊದ ನಂತರ, ಈ process ನಡೆಯುತ್ತಿದ್ದಾಗ ಈ ಸದನದಲ್ಲಿಯೇ ಮಾಧುಸ್ವಾಮಿಯವರು, ಅವರೆಲ್ಲ ಚರ್ಚೆ ಮಾಡುತ್ತಿದ್ದರು. ಅವರು ಇಲ್ಲಿ ಆ ಸಂದರ್ಭದಲ್ಲಿ, ಯಾವುದೋ ಒಂದು ಸಮಾಜ ಜಮೀನು ಕಳೆದುಕೊಳ್ಳುವ ರೀತಿಯಲ್ಲಿ ತೀರ್ಮಾನ ಮಾಡಲಿಕ್ಕೆ ಹೊರಟಿದ್ದೀರಿ ಎಂದು ಹೇಳಿದ್ದಾರೆ. ನಾನು ಆಗಲೂ ಹೇಳಿದೆ. ರಾಜಕೀಯಕ್ಕಾಗಿ ಕೆಲವರು ಈ ರೀತಿಯ ಕೆಟ್ಟ ಅಭಿಪ್ರಾಯ ಮೂಡಿಸಲಿಕ್ಕೆ ಹೊರಟಿದ್ದಾರೆಂದು ಹೇಳಿದ್ದೆ. Court ಗೆ ಹೋದವರು ಯಾರು? 176 ಎಕರೆ ಜಮೀನಿದ್ದಂಥ 80 ಜನರಲ್ಲಿ ಈಗಾಗಲೇ 30-35 ಜನರು ಹಣ ಪಡೆದಿದ್ದಾರೆ. ಈಗಾಗಲೇ ಹಣ ಅವರಿಗೆ ಸಂದಾಯವಾಗಿದೆ. ಕೆಲವರೆಲ್ಲ ಹಣ ಪಡೆಯಲಿಕ್ಕೆ ಹೋದರೆ, KIADB ಯಲ್ಲಿ ಹಣ ಕೊಡುವ ವಿಷಯದಲ್ಲಿ ಅವರಿಗೆ ನಿರಾಶೆ ಮಾಡಿ ಕಳುಹಿಸಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ, ರೈತರ್ಯಾರೂ Court ಗೆ ಹೋಗಿಲ್ಲ. ಸೋಮಶೇಖರ್ ಎನ್ನುವವರು Real Estate ಮಾಲೀಕರಾಗಿದ್ದು, ಇವರು ಬೆಂಗಳೂರಿನಲ್ಲಿ ವಾಸವಾಗಿದ್ದು ಇವರು Court ಗೆ ಹೋಗಿದ್ದಾರೆ. ಮುಖಂಡಯ್ಯ ಎನ್ನುವವರು ಬೆಂಗಳೂರಿನಲ್ಲಿ ವ್ಯಾಪಾರಸ್ಥರಾಗಿದ್ದು ಅವರು Court ಗೆ ಹೋದವರಾಗಿದ್ದಾರೆ. ವೀರಣ್ಣ, Depot Manager ಆಗಿ ಕೆಲಸ ಮಾಡುತ್ತಿದ್ದು, ಅವರ

ಕಡೆಯಿಂದ ಒಬ್ಬರು Court ಗೆ ಹೋಗಿದ್ದಾರೆ. ಮುಕ್ತಾಯಮ್ಮ ಎನ್ನುವವರ ಇಬ್ಬರ ಮಕ್ಕಳು ಇಬ್ಬರೂ Engineers ಆಗಿದ್ದು, ಅವರೂ ಬೆಂಗಳೂರಿನಲ್ಲಿದ್ದಾರೆ. ಅವರು Court ಗೆ ಹೋಗಿದ್ದಾರೆ. ಮೋಹನ್‌ದಾಸ್, ವ್ಯಾಪಾರಸ್ಥರಾಗಿದ್ದು ಇವರು ಚನ್ನಪಟ್ಟಣದವರಾಗಿದ್ದು, ಅವರು Court ಗೆ ಹೋಗಿದ್ದಾರೆ. ರೈತರಿಂದ ಯಾವುದೇ ರೀತಿ ವಿರೋಧ ಆ ಯೋಜನೆಯನ್ನು ತರುವುದಕ್ಕೆ ಇರಲಿಲ್ಲ. ನಿನ್ನೆ ಮುಖ್ಯಮಂತ್ರಿಯವರು ಇಲ್ಲಿ ಹೇಳಿದರು. ಇವತ್ತು land ಅನ್ನು acquire ಮಾಡುವುದು, land ಅನ್ನು acquire ಮಾಡಿ ಕೊಡುವ ಜವಾಬ್ದಾರಿ ಇದ್ದದ್ದು KIADB ಗೆ. PWD, Work Nodle Agnecy ಅಷ್ಟೇ. Land ಗೂ PWD ಯವರಿಗೂ ಸಂಬಂಧವಿಲ್ಲ. KIADB ಯವರು land ಅನ್ನು PWD ಗೆ ಕೊಟ್ಟ ನಂತರ, hand over ಮಾಡಿದ ನಂತರ, possession of the above land has been handed over free from all encumbrances ಎನ್ನುವ ನೋಟ್ ಅನ್ನು KIADB ಯವರು ವೈದ್ಯಕೀಯ ಇಲಾಖೆಗೆ ಕೊಟ್ಟಿದ್ದಾರೆ. ಅಲ್ಲಿಂದ ಅವರು PWD ಗೆ transfer ಮಾಡಿದ್ದಾರೆ. ಆ ಸಂದರ್ಭದಲ್ಲಿ ಆ land ಬಗ್ಗೆ ಯಾವುದೇ ರೀತಿಯ dispute ಇದೆ ಎನ್ನುವುದಾಗಲಿ ಅಥವಾ ಬೇರೆ ಯಾವುದೇ ರೀತಿಯ ಸಮಸ್ಯೆಗಳಿರಲಿಲ್ಲವೆನ್ನುವುದನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಕೇಳುವುದೇನೆಂದರೆ, ನಿನ್ನೆ ಬಜೆಟ್ ಮೇಲಿನ ಉತ್ತರ ಕೊಡುವ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಸದನದ ಎಲ್ಲರ ಸಹಕಾರ ಬೇಕೆಂದು ಪದೇ ಪದೇ ಬಹುಶಃ ಅವರು ನೂರು ಬಾರಿ ಹೇಳಿರಬಹುದು ಮತ್ತು ನಾನು ಯಾವುದೇ ರೀತಿಯ ರಾಗ, ದ್ವೇಷ ಇಲ್ಲದಿರುವ ಸರ್ಕಾರವನ್ನು ಕೊಡಬೇಕೆಂದಿದ್ದೇನೆ, ನನ್ನ ಮೂಲ ಮಂತ್ರ ಅಭಿವೃದ್ಧಿ ಎನ್ನುವುದನ್ನು ಹೇಳಿದ್ದಾರೆ. ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಾಡಿದ ದಿವಸದಿಂದಲೂ ಇದನ್ನೇ ಹೇಳುತ್ತಿದ್ದಾರೆ. ದ್ವೇಷದ ರಾಜಕೀಯ ಮಾಡುವುದಿಲ್ಲವೆಂದು ಹೇಳುತ್ತಿದ್ದಾರೆ. PWD ಗೆ ಸೇರಿರುವ ಇಬ್ಬರು ಅಧಿಕಾರಿಗಳನ್ನು ನೀವೇನು Suspend ಮಾಡಿದ್ದೀರಿ, ಅದರ ಬಗ್ಗೆ ನಾನು ಪ್ರಶ್ನೆ ಮಾಡಲಿಕ್ಕೆ ಹೋಗುವುದಿಲ್ಲ. ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಯಾವುದೇ ರೀತಿಯ ತಪ್ಪುಗಳನ್ನು ಮಾಡಿಲ್ಲ. ಆದರೂ ಆ ಇಬ್ಬರು ಅಧಿಕಾರಿಗಳನ್ನು suspend ಮಾಡಿದ್ದೀರಿ. ನೀವು ಆ ರೀತಿ suspend ಮಾಡಬೇಕಾಗಿರುವುದಲ್ಲ. KIADB ಯಲ್ಲಾಗಿರುವ ತಪ್ಪಿನ ಬಗ್ಗೆ ಸರ್ಕಾರ ಯಾವುದೇ ರೀತಿಯ ಗಮನ ಕೊಡದೆ, ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳನ್ನು suspend ಮಾಡಿರುವುದು ಎಲ್ಲೋ ಒಂದು ಕಡೆ ಪ್ರಾಮಾಣಿಕವಾಗಿ ಕೆಲಸ ಮಾಡುವ ಅಧಿಕಾರಿಗಳು ಅವರು ಕೆಲಸ ಮಾಡುವುದರಲ್ಲಿ ಮಾನಸಿಕ ಸ್ಥೈರ್ಯ ಕುಂದಿಸುವ ಕೆಲಸ ಆಗಿದೆ. Enquiry ಮಾಡಬೇಕೆಂದು ನೀವು ನಿನ್ನೆ

ತೀರ್ಮಾನ ಮಾಡಿದ್ದೀರಿ. ರೇವಣ್ಣನವರು ಕೇಳಿದ್ದರು ಅದಕ್ಕೋಸ್ಕರವಾಗಿ ಮುಖ್ಯ ಕಾರ್ಯದರ್ಶಿ ಮಟ್ಟದ ನಿವೃತ್ತ IAS ಅಧಿಕಾರಿಯಿಂದ ತನಿಖೆ ನಡೆಸುತ್ತೇವೆಂದು ನೀವು ನಿನ್ನೆ ತೀರ್ಮಾನ ಮಾಡಿದಿರಿ. ಇದರಲ್ಲೇನಾದರೂ ಅವ್ಯವಹಾರವಾಗಿದೆಯೇ? ಇದರಲ್ಲಿ ಯಾವುದೇ ರೀತಿಯ ಅವ್ಯವಹಾರವಾಗಿರುವುದಿಲ್ಲ. ಆಮೇಲೆ, ನಿನ್ನೆ ಮುಖ್ಯಮಂತ್ರಿಯವರು ಮಾತನಾಡುವ ಸಂದರ್ಭದಲ್ಲಿ ಯಾವುದೋ ಒಬ್ಬ ವ್ಯಕ್ತಿಗೆ 33 ಕೋ.ರೂ.ಗಳನ್ನು ಕೊಟ್ಟಿದೆ ಎಂದು ಹೇಳಿದ್ದೀರಿ. ಸರ್ಕಾರದ ಕ್ಯಾಬಿನೆಟ್‌ನಲ್ಲಿ discision ತೆಗೆದುಕೊಂಡು ಎರಡೂವರೆ ಕೋಟಿ ರೂಪಾಯಿಗಳವರೆಗೆ ಬಿಡುಗಡೆ ಮಾಡಬೇಕೆಂದರೆ Secretary Level ನಲ್ಲಿ ಮಾಡುತ್ತಾರೆಂದು ತೋರುತ್ತದೆ. Principal Secretary, PWD ಯವರು ಮಾಡುತ್ತಾರೆಂದು ತೋರುತ್ತದೆ. ಎರಡೂವರೆ ಕೋಟಿ ರೂಪಾಯಿಗಳವರೆಗೆ Finance Department ನಲ್ಲಿಯ Secretary/Principal Secretary ಯವರು ಬಿಡುಗಡೆ ಮಾಡಲು ಅವಕಾಶವಿದೆ. 5 ಕೋಟಿಗಿಂತ ಮೇಲ್ಪಟ್ಟ ಹಣ ಬಿಡುಗಡೆ ಮಾಡಬೇಕಾದರೆ, ಅದನ್ನು ಸಚಿವ ಸಂಪುಟ ಸಭೆಗೆ ಪ್ರಸ್ತಾವನೆ ಇಡಬೇಕು. ಹಣವನ್ನು Finance Department ನಿಂದ ಏನು ಬಿಡುಗಡೆ ಮಾಡುವ ಸಂದರ್ಭದಲ್ಲಿ ಕ್ಯಾಬಿನೆಟ್‌ನಿಂದಲೇ decision ಆಗಿ ಈ ಹಣವನ್ನು ಬಿಡುಗಡೆ ಮಾಡುವುದಕ್ಕೆ ಆರ್ಥಿಕ ಇಲಾಖೆಗೆ ಸರ್ಕಾರದ ಆದೇಶ ಹೊರಡಿಸಿದ್ದಾರೆ ಅದನ್ನು ದಿ:16/08/07ರಲ್ಲಿ ಟಿಪ್ಪಣಿಯ ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆದು ಹೊರಡಿಸಲಾಗಿದೆ. ನಾನು ಇವೆಲ್ಲ detail ಆಗಿ ಓದುವುದಕ್ಕೆ ಹೋಗುವುದಿಲ್ಲ. ಇವೆಲ್ಲ

mobilization advances ಕೊಡುವುದಕ್ಕೆ ಕ್ಯಾಬಿನೆಟ್‌ನಲ್ಲಿಯೇ ತೀರ್ಮಾನ ಮಾಡಿ ಹಣವನ್ನು ಬಿಡುಗಡೆ ಮಾಡಿದ್ದಾರೆ. ಸರ್ಕಾರ ಹೋದ ನಂತರ ಆ ಕೆಲಸವನ್ನು ಮುಂದುವರಿಸುವುದಕ್ಕೆ ಒಬ್ಬ ಗುತ್ತಿಗೆದಾರರು ಆ ಸ್ಥಳಕ್ಕೆ ಹೋದಾಗ ಅಲ್ಲಿಯ ರೈತರು ಅವರಿಗೆ, ನಮಗೆ ಸಂಪೂರ್ಣವಾಗಿ ಹಣ ಕೊಟ್ಟಿಲ್ಲ, ಬಿಡುಗಡೆಯಾಗಿಲ್ಲ, ಹಣ ಕೊಟ್ಟ ನಂತರ ನೀವು ಕೆಲಸ ಮಾಡಿ ಎಂದು ಹೇಳಿದ್ದಾರೆ. ಅವರು 3–4 ಬಾರಿ ಅಲ್ಲಿ ಕೆಲಸ ಮಾಡಲು ಹೋಗಿ ಅಲ್ಲಿಯ ರೈತರಿಗೆ ಹಣ ಕೊಡದಿರುವ ಕಾರಣ ಅವರು ಕೆಲಸ ಮಾಡಲಿಕ್ಕೆ ಅವಕಾಶವಾಗಲಿಲ್ಲ. ನಂತರ, ಅವರು ಯಾರೋ ಒಬ್ಬರು ಗುತ್ತಿಗೆದಾರರಲ್ಲ. ಆ ಗುತ್ತಿಗೆದಾರ, ಕರ್ನಾಟಕದ ರಾಜ್ಯದಲ್ಲಿ 1000 ಕೋ.ರೂ.ಗೂ ಮಿಗಿಲಾಗಿ ಕೆಲಸವನ್ನೇನು ಮಾಡಿದ್ದಾರೆ, ಮೈಸೂರು–ಬೆಂಗಳೂರು ಕಾರಿಡಾರ್ ರಸ್ತೆಯ ಕೆಲಸದ ಗುರಿಯನ್ನು ಕೊಟ್ಟದ್ದನ್ನು ನಿಗದಿತ ಅವಧಿಯಲ್ಲಿ ಗುಣಾತ್ಮಕ ರೀತಿಯಲ್ಲಿ ಕೆಲಸ ಮಾಡಿದ್ದಾರೆ, ಅವರ ಯಾವುದೇ ರೀತಿಯ black mark ಗಳಿಲ್ಲ. ಮೈಸೂರು ಬೆಂಗಳೂರು ಕಾರಿಡಾರ್ ರಸ್ತೆಯನ್ನು ಅವರಿಗೇನು ನಿಗದಿತ ಸಮಯದ ಗುರಿ ಕೊಟ್ಟಿತ್ತು ಅದು ಗುಣಾತ್ಮಕ ರೀತಿಯಲ್ಲಿ ಕೆಲಸ ಮಾಡಿದ್ದಾರೆ ಆ ಗುತ್ತಿಗೆದಾರನ ಬಗ್ಗೆ, ಈ ಸರ್ಕಾರ ಬಂದ ನಂತರ ತಾವು ಎಲ್ಲೋ ಒಂದು ಕಡೆಗೆ, ಈ

ಯೋಜನೆಯಲ್ಲಿ ಆಗಬಾರದಂಥ ಅವ್ಯವಹಾರಗಳು ಆಗಿವೆ ಎನ್ನುವ ರೀತಿಯಲ್ಲಿ ಜನಗಳಿಗೆ ಅನುಮಾನ ಬರುವ ರೀತಿ ಈ ವಿಷಯ ಸಾರ್ವಜನಿಕವಾಗಿ ಪ್ರಸ್ತಾಪಿಸುತ್ತಿದ್ದೀರಿ. ಒಂದು ಕಡೆ ಸರ್ಕಾರ ಬಂದ ಹೊಸದರಲ್ಲಿ ರಾಮನಗರದಿಂದ ಬೇರೆ ಕಡೆಗೆ ಸ್ಥಳಾಂತರಿಸುತ್ತೇವೆ ಎನ್ನುವುದು, ಮತ್ತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರು, ರಾಜೀವ ಗಾಂಧಿ ಯೂನಿವರ್ಸಿಟಿಯನ್ನು ಬಳ್ಳಾರಿಯಲ್ಲಿ ಸ್ಥಾಪಿಸುವುದಕ್ಕೆ ಮುಖ್ಯ ಮಂತ್ರಿಗಳನ್ನು ಒಪ್ಪಿಸುತ್ತೇನೆಂದು ಬಳ್ಳಾರಿಯಲ್ಲಿ ಹೇಳಿಕೆ ಕೊಡುವುದು, ಈ ರೀತಿಯ ಹೇಳಿಕೆಗಳಿಂದ ಈಗಾಗಲೇ ನಾವೇನು ಹತ್ತು ವರ್ಷಗಳನ್ನು ಏನು ಸವೆಸಿದ್ದೇವೆ, ಇವತ್ತೇನು 333 ಕೋಟಿಯ ಕಾಮಗಾರಿಯನ್ನು ಆ ಗುತ್ತಿಗೆದಾರನಿಗೆ ಅವಾರ್ಡ್ ಮಾಡಿದ್ದೀರಿ, ಇನ್ನು ಆರು ತಿಂಗಳು ಒಂದು ವರ್ಷ ಮುಂದಕ್ಕೆ ಹಾಕಿದರೆ ಏನಾಗಬಹುದು? ಇವತ್ತು 333 ಕೋಟಿಗಳ ವೆಚ್ಚ 500 ಕೋಟಿಗೋ 550 ಕೋಟಿಗೋ ಹೋಗುತ್ತದೆ. ಇದರಿಂದ ಯಾರಿಗೆ ನಷ್ಟವಾಗುತ್ತದೆ? ಇಲ್ಲಿ 33 ಕೋಟಿ ಮೊಬಲೈಜೇಷನ್ ಫಂಡ್ಸ್ ಕೊಟ್ಟಿದ್ದೀರಿ, ಇದೇನು ವಿಶೇಷವಾದ ಪ್ರಕರಣವೆಂದು ಕೊಟ್ಟಿರುವುದಲ್ಲ. ಇವತ್ತು ಲೋಕೋಪಯೋಗಿ ಇಲಾಖೆಯಲ್ಲಿ ಈ ರೀತಿಯ ಮೊಬಲೈಜೇಷನ್ ಫಂಡ್ಸ್ ಕೊಟ್ಟಿರುವ ಹಲವಾರು ಘಟನೆಗಳಿವೆ. ಜೊತೆಗೆ ನೀವೇನು ಮೊಬಲೈಜೇಷನ್ ಫಂಡ್ಸ್ 33 ಕೋಟಿ ಹಣ ಕೊಟ್ಟಿದ್ದೀರಿ, ಇದಕ್ಕೆ ಬ್ಯಾಂಕ್ ಗ್ಯಾರಂಟಿ ತೆಗೆದುಕೊಂಡು ಅದರ ಆಧಾರದ ಮೇಲೆ ಕೊಟ್ಟಿದ್ದೀರಿ. ಅವರೇನು ಸಣ್ಣ ಪುಟ್ಟ ಗುತ್ತಿಗೆದಾರರಲ್ಲ. ಇದು ಆ ಭೂಮಿಯ ತೊಂದರೆಯಿಂದ ಕೆಲಸ ಮಾಡಲಿಕ್ಕೆ ತೊಂದರೆಯಾಯಿತು, ಇಲ್ಲಿ ಸಂಪೂರ್ಣವಾಗಿ ಹಣ ಕೊಡದೆ ತೊಂದರೆಯಾಯಿತು. ನಮ್ಮ ಕಾಲದಲ್ಲಿ KIADB ಅಧಿಕಾರಿಗಳಿಗೆ ಸೂಚನೆ ಕೊಟ್ಟೆವು. ಇವತ್ತೇನು ಅಲ್ಲಿ KIADB ನಲ್ಲಿ ಹಣ ಇದೆ, ಸಧ್ಯಕ್ಕೆ ತಾತ್ಕಾಲಿಕವಾಗಿ ಹಣ ಕೊಟ್ಟು ನಂತರ ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಹಣ ಪಡೆದರಾಯಿತು, ಈಗ ಕೆಲಸ ನಿಲ್ಲಿಸುವುದು ಬೇಡ ಇದರಿಂದ ಅನಾವಶ್ಯಕವಾಗಿ ವೆಚ್ಚ ಹೆಚ್ಚಾಗುವುದಕ್ಕೆ ಅವಕಾಶ ಕೊಡುವುದು ಬೇಡ ಎನ್ನುವ ದೃಷ್ಟಿಯಿಂದ ಆ ಸಂದರ್ಭದಲ್ಲಿ ಹೇಳಿದೆವು. ಇದರಲ್ಲಿ ಯಾವುದೇ ರೀತಿಯ ಅವ್ಯವಹಾರಗಳಿಗೆ ಅಸ್ಪದ ಕೊಟ್ಟಿಲ್ಲ. ಇದರಲ್ಲಿ ಯಾವುದೇ ಇಲಾಖೆಯ ಅಧಿಕಾರಿಗಳು ಯಾರು ದುಡ್ಡು ಹೊಡೆಯುವುದಕ್ಕೆ ಮತ್ತೊಂದಕ್ಕೆ ಹೋಗಿರತಕ್ಕಂಥದ್ದಲ್ಲ. ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರು ಇಲ್ಲಿ ಇದ್ದೀರಿ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಳ್ಳುತ್ತೇನೆ. ನಾನು ಇಲ್ಲಿರತಕ್ಕಂಥ ಎಲ್ಲಾ ಕಡತಗಳನ್ನು ಇಲ್ಲಿಂದಲೇ ತಮಗೆ ಕಳುಹಿಸಿ ಬಿಡುತ್ತೇನೆ. ಸರಕಾರದ ಆದೇಶಗಳು ಯಾವ್ಯಾವ ದಿನಾಂಕಗಳಲ್ಲಿ ಆಗಿದೆ, ಸಭೆಗಳು ಯಾವ ರೀತಿ ಮಾಡಿದ್ದೇವೆ, ಇದರ ಬಗ್ಗೆ ಸಂಪೂರ್ಣ ಮಾಹಿತಿ ನಿಮ್ಮ ಕಡೆಗೆ ತಲುಪಿಸುತ್ತೇವೆ. ಈಗಾಗಲೇ ನಿವೃತ್ತ IAS ಅಧಿಕಾರಿಯಿಂದ ಇದರ ಬಗ್ಗೆ ತನಿಖೆ ನಡೆಸುತ್ತೇವೆಂದು ಹೇಳಿದ್ದೀರಿ. ತನಿಖೆ ನಡೆಸಿ ತೊಂದರೆಯಿಲ್ಲ. ಇದಕ್ಕೆ ಯಾವ ರೀತಿಯಿಂದಲೂ ನಮ್ಮ ಅಭ್ಯಂತರವಿಲ್ಲ. ಇಲ್ಲಾಂದ್ರೆ ಇದಕ್ಕೆ ಸದನ ಸಮಿತಿ ರಚಿಸುತ್ತೀರಾ? ಸಂಪೂರ್ಣವಾದ

ವ್ಯವಹಾರಗಳೇನು ಆಗಿವೆ, ಇಲ್ಲಿರುವ ಎಲ್ಲಾ ವಿಷಯಗಳನ್ನು ಪ್ರಸ್ತಾಪಿಸಿ, ಯಾವ್ಯಾವ ರೀತಿ ತೀರ್ಮಾನಗಳು ಆಗಿವೆ, ಇದರಲ್ಲಿ ಯಾವುದೇ ರೀತಿಯ ತಪ್ಪುಗಳು ಎಸಗಿದ್ದರೆ, ಅಂದಿನ ಮುಖ್ಯಮಂತ್ರಿಯಾಗಿ ನಾನು ನಿರ್ಧರಿಸಿದ್ದೆ, ಉಪ ಮುಖ್ಯಮಂತ್ರಿಯಾಗಿ ಇವತ್ತಿನ ಸನ್ಮಾನ್ಯ ಮುಖ್ಯಮಂತ್ರಿಗಳಾಗಿದ್ದವರು ತೀರ್ಮಾನಿಸಿದ್ದಾರೆ. ಲೋಕೋಪಯೋಗಿ ಸಚಿವರಾಗಿದ್ದ ಮಾನ್ಯ ರೇವಣ್ಣನವರು ಮಾಡಿದ್ದಾರೆ. ಈ ತೀರ್ಮಾನಕ್ಕೆ ಎಲ್ಲಾದರೂ ಒಂದು ಕಡೆ ಅನುಮಾನಕ್ಕೆ ಆಸ್ಪದವಾಗುವ ರೀತಿಯಲ್ಲಿ, ಇಲ್ಲಾ ಸರ್ಕಾರಕ್ಕೆ ಯಾವ ರೀತಿಯಲ್ಲಾದರೂ ನಷ್ಟವನ್ನುಂಟು ಮಾಡುವ ರೀತಿಯಲ್ಲಿ ತೀರ್ಮಾನಗಳಾಗಿದ್ದರೆ, ನೀವು ಸದನ ಸಮಿತಿ ರಚಿಸಿ, ಸದನ ಸಮಿತಿ ತೀರ್ಮಾನ ಕೊಡುತ್ತದೆ, ಸದನ ಸಮಿತಿ ಕೊಡುವ ತೀರ್ಮಾನಕ್ಕೆ ನಾನು ತಲೆ ಬಾಗಲಿಕ್ಕೆ ಸಿದ್ಧನಿದ್ದೇನೆ. ನಮ್ಮ ಉದ್ದೇಶ ಏನಿತ್ತು ಎಂದರೆ, ಹತ್ತು ವರ್ಷಗಳ ಕಾಲ ಈ ಒಂದು ವಿಶ್ವವಿದ್ಯಾನಿಲಯದ ಸೌಲಭ್ಯವನ್ನು ಕೊಡುವುದರಲ್ಲಿ ಕಾಲವನ್ನು ಏನು ಕಳೆದಿದ್ದೇವೆ, ಇವತ್ತು ಮತ್ತೆ ಕೆಲಸ ನಿಲ್ಲಿಸುವುದಕ್ಕೆ ನೀವು ಆಸ್ಪದ ಕೊಡುವ ಮೂಲಕ ಈಗಾಗಲೇ ಕೇಂದ್ರ ಸರ್ಕಾರದಿಂದ 80 ಕೋಟಿ ಹಣ ತರುವುದಕ್ಕೆ ಪ್ರಯತ್ನ ಪಟ್ಟು ಆ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದೇವೆ, ಆ ಹಣ ಮತ್ತೆ ವಾಪಸ್ ಕೇಂದ್ರ ಸರ್ಕಾರಕ್ಕೆ ಹೋಗುವುದು ಬೇಡ. ಇವತ್ತು ಪ್ರತಿಯೊಂದು ಕೆಲಸಕ್ಕೆ ನಾವು ಹಣದ ಕೊರತೆಯನ್ನು ಕಾಣುತ್ತಿದ್ದೇವೆ. ರಾಜ್ಯಪಾಲರ ಆಡಳಿತ ಇದ್ದಂಥ ಕಾಲದಲ್ಲಿ 43 ಕೋಟಿ ರೂಪಾಯಿಗಳನ್ನು ಈ ವರ್ಷಕ್ಕೆ ಬಜೆಟ್‌ನಲ್ಲಿ ಏನು ಹಣ ಇಟ್ಟಿದ್ದಾರೆ, ಅಂದಿನ ಉಪ ಮುಖ್ಯಮಂತ್ರಿಗಳಾಗಿದ್ದವರೇ ಕಳೆದ ಬಜೆಟ್‌ನಲ್ಲಿ 43 ಕೋಟಿ ಹಣವನ್ನು ಇಟ್ಟಿದ್ದರು. ಈ ಹಣ ಖರ್ಚು ಮಾಡುವುದಕ್ಕೆ ಈ ಕೆಲಸ ನಿಲ್ಲಿಸುವ ಮೂಲಕ ಪುನಃ ಇನ್ನೊಂದು ಹೊಸದಾಗಿ ಪ್ರೋಸೆಸ್‌ನ್ನು ಪ್ರಾರಂಭಿಸುವ ಮೂಲಕ, ಆ ದಿವಸ ಒಂದು ಟನ್ ಸ್ಟೀಲ್‌ಗೆ 32 ಸಾವಿರ ಬೆಲೆ ಏನು ಇತ್ತು ಇವತ್ತೇನು 50, 52 ಸಾವಿರ ರೂಪಾಯಿ ಆಗಿದೆ. ಹೀಗಾಗಿ ಈ ಕಾಮಗಾರಿಗಳ ವೆಚ್ಚಕ್ಕೆ ಹೆಚ್ಚಿನ ರೀತಿಯಲ್ಲಿ, ನಾವೆಲ್ಲ ಪಾಲುದಾರರಾಗಬೇಕಾಗುತ್ತದೆ. ಆ ದೃಷ್ಟಿಯಿಂದ ನೀವು ಯಾವುದೇ ರೀತಿಯಲ್ಲಿ ತನಿಖೆ ಮಾಡಿ. ಆದರೆ, ಕೆಲಸ ನಿಲ್ಲಿಸುವುದಕ್ಕೆ ದಯವಿಟ್ಟು ಆಸ್ಪದ ಕೊಡಬೇಡಿ. ಆ ಭಾಗದ ಜನರಲ್ಲಿ ಎಲ್ಲೋ ಒಂದು ಕಡೆ ಯಾವುದೋ ಒಂದು ಗುರಿಯನ್ನಿಟ್ಟುಕೊಂಡು ಈ ಕಾಮಗಾರಿಗಳನ್ನು ನಿಲ್ಲಿಸಿದ್ದಾರೆನ್ನುವ ಅನುಮಾನಗಳಾಗಲಿ ಆ ಭಾಗದ ಜನರಿಗೆ ಆಕ್ರೋಶ ಬರುವುದಕ್ಕೆ ಅವಕಾಶ ಕೊಡಬಾರದು ಎಂದು ಸರ್ಕಾರದ ಗಮನಕ್ಕೆ ತರುತ್ತೇನೆ. ನನಗೆ ಬಂದಂಥ ಮಾಹಿತಿ ಪ್ರಕಾರ ನಿನ್ನೆ ಈಗಾಗಲೇ ಹೈಕೋರ್ಟಿನಲ್ಲಿದ್ದಂಥ ಸ್ಟೇ ಏನು ಇದೆ ಅದು ಸಂಪೂರ್ಣ ವೆಕೇಟ್ ಆಗಿದೆ, ಕೆಲಸ ಪ್ರಾರಂಭೀಸುವುದಕ್ಕೆ ಯಾವುದೇ ರೀತಿಯ ತಡೆಗಳಿಲ್ಲ, ಈ ಕೆಲಸ ಪ್ರಾರಂಭೀಸುವುದಕ್ಕೆ ಚಾಲನೆ ಕೊಡಿ. ಯಾವ ದಿನದಿಂದ ಕೆಲಸ ಪ್ರಾರಂಭವಾಗುತ್ತದೆ? ಅದಕ್ಕೆ ಸರಕಾರ ಸರಿಯಾದ ನಿಖರವಾದ ಉತ್ತರವನ್ನು ಸದನದ ಮುಂದೆ ಇಡಬೇಕು, ನೀವೇನು ತನಿಖೆಯನ್ನು ನಿವೃತ್ತ IAS

ಅಧಿಕಾರಿಗಳಿಂದ ಮಾಡಿಸುತ್ತೀರಿ, ಇನ್ನೊಂದು ಬೇಕಾದರೆ ಸದನದ ಸಮಿತಿ ರಚಿಸಿ. ಮತ್ತೆ ಇನ್ನು ಯಾವುದಾದರೂ ರೀತಿಯಲ್ಲಿ ತನಿಖೆ ಮಾಡಬೇಕೆ? ಅದಕ್ಕೂ ನಾವು ತಯಾರಿದ್ದೇವೆ. ಆದುದರಿಂದ, ಈ ವಿಷಯದಲ್ಲಿ ಸಾರ್ವಜನಿಕವಾಗಿ ಏನೋ ಒಂದು ಕೆಟ್ಟ ತೀರ್ಮಾನಗಳನ್ನು ಮಾಡಿದ್ದೇವೆ ಎನ್ನುವ ಅನುಮಾನಗಳು ಬರಬಾರದು ಎಂದು ನಾನು ಈ ಸದನದ ಮುಂದೆ ಸರಕಾರದ ಗಮನಕ್ಕೆ ತರಲಿಕ್ಕೆ ಬಯಸಿ, ನಾನು ಹೆಚ್ಚಿನ ಸಮಯ ತೆಗೆದುಕೊಳ್ಳುವುದಿಲ್ಲ, ಈಗಾಗಲೇ ಹಲವಾರು ಸದಸ್ಯರುಗಳು ಅವರವರ ಕ್ಷೇತ್ರಗಳಿಗೆ ಸಂಬಂಧಪಟ್ಟ ಹಾಗೆ ಅವರ ಜಿಲ್ಲೆಗಳಿಗೆ ಸಂಬಂಧಪಟ್ಟ ಹಾಗೆ ಗಮನ ಸೆಳೆದಿದ್ದಾರೆ. ಆ ದೃಷ್ಟಿಯಿಂದ ಇಲ್ಲಿರತಕ್ಕಂಥ ಎಲ್ಲಾ ವಿಷಯಗಳ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಬಾರದು ಎನ್ನುವ ನಿರ್ಧಾರಕ್ಕೆ ಬಂದು, ಏಕೆಂದರೆ ಈ ದಿವಸ ಸದನ ಮುಗಿಯಬಹುದು. ಆ ದೃಷಿಯಿಂದ ಇವತ್ತು ಅಧ್ಯಕ್ಷರು ಈ ವಿಷಯ ಪ್ರಸ್ತಾಪಿಸಲಿಕ್ಕೆ ನನಗೇನು ಅವಕಾಶ ಕೊಟ್ಟರು ಅದನ್ನು ದುರುಪಯೋಗಪಡಿಸಿಕೊಳ್ಳಬಾರದು ಎನ್ನುವ ದೃಷ್ಟಿಯಿಂದ ನಾನು ಕಟ್‌ಶಾರ್ಟ್ ಮಾಡಿದ್ದೇನೆ. ಕೆಲಸ ಯಾವಾಗ ಪ್ರಾರಂಭಿಸುತ್ತೀರಿ ಎನ್ನುವುದನ್ನು ನಿಖರವಾಗಿ ಹೇಳಬೇಕು. ಆ ಅಧಿಕಾರಿಗಳು ಏನು ತಪ್ಪು ಮಾಡಿಲ್ಲ. ಮಾಹಿತಿಗಳ ಪ್ರಕಾರ ಹೇಳುವುದಾದರೆ, ಇವತ್ತು ಅನ್ಯಾಯವಾಗಿ ನಿರಪರಾಧಿ ಅಧಿಕಾರಿಗಳಿಗೆ ಸಸ್‌ಪೆನ್ಸ್‌ನ್ ಏನು ಮಾಡಿದ್ದೀರಿ, ಅದನ್ನೆ ಇವತ್ತು ರೀವೋಕ್ ಮಾಡುವುದಕ್ಕೆ ಸದನದಲ್ಲಿ ನಮ್ಮ ಬೇಡಿಕೆಯನ್ನು ತಾವು ಗಮನಿಸಬೇಕೆಂದು ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರ ಗಮನಕ್ಕೆ ತಂದು ನನ್ನ ಮಾತು ಮುಗಿಸುತ್ತೇನೆ. ಅಧ್ಯಕ್ಷರೆ ನಿಮಗೆ ನನ್ನ ವಂದನೆಗಳು.

ಶ್ರೀ ಡಿ.ಕೆ.ಶಿವಕುಮಾರ್(ಕನಕಪುರ):- ನಾನು ರಾಜೀವ್‌ಗಾಂಧಿ ಯೂನಿವರ್ಸಿಟಿಯಲ್ಲಿ ಸೆನೆಟ್ ಮೆಂಬರ್ ಆಗಿದ್ದವನು. ಒಂದು ಎರಡು ನಿಮಿಷ ನನಗೆ ಮಾತನಾಡಲು ಅವಕಾಶ ಕೊಡಿ. ಸರಕಾರ ಬಂದ ತಕ್ಷಣ ನಮ್ಮ ರಾಮಚಂದ್ರೇಗೌಡರು ಏಕೋ ಟ್ರ್ಯಾಕನ್ನೆ ಚೇಂಜ್ ಮಾಡುತ್ತಿದ್ದಾರೆ. ಈ ಸಂಸ್ಥೆಗೆ ನಾವು ಗೌರವ ಕೊಡಬೇಕು. ಅವರು ಅಲ್ಲಿ ಕುಳಿತುಕೊಳ್ಳಬಹುದು, ನಾವು ಇಲ್ಲಿ ಕುಳಿತುಕೊಳ್ಳಬಹುದು ಇನ್ನೊಬ್ಬರು ಮತ್ತೊಬ್ಬರು ಕುಳಿತುಕೊಳ್ಳಬಹುದು, ಇದೆಲ್ಲಾ ಬದಲಾವಣೆಯಾಗುತ್ತದೆ. ಆದರೆ, ಸರಕಾರ ಬಂದಂಥ ಸಂದರ್ಭದಲ್ಲಿ, ಕೆಲ ಸರ್ಕಾರಗಳು ತೀರ್ಮಾನ ಮಾಡಿದಾಗ ಒಬ್ಬರ ಕಾಲದಲ್ಲಿ ಆಗಿರುವ ತೀರ್ಮಾನವನ್ನು ಬದಲಾಯಿಸುವುದಿದೆಯಲ್ಲ ಅದು ಆ ಸಂಸ್ಥೆಗೆ ಪ್ರಜಾಪ್ರಭುತ್ವಕ್ಕೆ ದೊಡ್ಡ ಅವಮಾನ. ಹಿಂದೆ ಬೆಂಗಳೂರಿನಲ್ಲಿ ರಾಜೀವ ಗಾಂಧಿ ಯೂನಿವರ್ಸಿಟಿ ಆಗಬೇಕೆಂದು act ಆಗಿತ್ತು. ಇದು ರಾಮನಗರಕ್ಕೆ ಏತಕ್ಕೆ ಹೋಯಿತು? ರಾಮನಗರಕ್ಕೆ ಹೋಗಬೇಕಾದರೆ, ತಮ್ಮ ಸರ್ಕಾರಕ್ಕೆ ಹಿಂದೆ ಇದ್ದ ಸರ್ಕಾರಕ್ಕೆ ಇವತ್ತಿನ ಸರಕಾರಕ್ಕೆ ನಿಮಗೆ ಡಾ:ನಂಜುಂಡಪ್ಪನವರ ವರದಿಯ ಬಗ್ಗೆ ನಾನು ಹೆಚ್ಚಿನ ಶಕ್ತಿಕೊಡುತ್ತೇನೆಂದು ಮಾನ್ಯ ಯಡಿಯೂರಪ್ಪನವರು ಹೇಳಿದರು. ಎಸ್.ಎಂ.ಕೃಷ್ಣ ರವರು ಆ ವರದಿಯನ್ನು

ತಂದರು. ಕುಮಾರಸ್ವಾಮಿಯವರು ಕೂಡ ಆ ವರದಿಗೆ ಶಕ್ತಿ ಕೊಡಬೇಕೆಂದರು. ರಾಮನಗರ ಜಿಲ್ಲೆ ಪ್ರಾರಂಭಿಸಿದ ಮೇಲೆ ಎರಡು ತಾಲ್ಲೂಕುಗಳು, ಒಂದು ಕನಕಪುರ ಮತ್ತು ಮಾಗಡಿ ತಾಲ್ಲೂಕುಗಳು ಇವೆರಡು ಹಿಂದುಳಿದ ತಾಲ್ಲೂಕುಗಳ ಪಟ್ಟಿಯಲ್ಲಿ ಸೇರಿವೆ. ಕರ್ನಾಟಕ ಓಪನ್ ಯೂನಿವರ್ಸಿಟಿ ಮೈಸೂರಿನಲ್ಲಿದೆ, ಅಗ್ರೀಕಲ್ಚರ್ ಯೂನಿವರ್ಸಿಟಿ ಧಾರವಾಡದಲ್ಲಿದೆ, ಹಿಂದೆ ನಾವು ಹೆಣ್ಣು ಮಕ್ಕಳ ಯೂನಿವರ್ಸಿಟಿಯನ್ನು ಬಿಜಾಪುರದಲ್ಲಿ ಮಾಡಿದ್ದೇವೆ. ಈಗ ತಾವು ಬಜೆಟ್‌ನಲ್ಲಿ, ತೋಟಗಾರಿಕೆ ಯೂನಿವರ್ಸಿಟಿಯನ್ನು ಬಾಗಲಕೋಟೆಯಲ್ಲಿ ಮಾಡುತ್ತೇವೆಂದು ಹೇಳಿದ್ದೀರಿ, ಟೆಕ್ನಿಕಲ್ ಯೂನಿವರ್ಸಿಟಿ ಬೆಳಗಾಂ ನಲ್ಲಿ, ಕನ್ನಡ ಯೂನಿವರ್ಸಿಟಿ ಶಿವಮೊಗ್ಗದಲ್ಲಿ, ವೆಟನರಿ ಯೂನಿವರ್ಸಿಟಿ ಬೀದರ್‌ನಲ್ಲಿ, ತುಮಕೂರು ಹಾಗೂ ಮೈಸೂರುಗಳಲ್ಲಿ ರೆಗ್ಯೂಲರ್ ಯೂನಿವರ್ಸಿಟಿಗಳು ಪ್ರಾರಂಭವಾಗಿವೆ. ಹೀಗೆ ಎಲ್ಲಾ ಕಡೆ ಷೇರು ಆಗಬೇಕೆನ್ನುವ ದೃಷ್ಟಿಯಿಂದ, ಇದು ಹಿಂದುಳಿದ ತಾಲ್ಲೂಕುಗಳಾಗಿ ಸೇರಿದ್ದರಿಂದ ಹೊಸ ಜಿಲ್ಲೆಯಾಗಿದ್ದರಿಂದ ರಾಮನಗರದಲ್ಲಿ ಆಗಬೇಕೆಂದು ನಾನು ಕೂಡ ಯೂನಿವರ್ಸಿಟಿಯಲ್ಲಿ ಒಂದು ನಿರ್ಣಯ ಮಾಡಿಸಿದೆ. ಇಲ್ಲಿ ಆಗಬಾರದು ಏಕೆಂದರೆ, ನಾನು ಮಂತ್ರಿಯಾಗಿದ್ದ ಸಂದರ್ಭದಲ್ಲಿ ನಮ್ಮ ಸರ್ಕಾರ ಇದ್ದಾಗ ಕೆಂಗೇರಿಯಲ್ಲಿ ಸುಮಾರು 70 ಎಕರೆ ಜಮೀನು, 57 ಎಕರೆ ಜಮಿನು ನಾವು ಕೊಟ್ಟಿದ್ದೆವು. ಅವರಿಗೆ ಜಮೀನನ್ನು ಹ್ಯಾಂಡ್ ಓವರ್ ಮಾಡಿದ್ದೆವು. ಬೇರೆ ಬೇರೆ ವಿಚಾರಗಳು ಇದ್ದಂಥ ಸಂದರ್ಭದಲ್ಲಿ ಕೊನೆಗೆ ಇಲ್ಲಿ ಆಗಿದೆ. ನಮ್ಮ ಕ್ಷೇತ್ರದಲ್ಲಿಯೇ ಆಗಬೇಕೆಂಬುದು ಮುಖ್ಯಮಂತ್ರಿಯವರದು ಆಗಿರುತ್ತದೆ. ಇದು quite natural ರಾಮನಗರದಲ್ಲಿಯೇ ಆಗಬೇಕೆಂಬ ಮಾನ್ಯ ಆಚಾರ್ಯರವರೂ ಕೂಡ ಈ ಅಸೆಂಬ್ಲಿಯಲ್ಲಿ ಬಿಲ್ ತೆಗೆದುಕೊಂಡು ಬಂದರು. A bill has been passed here. ಇಲ್ಲಿ ಬಿಲ್ ಪಾಸ್ ಮಾಡಿದ ನಂತರ ಕೊನೆಗೆ ಅದು ರಾಮನಗರಕ್ಕೆ ಶಿಫ್ಟ್ ಆಯಿತು. ನಮಗೆ ಒಪ್ಪಿಗೆ ಇದೆಯೋ ಅಥವಾ ಇಲ್ಲವೋ ಅದು ಬೇರೆ, ಏಕೆಂದರೆ, ರಾಜಕಾರಣದಲ್ಲಿ ಬೇಕಾದಷ್ಟು ಡಿಫರೆನ್ಸ್ ಇರುತ್ತದೆ. ಆದರೆ, ಇದೊಂದು ಒಳ್ಳೆಯ ಕೆಲಸವಾಗಿರುವುದರಿಂದ ನಾವು ಇದಕ್ಕೆ ಒಪ್ಪಿದೆವು. ಗುತ್ತಿಗೆದಾರರ ಬಗ್ಗೆ ಮತ್ತು ದುಡ್ಡು, ಡೆಫಾಸಿಟ್ ಕೊಟ್ಟಿರತಕ್ಕಂಥದ್ದರ ಬಗ್ಗೆ ಮತ್ತೊಂದು ಕಡೆ ಚರ್ಚೆ ಮಾಡಿ. ಆದರೆ, ಮೂಲಭೂತವಾಗಿ ನೀವು ಬುಡಕ್ಕೆ ಕೈ ಹಾಕುವುದಕ್ಕೆ ಹೋಗಿರತಕ್ಕಂಥದ್ದು ಬಹಳ ದೊಡ್ಡ ಆಘಾತವನ್ನು ಉಂಟು ಮಾಡುತ್ತದೆ. ಇದನ್ನು ಶಿಫ್ಟ್ ಮಾಡುವುದಕ್ಕೆ ಚಿಂತೆ ಮಾಡಿದರೆ ರಾಮನಗರ ಜಿಲ್ಲೆಯಲ್ಲದೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆ ಇರತಕ್ಕಂಥ ಜನರ್ಯಾರು ನಿಮ್ಮನ್ನು ಕ್ಷಮಿಸುವುದಿಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ಶಿಫ್ಟ್ ಮಾಡುವುದಿಲ್ಲವೆಂದು ಈಗಾಗಲೇ ಹೇಳಲಾಗಿದೆ.

ಶ್ರೀ ಡಿ.ಕೆ.ಶಿವಕುಮಾರ್:- ಶಿಫ್ಟ್ ಮಾಡುವುದಕ್ಕೆ ಚಿಂತನೆ ನಡೆದಿತ್ತಲ್ಲವೆ? ಆಯಿತು. ನೀವು ಶಿಫ್ಟ್ ಮಾಡುವುದಿಲ್ಲವೆಂದರೆ...

(ಗೊಂದಲ)

ಉಪಾಧ್ಯಕ್ಷರು:- ಈಗ ಮಾನ್ಯ ಲೋಕೋಪಯೋಗಿ ಸಚಿವರು ಉತ್ತರ ಕೊಡಲಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಬಹಳ ದೀರ್ಘವಾಗಿ ಮತ್ತು ಆಳವಾಗಿ ಅಭ್ಯಾಸ ಮಾಡಿಕೊಂಡು ಮಾಜಿ ಮುಖ್ಯಮಂತ್ರಿಗಳು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮತ್ತೆ ಇವರೂ ಕೂಡ ಅದಕ್ಕೆ ವಿರೋಧ ಇದೆ ಹೇಳಿದರು. ಆದರೆ, ultimately ಅವರ ಜಿಲ್ಲೆಗೆ ಆಗಬೇಕಾಗಿದೆ. ಈಗ ಅವರು ಅದೇ ಜಿಲ್ಲೆ ಮತ್ತು ಇವರೂ ಕೂಡ ಅದೇ ಜಿಲ್ಲೆಯವರಾಗಿದ್ದಾರೆ. ನಮ್ಮಲ್ಲಿ ಉರ್ದುವಿನಲ್ಲಿ ಒಂದು ಮಾತನ್ನು ಹೇಳುತ್ತಾರೆ. ಅದೇನೆಂದರೆ, "ತೇರಾಬಿ ಮೇರಾ, ಮೇರಾಬಿ ಮೇರಾಚ್ ಹೈ' ಎಂದು ಹೇಳುತ್ತಾರೆ.

ಶ್ರೀ ಡಿ.ಕೆ.ಶಿವಕುಮಾರ್:- ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಹೈಕೋರ್ಟ್‌ನಿಂದ ಕೂಡ ಒಂದು ತೀರ್ಮಾನ ಬಂದಿದೆ. ಲ್ಯಾಂಡ್ ಅಕ್ವಿಜೇಷನ್‌ಗೆ ಏನು ತಕರಾರು ಇಲ್ಲ. Whatever the Government has taken the decision it is right ಎಂದು ಹೇಳಲಾಗಿದೆ. ಆದ್ದರಿಂದ, ತಾವು ದಯವಿಟ್ಟು ರೆಸ್ಟೋರ್ ಮಾಡಿ ಆದಷ್ಟು ಬೇಗ ತಮ್ಮ ಮುಖಂಡತ್ವದಲ್ಲಿ ಇಬ್ಬರೂ ಸೇರಿ ಕೆಲಸ ಪ್ರಾರಂಭ ಮಾಡಿ. ಮತ್ತೆ ನಾವಿಬ್ಬರು ಮತ್ತು ಆ ಜಿಲ್ಲೆಯವರೆಲ್ಲ ಬಂದು ತಮಗೆ ಜೈಕಾರ ಹಾಗೂ ಹಾರ ಹಾಕಿ ಸ್ವಾಗತ ಮಾಡುತ್ತೇವೆ. ಆದಷ್ಟು ಬೇಗ ಆ ಕೆಲಸವನ್ನು ಪ್ರಾರಂಭ ಮಾಡಿಸುವಂಥ ಕೆಲಸವನ್ನು ತಾವು ಪ್ರಾರಂಭ ಮಾಡಬೇಕು. ರಾಜಕಾರಣದಲ್ಲಿ ಅವೆಲ್ಲಾ ಇದ್ದೇ ಇರುತ್ತದೆ. ಅದನ್ನು ನೀವು ನಿಲ್ಲಿಸುವುದಕ್ಕೆ ಆಗುವುದಿಲ್ಲ. ನಾವು ನಿಲ್ಲಿಸಬೇಕೆಂದರೆ ಅದು ಆಗದೇ ಇರತಕ್ಕಂಥ ವಿಚಾರ. ಅದು ರಾಜಕಾರಣವಾಗಿರುತ್ತದೆ. ತಾವು ದಯವಿಟ್ಟು ಆದಷ್ಟು ಬೇಗ ಆ ಕೆಲಸವನ್ನು ಪ್ರಾರಂಭ ಮಾಡಿಸಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ಅಲ್ಲಿಂದ ಬೇರೆ ಕಡೆಗೆ ಶಿಫ್ಟ್ ಮಾಡುವುದಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಡಾ:ಹೆಚ್.ಸಿ.ಮಹದೇವಪ್ಪ (ಟೀನರಸಿಪುರ):- ಮಾನ್ಯ ಅಧ್ಯಕ್ಷರೆ, 1996ನೇ ಇಸವಿಯಲ್ಲಿ ಆರೋಗ್ಯ ವಿಶ್ವವಿದ್ಯಾನಿಲಯ ಸ್ಥಾಪನೆ ಆದಾಗ ಸನ್ಮಾನ್ಯ ದೇವೇಗೌಡರು ಮುಖ್ಯ ಮಂತ್ರಿಗಳಾಗಿದ್ದರು. ಅವರ ಸಚಿವ ಸಂಪುಟದಲ್ಲಿ ನಾನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಯಾಗಿದ್ದೆ. ಆ ಸಂದರ್ಭದಲ್ಲಿ ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ಅನೇಕ ಆರೋಗ್ಯ ಚಟುವಟಿಕೆಗಳಿಗೆ ಭಾಗಿಯಾಗಿರತಕ್ಕಂಥ ಹೆಲ್ತ್ ಅಂಡ್ ಪ್ಯಾರಾಮೆಡಿಕಲ್ ಕಾರ್ಯಕ್ರಮಗಳು ರಾಜ್ಯಾದ್ಯಂತ ಹೆಚ್ಚಾಗಿ ಆಗುತ್ತಿದ್ದವು. ಇದನ್ನು ಮನಗೊಂಡು ಅಂದಿನ ಸರ್ಕಾರದಲ್ಲಿ ಸನ್ಮಾನ್ಯ ದೇವೇಗೌಡರು ಮುಖ್ಯ ಮಂತ್ರಿಯಾಗಿದ್ದಾಗ ಮತ್ತು ಸನ್ಮಾನ್ಯ ಸಿದ್ದರಾಮಯ್ಯನವರು ಹಣಕಾಸಿನ ಸಚಿವರಾಗಿದ್ದಾಗ ಒಂದು ತೀರ್ಮಾನ ಮಾಡಿದ್ದೆವು. ಬೇರೆ ಬೇರೆ ವಿಶ್ವ ವಿದ್ಯಾಲಯಗಳಲ್ಲಿ ಆರೋಗ್ಯ ವಿದ್ಯಾ ಇಲಾಖೆಗಳು ಸೇರಿ ಹೋಗುವುದಕ್ಕಿಂಥ ಹೆಚ್ಚಾಗಿ

ಆರೋಗ್ಯ ವಿಭಾಗಕ್ಕೆ ಅದನ್ನು ಸ್ಟ್ರೀಮ್‌ಲೈನ್, ರೆಗ್ಯುಲೇಟ್ ಮಾಡುವುದಕ್ಕೆ ಮತ್ತು ಅದನ್ನು ಅಪ್‌ಡೇಟ್ ಮಾಡುವುದಕ್ಕೆ ಅವಕಾಶ ಆಗಲೆಂದು 1996ನೇ ಇಸವಿಯಲ್ಲಿ ಆರೋಗ್ಯ ವಿಶ್ವ ವಿದ್ಯಾಲಯವನ್ನು ಪ್ರತ್ಯೇಕವಾಗಿ ಮಾಡಿ ಎಲ್ಲಾ ಆರೋಗ್ಯ ಚಟುವಟಿಕೆಗಳನ್ನು ಶಿಕ್ಷಣವನ್ನು ಸರಿಯಾದ ರೀತಿಯಲ್ಲಿ ಕಾಪಾಡಿಕೊಳ್ಳುವುದಕ್ಕೋಸ್ಕರ 1996ರಲ್ಲಿ ಒಂದು ವಿಶ್ವ ವಿದ್ಯಾನಿಲಯ ಸ್ಥಾಪನೆ ಆಯಿತು. ಆಗ ಸ್ಥಾಪನೆಯಾದಂಥ ಸಂದರ್ಭದಲ್ಲಿ ಈ ವಿಶ್ವ ವಿದ್ಯಾಲಯ ಮೈಸೂರಿನಲ್ಲಿರಬೇಕೆಂದು ತೀರ್ಮಾನವಾಗಿತ್ತು. ಕಾರಣಾಂತರಗಳಿಂದ ಅದು ಬೆಂಗಳೂರಿನಲ್ಲಿ ಇರಲೆಂದು ತೀರ್ಮಾನವಾಗಿತ್ತು. ಏಕೆಂದರೆ, ಉತ್ತರ ಭಾಗದ ಜನರು ಅಲ್ಲಿಂದ ಇಲ್ಲಿಗೆ ಬಂದು ಇಲ್ಲಿಂದ ಮತ್ತೆ ಮೈಸೂರಿಗೆ ಹೋಗುವುದಕ್ಕೆ ಅನಾನುಕೂಲವಾಗುತ್ತದೆಂದು ಮೈಸೂರಿನಲ್ಲಿ ಪ್ರಾರಂಭ ಮಾಡಬೇಕೆಂದು ಇದ್ದರೂ ಕೂಡ ಮೈಸೂರಿನಿಂದ ಬೆಂಗಳೂರಿನಲ್ಲಿಯೇ ಆಗಬೇಕೆಂದು ಆ ದಿವಸ ಸಚಿವಸಂಪುಟದಲ್ಲಿ ತೀರ್ಮಾನವಾಯಿತು. ಆನಂತರವಾದಂಥ ಬೆಳವಣಿಗೆ ಬಗ್ಗೆ ಹಿಂದಿನ ಮುಖ್ಯ ಮಂತ್ರಿಗಳು ಎಲ್ಲಾ ವಿವರಣೆಯನ್ನು ಕೊಟ್ಟಿದ್ದಾರೆ. ಸಚಿವ ಸಂಪುಟದಲ್ಲಿ ಒಂದು ತೀರ್ಮಾನವಾದಂಥ ಸಂದರ್ಭದಲ್ಲಿ ರಾಜ್ಯದ ಒಟ್ಟಾರೆ ಅಭಿವೃದ್ಧಿ ಮತ್ತು ಹಿತವನ್ನು ಗಮನಕ್ಕೆ ತೆಗೆದುಕೊಂಡಾಗ ಅದು ಯಾವುದೇ ಪಕ್ಷದ ಸರ್ಕಾರ ಇರಲಿ ಒಂದು ಸರ್ಕಾರ ಮಾಡಿದರೆ ನಿಷ್ಪಕ್ಷಪಾತವಾಗಿ, ಪಾರದರ್ಶಕವಾಗಿ ರಾಜ್ಯದ ಹಿತವನ್ನು ಗಮನದಲ್ಲಿಟ್ಟುಕೊಂಡು ಚರ್ಚೆ ಮಾಡಿರುವಂಥದ್ದನ್ನು ಮತ್ತೆ ಪದೇಪದೇ ಬದಲಾವಣೆ ಮಾಡದೆ ಸರ್ಕಾರಗಳು ಈ ರೀತಿಯ ಪಾರದರ್ಶಕತೆ ಮತ್ತು ನಿಷ್ಪಕ್ಷಪಾತವಾಂಥ ರಾಜ್ಯದ ಅಭಿವೃದ್ಧಿಯ ವಿಷಯದಲ್ಲಿ ಪದೇಪದೇ ಅದನ್ನು ಬದಲಾವಣೆ ಮಾಡುವುದಕ್ಕೆ ಕೈ ಹಾಕದೇ...

ಅಧ್ಯಕ್ಷರು:– ಬದಲಾವಣೆ ಮಾಡುವುದಿಲ್ಲವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ.

ಡಾ:ಹೆಚ್.ಸಿ.ಮಹದೇವಪ್ಪ:– ಈಗಾಗಲೇ ಈ ಮನೆಯಲ್ಲಿ ಒಂದು ನಿರ್ಣಯ ಮಾಡಿರುವಂಥದ್ದಕ್ಕೆ ಅವರೂ ಕೂಡ ಒಪ್ಪಿಕೊಂಡಿದ್ದಾರೆ. ಆ ವಿಶ್ವ ವಿದ್ಯಾಲಯ ಸ್ಥಾಪನೆಯಾಗುವುದಕ್ಕೆ ನಾವು ಕಾರಣೀಭೂತರು ಮತ್ತೆ ಅದನ್ನು ಸದುದ್ದೇಶದಿಂದ ಮಾಡಲಾಗಿತ್ತು. ಈ ಊರಿಗೆ ಅವರಿಗೆ ಬೇಕೆಂದು ಮತ್ತು ಇಲ್ಲಿ ರಾಜಕೀಯ ಮಾಡಬೇಕೆಂದು ಅಥವಾ ಅಲ್ಲಿ ಎಸ್ಟೇಟ್ ಹಿಡಿಯಬೇಕೆಂಬ ಯಾವ ಉದ್ದೇಶವೂ ಕೂಡ ಆಗ ಇರಲಿಲ್ಲ. ಆದ್ದರಿಂದ, ಇಂಥ ಒಂದು ಸಂಗತಿಗಳಿಗೆ ಅವಕಾಶ ಕೊಡಬಾರದು. ಸಚಿವ ಸಂಪುಟದ ತೀರ್ಮಾನ ಯಾವತ್ತೂ ಕೂಡ overall interst of the State ಆಗಿರುತ್ತದೆ. ಆದ್ದರಿಂದ, ಇದನ್ನು ಗಮನದಲ್ಲಿಟ್ಟುಕೊಂಡು ತೀರ್ಮಾನ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ರೇಣುಕಾಚಾರ್ಯ(ಹೊನ್ನಾಳಿ):- ಮಾನ್ಯ ಅಧ್ಯಕ್ಷರೆ, ರಾಜ್ಯದ ವೈದ್ಯಕೀಯ ವಿದ್ಯಾರ್ಥಿಗಳು ಮತ್ತು ಹೊಸ ರಾಜ್ಯದ ವಿದ್ಯಾರ್ಥಿಗಳು ಇವತ್ತು ಬೆಂಗಳೂರಿನಲ್ಲಿರತಕ್ಕಂಥ ರಾಜೀವ್ ಗಾಂಧಿ ವಿಶ್ವ ವಿದ್ಯಾನಿಲಯವನ್ನು ದಿಢೀರನೆ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಕುಮಾರ ಸ್ವಾಮಿಯವರು ನಿರ್ಧಾರ ತೆಗೆದುಕೊಂಡು ಬದಲಾವಣೆ ಮಾಡಿದರು. ಇವತ್ತಿನದಿವಸ ಹತ್ತಾರು ವಿದ್ಯಾ ಸಂಸ್ಥೆಗಳನ್ನು ನಾವೂ ಸಹ ನಡೆಸುತ್ತೇವೆ. ಬೆಂಗಳೂರಿಗೆ ಬರಬೇಕೆಂದು ವಿದ್ಯಾರ್ಥಿಗಳು ನಮ್ಮ ಹತ್ತಿರ ಬಂದು ಕಣ್ಣೀರು ಹಾಕುತ್ತಿದ್ದಾರೆ. ಮತ್ತೆ ಈಗ ರಾಮನಗರಕ್ಕೆ ಹೋಗಬೇಕಾಗುತ್ತದೆ. ಇದು ಯಾವ ನ್ಯಾಯ? ಮಾನ್ಯ ಮಹದೇವಪ್ಪನವರು ಹೇಳಿದ ಹಾಗೆ 1996ರಲ್ಲಿ ಯಾವ ಉದ್ದೇಶದಿಂದ ರಾಜೀವ್ ಗಾಂಧಿ ವಿಶ್ವ ವಿದ್ಯಾನಿಲಯವನ್ನು ಸ್ಥಾಪನೆ ಮಾಡಲಾಗಿತ್ತೆಂದು ಹೇಳಿದರು. ಆದ್ದರಿಂದ, ನಾನು ಕೇಳುವುದೇನೆಂದರೆ, ಇದು ಬೆಂಗಳೂರಿನಲ್ಲಿಯೇ ಆಗಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ರಾಜಕೀಯ ಉದ್ದೇಶಕ್ಕೋಸ್ಕರ ಮಾಡುವುದು ಬೇಡ. ಯಾವುದೋ ಬಂದರೂ ಅವುಗಳನ್ನು ಹಾಸನ, ಹೊಳೆನರಸೀಪುರ, ರಾಮನಗರದಲ್ಲಿ ಮಾಡುವಂಥದ್ದು ಆಗಬಾರದು. ಇದರಿಂದ ಇಡೀ ರಾಜ್ಯದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ.

ಶ್ರೀ ಡಿ.ಕೆ.ಶಿವಕುಮಾರ್:- ರಾಮನಗರಕ್ಕೆ ಹೋಗಬೇಕೆಂದು ನೀವೇ ಪಾಸ್ ಮಾಡಿದ್ದೀರಿ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ:- ಮಾನ್ಯ ಅಧ್ಯಕ್ಷರೆ, ಎಲ್ಲಾ ವಿಶ್ವ ವಿದ್ಯಾನಿಲಯಗಳನ್ನು ತೆಗೆದುಕೊಂಡು ಬಂದು ಬೆಂಗಳೂರಿನಲ್ಲಿಯೇ ಹಾಕಿ ನಮ್ಮದೇನು ತಕರಾರು ಇಲ್ಲ.

ಅಧ್ಯಕ್ಷರು:- ಮಾನ್ಯ ರೇಣುಕಾಚಾರ್ಯರೆ ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ರೇಣುಕಾಚಾರ್ಯ:- ಅದು ಬೆಂಗಳೂರಿನಲ್ಲಿಯೇ ಆಗಬೇಕು.

ಶ್ರೀ ಹೆಚ್.ಸಿ.ಬಾಲಕೃಷ್ಣ:- ಮಾನ್ಯ ಅಧ್ಯಕ್ಷರೆ, ಎಲ್ಲಾ ವಿಶ್ವ ವಿದ್ಯಾಲಯಗಳನ್ನು ತೆಗೆದುಕೊಂಡು ಬಂದು ಬೆಂಗಳೂರಿನಲ್ಲಿಯೆ ಹಾಕಿ ನಮ್ಮದೇನು ತಕರಾರು ಇಲ್ಲ. ಒಂದು ಬೆಳಗಾಂ, ಶಿವಮೊಗ್ಗ ಇನ್ನೊಂದನ್ನು ಹಾಸನ ಮತ್ತು ರಾಮನಗರಕ್ಕೆ ಕೊಟ್ಟರೆ ತೊಂದರೆಯಾಗುತ್ತದೆಯೇ?

ಶ್ರೀ ರೇಣುಕಾಚಾರ್ಯ:- ರಾಜ್ಯದ ಬೇರೆ ಕಡೆಯಿಂದ ಬೆಂಗಳೂರಿಗೆ ಬಂದು ಮತ್ತೆ ರಾಮನಗರಕ್ಕೆ ಹೋಗಬೇಕಾಗುತ್ತದೆ. ಯಾವ ಉದ್ದೇಶದಿಂದ ಮೈಸೂರಿನಲ್ಲಿ ಮಾಡಬೇಕೆಂದು ತೀರ್ಮಾನವಾಗಿದ್ದರೂ ಸಹ ಮೈಸೂರಿನಲ್ಲಿ ಏಕೆ ಆಗಲಿಲ್ಲ? ರಾಜ್ಯದ ಎಲ್ಲಾ ಕಡೆಯಿಂದ ಬರತಕ್ಕಂಥ ವಿದ್ಯಾರ್ಥಿಗಳು ಬೆಂಗಳೂರಿಗೆ ಬರುವುದಕ್ಕೆ ಅನುಕೂಲವಾಗುತ್ತದೆಂದು ಇಲ್ಲಿ ಮಾಡಬೇಕೆಂದು ತೀರ್ಮಾನ ತೆಗೆದುಕೊಳ್ಳಲಾಗಿದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪಕ್ಷದ ಸಭೆಗೆ ಹೋದಾಗ ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಿದರೆ ಗೊತ್ತಾಗುತ್ತದೆ. ಅವರೆಲ್ಲರೂ ಕೂಡ ಇದರಲ್ಲಿ ಭಾಗಿಗಳಾಗಿದ್ದಾರೆ.

ಶ್ರೀ ರೇಣುಕಾಚಾರ್ಯ:- ಅಲ್ಲಿ ಕಟ್ಟಡ ಇರುವುದರಿಂದ ಅಲ್ಲಿಯೇ ಮಾಡಬೇಕೆಂದು ಈ ಸದನದ ಮುಖಾಂತರ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು:- ಆಯಿತು, ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ರೇವಣ್ಣನವರೆ, ಈಗಾಗಲೇ ಮಾನ್ಯ ಕುಮಾರ ಸ್ವಾಮಿಯವರು ಡಿಟೇಲ್ ಆಗಿ ಮಾತನಾಡಿದ್ದಾರೆ. ಆದ್ದರಿಂದ ಹೆಚ್ಚು ಸಮಯ ತೆಗೆದುಕೊಳ್ಳುವುದಕ್ಕೆ ಹೋಗಬೇಡಿ.

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೆ, ಮಾನ್ಯ ಕುಮಾರ ಸ್ವಾಮಿಯವರ ನೇತೃತ್ವದಲ್ಲಿ ನಾನು ಮತ್ತು ಮಾನ್ಯ ಬಾಲಕೃಷ್ಣ ಹಾಗೂ ಸುಮಾರು 16 ಜನ ಸದಸ್ಯರು ಸಹಿ ಮಾಡಿ ನಿಲುವಳಿ ಸೂಚನೆ ಮೇರೆಗೆ ಚರ್ಚೆ ಮಾಡಲು ಅವಕಾಶ ಕೇಳಲಾಗಿತ್ತು. ಅದನ್ನು ತಾವು ನಿಯಮಾವಳಿ 69ಕ್ಕೆ ತಾವು ಕನ್ವರ್ಟ್ ಮಾಡಿದ್ದೀರಿ. ಈ ವಿಷಯದ ಬಗ್ಗೆ ನಾವು ಪ್ರಸ್ತಾವನೆಯನ್ನು ಮಾಡುವುದಕ್ಕಿಂತ ಮುಂಚಿತವಾಗಿಯೇ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ತನಿಖೆ ಮಾಡುವುದಕ್ಕೆ ನಾನೇನು ಬೇಡವೆಂದು ಹೇಳುವುದಿಲ್ಲ. ಆದರೆ, ಈ ಹೇಳಿಕೆಯನ್ನು ಮಾತನಾಡುವುದಕ್ಕಿಂತ ಮುಂಚಿತವಾಗಿ ಕೊಟ್ಟಿದ್ದಾರೆ. ಈಗಾಗಲೇ ಮಾನ್ಯ ಕುಮಾರ ಸ್ವಾಮಿಯವರು ಇದರ ಬಗ್ಗೆ ಎಲ್ಲಾ ಹೇಳಿದ್ದಾರೆ. 15ನೇ ಮಾರ್ಚ್‌ನಲ್ಲಿ ಟೆಂಡರ್‌ನ್ನು ಕರೆದಿದ್ದಾರೆ. ಆಗ ಇದ್ದಂಥ ಮೆಡಿಕಲ್ ಎಜ್ಯುಕೇಷನ್ ಮಿನಿಸ್ಟರ್‌ರವರು ದಿನಾಂಕ 12.03.2007ರಲ್ಲಿ ಟೆಂಡರ್ ಕರೆಯುವುದಕ್ಕೆ ಅನುಮತಿಯನ್ನು ಕೊಟ್ಟಿದ್ದರು ಎನ್ನತಕ್ಕಂಥದ್ದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಮತ್ತೆ 27ನೇ ಫೆಬ್ರವರಿಯಲ್ಲಿ 4(1) ನೋಟಿಫಿಕೇಷನ್ ಆಗಿದೆ. ಹಿಂದೆ ಕೈಗಾರಿಕಾ ಮಿನಿಸ್ಟರ್ ಆಗಿದ್ದಂಥ ನನ್ನ ಗುರುಗಳು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಂಥ ಸಂದರ್ಭದಲ್ಲಿ ಅವರೇ ನಿಂತು ಇದಕ್ಕೆ ಸಂಬಂಧಪಟ್ಟಂತೆ ಎಲ್ಲವನ್ನು ಹ್ಯಾಂಡ್ ಓವರ್ ಮಾಡಿದ್ದಾರೆ. ಆದ್ದರಿಂದ, ನಾನು ಹೇಳುವುದೇನೆಂದರೆ, ಇದಕ್ಕೆ ಸಂಬಂಧಪಟ್ಟಂತೆ ತನಿಖೆ ಅಥವಾ ಸದನ ಸಮಿತಿಯಿಂದಾದರೂ ಮಾಡಿ ನಮ್ಮದೇನು ಅಭ್ಯಂತರವಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಜಿಲ್ಲಾ ಮಂತ್ರಿಗಳು ಮತ್ತು ಮಾನ್ಯ ಉದಾಸಿಯವರು ಹಾಗೂ ಮಾನ್ಯ ರಾಮಚಂದ್ರೇಗೌಡರು ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು(ಮಾನ್ಯ ಅಬಕಾರಿ ಸಚಿವರು):- ಮಾನ್ಯ ಅಧ್ಯಕ್ಷರೆ, ರಾಮನಗರದಲ್ಲಿ ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುವುದಕ್ಕೆ ಯಾರದೂ ತಕರಾರು ಇಲ್ಲ.

ಶ್ರೀ ಸಿದ್ದರಾಮಯ್ಯ:- ನಮ್ಮದು ಇತ್ತು.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ತಾವು ಸೀನಿಯರ್ ಲೀಡರ್ ಚಕಾರ ಎತ್ತಲಿಲ್ಲ. ಈಗ ನಾನು ಹೇಳುವಾಗ ತಕರಾರು ಇತ್ತು ಎಂದು ಹೇಳುತ್ತೀರಿ. ತಾವು ಸ್ವಲ್ಪವೂ ಇದರ ಬಗ್ಗೆ ಇಲ್ಲಿಯವರೆಗೆ ಮಾತನಾಡಿಲ್ಲ. ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಸ್ಪಷ್ಟೀಕರಣವನ್ನು ಹೇಳಿದ್ದಾರೆ. ಅಲ್ಲಿ ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡುವುದಕ್ಕೆ 100 ಕ್ಕೆ 100 ಭಾಗ ಸರ್ಕಾರ ಬದ್ಧವಾಗಿದೆ. ಕೂಡಲೇ ಆ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಅದರ ನ್ಯೂನ್ಯತೆಗಳು ಏನಿವೆ, ಮಾನ್ಯ ಲೋಕೋಪಯೋಗಿ ಮಂತ್ರಿಗಳು ಹೇಳುತ್ತಾರೆ. ಮಿಕ್ಕಿದ ವಿಚಾರಗಳನ್ನು ತಾವೆಲ್ಲಾ ಏನು ಹೇಳಿದ್ದೀರಿ, ಮಾನ್ಯ ರೇವಣ್ಣನವರಿಗೆ, ಕುಮಾರಸ್ವಾಮಿಯವರಿಗೆ ತಿಳಿಯದೇ ಇರುವಂಥ ವಿಚಾರ ಏನು ಇಲ್ಲ. ಅದಕ್ಕಿಂತ ಜಾಸ್ತಿ ನನಗೆ ಏನೂ ಗೊತ್ತಿಲ್ಲ.

ಶ್ರೀ ಸಿ.ಎಂ.ಉದಾಸಿ(ಲೋಕೋಪಯೋಗಿ ಸಚಿವರು):- ಮಾನ್ಯ ಅಧ್ಯಕ್ಷರೇ ಮಾನ್ಯ ಕುಮಾರಸ್ವಾಮಿಯವರು, ರೇವಣ್ಣನವರು, ಡಿ.ಕೆ.ಶಿವಕುಮಾರ್‌ರವರು ಸವಿವರವಾಗಿ ಮಾತನಾಡಿದ್ದಾರೆ. ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ ಪ್ರಾರಂಭ ಆಗಬೇಕಾಗಿದ್ದನ್ನು ರಾಜ್ಯ ಸರ್ಕಾರ ತಡೆಹಿಡಿಯುತ್ತದೆ ಎನ್ನುವ ಭಾವನೆಯನ್ನು ಕೆಲವು ಸಂದರ್ಭದಲ್ಲಿ ವ್ಯಕ್ತಪಡಿಸಿದ್ದಾರೆ. ಇಲ್ಲಿ ಪ್ರಶ್ನೆ ಬಂದಿರುವುದು, ಅಲ್ಲಿ ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ ಆಗುವುದಕ್ಕೆ ಆಕ್ಷೇಪ ಯಾರದ್ದು ಇಲ್ಲ. ನಮ್ಮ ಸರ್ಕಾರದ್ದು ಆಕ್ಷೇಪ ಇಲ್ಲವೆನ್ನುವುದನ್ನು ಇಲ್ಲಿ ಹೇಳುವುದಕ್ಕೆ ನಾನು ಬಯಸುತ್ತೇನೆ. ಪ್ರಶ್ನೆ ಏನು ಇದೆ ಎನ್ನುವುದನ್ನು ನಾವೆಲ್ಲರೂ ಅರ್ಥಮಾಡಿಕೊಳ್ಳಬೇಕಾಗಿದೆ. ಇಲ್ಲಿಯವರೆಗೆ ಮಾತನಾಡುತ್ತಿರಬೇಕಾದರೆ ಎಲ್ಲ ವಿವರಗಳನ್ನು ಹೇಳುತ್ತಿರಬೇಕಾದರೆ ಸನ್ಮಾನ್ಯ ಕುಮಾರಸ್ವಾಮಿಯವರು ಏನು ಹೇಳಿದರು, ಜಮೀನು ಸ್ವಾಧೀನ ಪಡಿಸಿಕೊಂಡು ಈ ಕೆಲಸವನ್ನು ಪ್ರಾರಂಭ ಮಾಡುವುದನ್ನು ನಾವು ಮಾಡಿದ್ದೇವೆ ಎನ್ನುವ ಮಾತುಗಳನ್ನು ಅವರು ಹೇಳಿದ್ದಾರೆ. ಮೊದಲನೇ ಆತಂಕ ಇರುವುದು ಇಲ್ಲಿಯೆ ಎನ್ನುವುದನ್ನು ನಾನು ಇಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ದಿನಾಂಕ 27-2-2007 ರಂದು 28(1)ರ ಪ್ರಕಾರ notification ಆಗುತ್ತದೆ. Final notification ಆಗಿದೆ. ದಿನಾಂಕ: 23-07-2007ರಂದು 28(8) ರ ಅಡಿಯಲ್ಲಿ Final notification ಆಗುತ್ತದೆ. Final notification ಆಗುವುದಕ್ಕಿಂತ ಪೂರ್ವದಲ್ಲಿ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಿಕ್ಕೆ ಬರುವುದಿಲ್ಲವೆನ್ನುವುದು ಸಾಮಾನ್ಯವಾದ ನಿಯಮ. Notification ಆದರೆ allenation ಗೆ ಅವರಿಗೆ ಅವಕಾಶವಿಲ್ಲವೆನ್ನುವ ಒಂದು ಮಾತನ್ನು ಬಿಟ್ಟರೆ ಬೇರೇನೂ ಇಲ್ಲ, finle ನಲ್ಲಿ ಇದೆ, ಅದನ್ನು ಓದುತ್ತೇನೆ.

(ಗೊಂದಲ)

ಶ್ರೀ ಸಿ.ಎಂ.ಉದಾಸಿ:- ಏನು ತಗಲು ಹಾಕುವುದು...ನಿಮ್ಮಷ್ಟು ಬುದ್ಧಿವಂತ ಎಂದು ನಾನು ಎಲ್ಲೂ ಹೇಳಿಕೊಂಡಿಲ್ಲ ಒಂದು ನಿಮಿಷ. yield ಆಗಿ 28(5) ಏನು ಹೇಳುತ್ತದೆ ಎನ್ನುವುದಕ್ಕಿಂತ 28(8) ಏನು ಹೇಳುತ್ತದೆ ಎನ್ನುವುದರ ಬಗ್ಗೆ ನೋಡಿಕೊಂಡು ಬಿಡಿ. "Where the land has been acquired for the Board, the State Government may after it has been taken possession of the land, may transfer the land to the Board for the purpose for which the land has been acquired" ಎಂದು ಇದೆ. ಹೀಗೆ ಇರಬೇಕಾದಾಗ 28(1) ರಿಂದ ಹಿಡಿದು 28(8) ರವರೆಗೆ ಎಲ್ಲಾ proceedings ನಡೆದಾಗಲೂ ಕೂಡ ಜಮೀನನ್ನು ಪರಭಾರೆ ಮಾಡಲಿಕ್ಕೆ ಅವಕಾಶವಿಲ್ಲ ಎನ್ನುವುದು ಸ್ಪಷ್ಟ ಎನ್ನುವುದು ನನಗೆ ಗೊತ್ತು. 28(8) ಯಾವಾಗ ಆಗಿದೆ ತಮ್ಮ ಗಮನಕ್ಕೆ ನಾನು ತರಲಿಕ್ಕೆ ಇಚ್ಛೆಪಡುತ್ತೇನೆ. ದಿನಾಂಕ 23-07-2007 ರಂದು final notification ಆಗಿದೆ. 25-02-2007 ರಲ್ಲಿ ನೀವು ಭೂಸ್ವಾಧೀನಕ್ಕಾಗಿ ಒಂದು ಆಜ್ಞೆಯನ್ನು ಮಾಡಿದರೆ ತಾವು ಟೆಂಡರ್ ಕರೆದಿರುವುದು ಯಾವಾಗ? ದಿ:15-03-2007 ರಂದು. 15-03-2007ರಲ್ಲಿ ನೀವು ಟೆಂಡರ್‌ನ್ನು ಕರೆಯಬೇಕಾದಾಗ ಭೂಸ್ವಾಧೀನ ನಿಮ್ಮ ಹತ್ತಿರ ಇಲ್ಲ ಅದರ ಜೊತೆಗೆ ಪ್ರಸ್ತುತ ಯೋಜನೆಗೆ ಬೇಕಾಗಿರುವಂಥಾದ್ದರಲ್ಲಿ ಆಡಳಿತಾತ್ಮಕ ಜಮೀನು ಲಭ್ಯತೆ ಜೊತೆಗೆ ನಮ್ಮ plan estimate ಮಂಜೂರಾತಿ ಆಗಬೇಕಾದಾಗ ಆ ಭೂಮಿ ಸ್ವಾಧೀನವಿಲ್ಲದೆ plan estimate ಮಾಡುವುದಕ್ಕೆ ಸಾಧ್ಯತೆ ಆಗುವುದಿಲ್ಲ ಎನ್ನುವುದನ್ನು ಎಲ್ಲಾ ಅಧಿಕಾರಿಗಳು ಅವರ ಗಮನಕ್ಕೆ ತರುವ ಕೆಲಸವನ್ನು ಮಾಡಿದ್ದಾರೆ. ಆದರೆ ಇದನ್ನು 3-05-2007 ರಂದು ಕಾರ್ಯಪಾಲಕ ಅಭಿಯಂತರರ ಶಿಫಾರಸ್ಸಿನ ಮೇರೆಗೆ ಮೂರು bid documentsನ್ನು ಖರೀದಿಸುವುದರ ಕೋರಿಕೆಯ ಮೇರೆಗೆ ಇದನ್ನು ಪ್ರಾರಂಭ ಮಾಡುತ್ತಾರೆ. ಈ ಬಿಡ್ ತೆಗೆಯುವಂಥ ಕೆಲಸವನ್ನು 15-03-2007 ರಂದು ಮಾಡಿದಾಗ ಬಿಡ್ ಡಾಕ್ಯುಮೆಂಟ್‌ನಲ್ಲಿ ಅದನ್ನು specific ಆಗ ಹೇಳಬೇಕಾಗಿತ್ತು. ಇದರಲ್ಲಿ ಪಾಲುದಾರರಾಗಬೇಕಾದಂಥವರಿಗೆ mobilization advance ನ್ನು ನಾವು ಕೊಡುತ್ತೇವೆ ಎನ್ನುವುದನ್ನು ಸ್ಪಷ್ಟವಾಗಿ ಅದರಲ್ಲಿ ಹೇಳಬೇಕಾಗಿತ್ತು. ಹೇಳದೇ ಇರುವುದರಿಂದ ಇದು ಏನಾಗುತ್ತದೆಂದರೆ ಆಡಳಿತಾತ್ಮಕ ಅನುಮತಿ ಇಲ್ಲ ಮತ್ತು ತಾಂತ್ರಿಕ ಅನುಮತಿಯನ್ನು ಪಡೆಯದೇ ಟೆಂಡರ್ ಕರೆಯುವಂಥ ಕೆಲಸ ಪ್ರಾರಂಭವಾಗಿದೆ. ತಮಗೆ ಗೊತ್ತಿರಲಿ ಎಂದು ನಾನು ಇಲ್ಲಿ ಹೇಳುತ್ತೇನೆ. 14-05-2007 ರಂದು ಆಡಳಿತಾತ್ಮಕ ಮಂಜೂರಾತಿ ಇಲ್ಲಿ ಆಗುತ್ತದೆ. ಅದರ ನಂತರ 2-06-2007 ರಂದು ತಾಂತ್ರಿಕ ಮಂಜುರಾತಿ ಆಗುತ್ತದೆ. 3ನೇ ತಿಂಗಳಲ್ಲಿ ಟೆಂಡರ್‌ನ್ನು ಕರೆಯುತ್ತಾರೆ. ಇಲ್ಲಿ ಏನಾಗಿದೆ ಎಂದರೆ ಕೇವಲ drawing ಮೇಲೆ plan estimate ಮಾಡಿದ್ದಾರೆ ಎನ್ನುವುದಕ್ಕೆ ಭೂಸ್ವಾಧೀನವಿಲ್ಲ ಎನ್ನುವುದನ್ನು ನಾವು ಹೇಳಬೇಕಾಗಿಲ್ಲ ಇವತ್ತು ಏನು ರಾಮನಗರದ

ನ್ಯಾಯಾಲಯದಲ್ಲಿ ದಾವಾ ಮಾಡಿರುವಂಥ ವ್ಯಕ್ತಿಗಳು ಏನಿದ್ದಾರೆ, ಆ ವ್ಯಕ್ತಿಗಳು ಹೇಳಿದ್ದಾರೆ. ನಾಗಾರ್ಜುನ ಕನ್‌ಸ್ಟ್ರಕ್ಷನ್‌ದವರು ಕೂಡ ಅದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಇದರ ಮಧ್ಯದಲ್ಲಿ ಒಂದು ಪತ್ರವನ್ನು ಬರೆದಿದ್ದಾರೆ. ಏನೆಂದು ಪತ್ರವನ್ನು ಬರೆದಿದ್ದಾರೆಂದರೆ, 10ನೇ ಅಕ್ಟೋಬರ್ 2007 ಕ್ಕೆ ನಾಗಾರ್ಜುನ ಕನ್‌ಸ್ಟ್ರಕ್ಷನ್‌ದವರು ಒಂದು ಪತ್ರವನ್ನು ಬರೆದಿದ್ದಾರೆ.– "We have received the advance copy of the revised master plan of 9.10.2007 from PWD, Sub-division for the planning purpose. While studying the said master plan following discrepancies are observed in the operating building. The Medical College is located in the open hilly terrain. It is to be relocated....." ಹೀಗೆ ಎಲ್ಲಾ ಹೇಳಿ ನಮ್ಮ ಕಬ್ಜಾದಲ್ಲಿ ಜಮೀನು ಇಲ್ಲವೆನ್ನುವುದನ್ನು ಸ್ಪಷ್ಟವಾಗಿ ಲಭ್ಯವಾಗಿಲ್ಲವೆನ್ನುವುದನ್ನು ಅವರು ಹೇಳುತ್ತಾರೆ. ಹೀಗೆಲ್ಲಾ ಇರಬೇಕಾದರೆ ಯಾವ ಕಾರಣಕ್ಕಾಗಿ 330 ಕೋಟಿ ರೂ.ಗಳ ಟೆಂಡರ್ ಕರೆದಿರುವಂಥವರಿಗೆ 33 ಕೋಟಿ ರೂ.ಗಳಷ್ಟು ಹಣವನ್ನು ಅಡ್ವಾನ್ಸ್ ಆಗಿ ಕೊಟ್ಟಿರಿ? ಕೆಲಸ ಪ್ರಾರಂಭ ಮಾಡುವುದಕ್ಕೆ ಸಾಧ್ಯವಿಲ್ಲ. ನೀವು ಏಕೆ advance ಹಣವನ್ನು ಕೊಟ್ಟಿರಿ ಎನ್ನುವುದಕ್ಕೆ ಏನು ಅರ್ಥ ಹೇಳಬೇಕು. 33 ಕೋಟಿ ರೂ.ಗಳಿಗೆ 9 ತಿಂಗಳಿಗೆ 2 ಕೋಟಿ 80 ಲಕ್ಷ ರೂ.ಗಳ ಬಡ್ಡಿಯಾಗುತ್ತದೆ ತೆರಿಗೆದಾರರ ಹಣ ಸೋರಿಕೆಯಾಯಿತು ಎನ್ನುವ ಆಪಾದನೆಗೆ ಗುರಿಯಾಗಬೇಕಾದ ಪರಿಸ್ಥಿತಿ ಸ್ವಾಭಾವಿಕವಾಗಿ ಎಲ್ಲರಿಗೂ ಬರುತ್ತದೆ ಇದು ಸರ್ಕಾರದ್ದು. ಇದನ್ನು ಅಧಿಕಾರಿಗಳು ಮಾಡಿರಬಹುದು. ಅಧಿಕಾರಿಗಳು ಮತ್ತು ಗುತ್ತಿಗೆದಾರರು ಶಾಮಿಲಾಗಿ ಇದನ್ನು ಮಾಡಿರಬಹುದು. ಬೇರೆ ಯಾರ ಪ್ರಭಾವ ಇದೆ ಎಂದು ನಾನು ಎಲ್ಲಿಯೂ ವಾದ ಮಾಡುತ್ತಿಲ್ಲ. ಇದು ಯಾರಿಂದ ಆಗಿದೆ ಎನ್ನುವುದನ್ನು ವಿಚಾರಣೆ ಮಾಡಿದರೆ ಬರುತ್ತದೆ ಎನ್ನುವ ಉದ್ದೇಶದಿಂದ ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಿರಬಹುದು ಹೊರತು ಸನ್ಮಾನ್ಯ ಮುಖ್ಯಮಂತ್ರಿಗಳು ರಾಮನಗರದಲ್ಲಿರುವ ಕಟ್ಟಡದ ಕಾಮಗಾರಿಯನ್ನು ನಿಲ್ಲಿಸುತ್ತೇವೆಂದು ಎಲ್ಲಿಯೂ ಹೇಳಿಲ್ಲವಲ್ಲ. ಹೀಗೆಲ್ಲಾ ಇರಬೇಕಾದರೆ ಇದರ ಬಗ್ಗೆ ಇಬ್ಬರು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದನ್ನೆ ನಾವು ಭಾರಿ ತಪ್ಪು ಮಾಡಿದ್ದೇವೆ ಎನ್ನುವುದನ್ನು ವ್ಯಕ್ತ ಮಾಡುವ ಅವಶ್ಯಕತೆ ಇಲ್ಲವೆನ್ನುವುದನ್ನು ನಾನು ಭಾವಿಸಿಕೊಂಡಿದ್ದೇನೆ. ಪ್ರಮುಖವಾಗಿ ನಾನು ಇಲ್ಲಿ ಹೇಳುತ್ತೇನೆ. 3–05–2007 ರಂದು ಕಾರ್ಯಪಾಲಕ ಅಭಿಯಂತರರ ಶಿಫಾರಸ್ಸಿನ ಮೇರೆಗೆ ಮೂರು bid documentsನ್ನು ಖರೀದಿಸುವ ಕೋರಿಕೆಯ ಮೇರೆಗೆ ಬಡ್ಡಿರಹಿತ ಮುಂಗಡ ಹಣವನ್ನು ಕೊಡುವುದರ ಮೂಲಕ ಸರಿಯಾಗಿ ಪರಿಶೀಲಿಸದೇ ಶೇಕಡ 15 ರಷ್ಟು ಬಡ್ಡಿರಹಿತ ಮುಂಗಡ ಹಣವನ್ನು ಕೊಡಲು ದಿನಾಂಕ 11–05–2007 ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ. ಅಂದಾಜು ಸವಿವರವಾದ drawings, structural designs, ಮಣ್ಣು ತಪಾಸಣೆ ಇನ್ನಿತರ ಕಾಗದ ಪತ್ರಗಳಿಗೆ ಕೇವಲ 14–05–2007 ರ ಆಡಳಿತಾತ್ಮಕ ಮಂಜೂರಾತಿ

ಆದೇಶ ಅಧೀಕ್ಷಕ ಅಭಿಯಂತರರು ಬೆಂಗಳೂರು ಇವರು 23–05–2007 ರ ಪತ್ರದ ಆಧಾರದ ಮೇಲೆ ಹಾಗೂ 02–06–2007 ರಂದು 310 ಕೋಟಿ ರೂ.ಗಳಿಗೆ ತಾಂತ್ರಿಕ ಮಂಜೂರಾತಿಯನ್ನು ನೀಡಿದ್ದಾರೆ. Plan estimate ಮಾಡುವಾಗ ಇದರಲ್ಲಿ nexus ಇದೆ ಎನ್ನವುದು ಕಂಡು ಬರುತ್ತದೆ. ಇವರಿಗೆ ಪ್ರಸ್ತುತ ಯೋಜನೆಗೆ ಬೇಕಾಗಿರುವ ಜಮೀನಿನ ಲಭ್ಯತೆ ಹಾಗೂ ಸಂಬಂಧಪಟ್ಟಂಥ ತಾಂತ್ರಿಕತೆಯನ್ನು ಪಡೆಯದೆ 15–03–2007 ರಂದು ಟೆಂಡರ್ ಅಧಿಸೂಚನೆಯನ್ನು ಹೊರಡಿಸಿ ಎರಡೂವರೆ ತಿಂಗಳ ನಂತರ ತಾಂತ್ರಿಕ ಮಂಜೂರಾತಿಯನ್ನು ನೀಡಿದ್ದು, ತಾಂತ್ರಿಕ ಮಂಜೂರಾತಿ ಇಲ್ಲದೆ ಕಾರ್ಯಪಾಲಕ ಅಭಿಯಂತರರು ಹೊರಡಿಸಿರುವ ಅಧಿಸೂಚನೆ ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಅಧಿನಿಯಮಕ್ಕೆ ವಿರುದ್ಧವಾಗಿದ್ದರೂ ತಮ್ಮ ಅಧೀನ ಅಧಿಕಾರಿಗಳ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಅಥವಾ ಆಕ್ಷೇಪಣೆಗಳನ್ನು ಮಾಡಿರುವುದಿಲ್ಲ. ಮುಖ್ಯ ಅಭಿಯಂತರರಾಗಿ ಕೆಳ ಮಟ್ಟದ ಅಧಿಕಾರಿಗಳ ಅಕ್ರಮವನ್ನು ಸರಿಪಡಿಸುವ ಬದಲು ಸವಿವರವಾದ ಅಂದಾಜು ಇಲ್ಲದೇ ತಾಂತ್ರಿಕ ಮಂಜುರಾತಿಯನ್ನು ನೀಡಿ ಹಾಗೂ ಶೇಕಡಾ 15 ರ ಮುಂಗಡ ಹಣವನ್ನು ನೀಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಕೆಳಮಟ್ಟದ ಅಧಿಕಾರಿಗಳ ಜೊತೆಯಲ್ಲಿ ಶಾಮೀಲಾಗಿದ್ದಾರೆನ್ನುವುದು ಸ್ಪಷ್ಟವಾಗಿ ಗಮನಕ್ಕೆ ಬಂದಿದೆ. ಆಡಳಿತಾತ್ಮಕ ಹಾಗೂ ತಾಂತ್ರಿಕವಾಗಿ ಇಲಾಖೆಯ ಮುಖ್ಯಸ್ಥರಾಗಿ ಮುಖ್ಯ ಅಭಿಯಂತರರು ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಅಧಿನಿಯಮದ ಅನ್ವಯ ಲೋಕೋಪಯೋಗಿ ಇಲಾಖೆಯ ಸಂಹಿತೆಯ ಅನುಸಾರ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ವಿಫಲರಾಗಿದ್ದಾರೆ. ಸರ್ಕಾರದ ಹಣ ಎಲ್ಲಿ ಉಪಯೋಗವಾಗುತ್ತದೆ ಅಲ್ಲಿಗೆ ಖರ್ಚು ಮಾಡಬೇಕಾದ ನಿಯಮ ಇರುವಾಗ ಇವರು ಜಮೀನಿನ ಕಬ್ಜಾ ಮತ್ತು ತಾಂತ್ರಿಕ ವಿವರ ಇಲ್ಲದೇ ಹಾಗೂ ಗುತ್ತಿಗೆದಾರರು ಈ ಸ್ಥಳದಲ್ಲಿ ಕಾಮಗಾರಿಯನ್ನು ಕೈಗೊಳ್ಳಬಹುದೇ ಅಥವಾ ಹೇಗೆ ಎಂಬುದನ್ನು ಮೌಲ್ಯ ಮಾಪನ ಇಲ್ಲದೇ ಗುತ್ತಿಗೆದಾರರ ಪರವಾಗಿ ಸರ್ಕಾರಕ್ಕೆ ಅವರು ಮುಂಗಡ ಹಣವನ್ನು ನೀಡಬೇಕೆಂದು ಶಿಫಾರಸ್ಸು ಮಾಡಿರುತ್ತಾರೆ. ಈ ಬೃಹತ್ ಯೋಜನೆಗೆ 310 ಕೋಟಿ ರೂ.ಗಳಿಗೆ ತಾಂತ್ರಿಕ ಅನುಮೋದನೆಯನ್ನು ನೀಡುವಾಗ ಈ 310 ಕೋಟಿ ರೂ.ಗಳಿಗೆ how they have arrived ಏಕೆ ಬೇಕು? ಜಾಗವೇ ಇಲ್ಲದೆ ಮಾಡುವುದಕ್ಕೆ ಹೇಗೆ ಸಾಧ್ಯ? ಇದರಲ್ಲಿ ಅವರು ಏನು ಹೇಳುತ್ತಾರೆಂದರೆ encumbrance free land ಕೊಟ್ಟಿದ್ದರೆಂದು ಹೇಳುತ್ತಿದ್ದಾರೆ. ಆದರೆ, ಕೊಟ್ಟಿರುವ ದಾಖಲೆಗಳಲ್ಲಿ ಸರ್ವೆ ನಂ.13 ಮತ್ತು 14ರ ಮೇಲೆ ನ್ಯಾಯಾಲಯದಲ್ಲಿ stay order ಇದೆ. Cutting the tree ಎಂದರೆ, ಗಿಡಗಳನ್ನು ಕಡಿಯಬಾರದೆಂಬ stay ಇದ್ದರೆ, ಇದು ಕೋರ್ಟ್ ಆರ್ಡರ್. ಕೋರ್ಟ್ ಆರ್ಡರ್‌ಗೆ ನಾವು ಗೌರವ ಕೊಡಬೇಕಲ್ಲವೆ? ಅಲ್ಲಿ ಗಿಡಗಳಿಲ್ಲ ಎನ್ನುವುದಾಗಲಿ, ಮತ್ತೊಂದು ಇಲ್ಲ ಎನ್ನುವುದಾಗಲಿ.....

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಹೆಚ್.ಸಿ.ಬಾಲಕೃಷ್ಣರವರು ಮಾತನಾಡಲು ಎದ್ದು ನಿಂತರು)

ಅಧ್ಯಕ್ಷರು:- ಅವರು ಮೊದಲು ಉತ್ತರವನ್ನು complete ಮಾಡಲಿ. ಆಮೇಲೆ ನೀವು ಹೇಳುವಿರಂತೆ.

ಶ್ರೀ ಸಿ.ಎಂ.ಉದಾಸಿ:- ಕಬ್ಜಾ ಇಲ್ಲದ ಭೂಮಿಗೆ ನೀವು ಮಾಡುವುದೇನಿದೆ? ಸ್ವತಃ ಕಂಟ್ರಾಕ್ಟರ್ ಏನು ಹೇಳುತ್ತಾರೆಂದರೆ, "The animal house and the boy's hostel are located at the existing rocks, which is already excavated about 44 mtrs. Below ground level are to be reallocated, peripheral road on the west side to be located, existing Manchanabele canal needs to be realigned.... ಇದನ್ನೆಲ್ಲಾ ಹೇಳಿ ಅಲ್ಲಿ ಏನೂ ಮಾಡಲು ಸಾಧ್ಯವಿಲ್ಲವೆಂದು ಅವರೇ ಹೇಳಿಕೊಂಡಿದ್ದಾರೆ. ನ್ಯಾಯಾಲಯದಲ್ಲಿ ಹೇಳುವುದನ್ನು ಅವರೇ ಹೇಳಿಕೊಂಡಿರುವಾಗ ಇಲ್ಲಿ ಪ್ರಸ್ತಾಪವಾಗುತ್ತಿರುವ ಮಾತುಗಳನ್ನು ಕೇಳಿದೆ. ಈಗ ನಾನು ಹೇಳುವುದಿಷ್ಟೇ ಇವತ್ತಿನ Executive Engineerರವರು ಏನು ಹೇಳಿದ್ದಾರೆಂದರೆ, The SPC of Sail has not been ascertained so far. 29.07.2008ಕ್ಕೆ ಏನು ಹೇಳುತ್ತಾರೆಂದರೆ: "The SPC of SAIL has not been ascertained so far. Therefore, the structural design for 26 buildings has not been approved so far" ಎಂದು ಇವತ್ತೂ ಸಹ ಅವರು ಈ ಮಾತನ್ನು ಹೇಳುತ್ತಾರೆ. ಇದೆಲ್ಲಾ ಇರಬೇಕಾದರೆ, ಇದರಲ್ಲಿ 33 ಕೋಟಿ ರೂಪಾಯಿಗಳನ್ನು ಅಡ್ವಾನ್ಸ್ ಕೊಟ್ಟಿದ್ದು, ಮತ್ತು ತಾಂತ್ರಿಕ, ಆಡಳಿತಾತ್ಮಕ ಅನುಮೋದನೆ ಇಲ್ಲದೆ ಟೆಂಡರ್ ಕರೆದಿದ್ದು, ಇದರಲ್ಲಿ ಅಧಿಕಾರಿಗಳಾಗಲಿ, ಗುತ್ತಿಗೆದಾರರಾಗಲಿ, ಮತ್ತೆ ಯಾರಾದರೂ ಶಾಮೀಲಾಗಿದ್ದರೆ ಅದರ ವಿಚಾರಣೆ ನಡೆಯಬೇಕೆಂಬ ಉದ್ದೇಶದಿಂದ ನಿನ್ನೆ ಮುಖ್ಯಮಂತ್ರಿಗಳು ಹೇಳಿದ್ದಾರೆಯೇ ಹೊರತು ಯಾರನ್ನೂ ದುರುದ್ದೇಶದಿಂದ, ವಿಶ್ವವಿದ್ಯಾನಿಲಯವನ್ನು ಅಲ್ಲಿಂದ ಬೇರೆಡೆಗೆ ವರ್ಗಾವಣೆ ಮಾಡುತ್ತೇವೆಂಬ ಬೇರಾವುದೇ ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಿಲ್ಲ. ಹೀಗೆಲ್ಲಾ ಇರಬೇಕಾದರೆ ಇದನ್ನು ವಿಚಾರಣೆ ಮಾಡಬೇಕಾದರೆ, ಶೀಘ್ರಗತಿಯಲ್ಲಿ ವಿಚಾರಣೆ ಮಾಡಿ, ಇದಕ್ಕೆ ಮತ್ತೆ ಅವಶ್ಯವಿದ್ದರೆ, ಟೆಂಡರ್ ಕರೆದು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದರ ಬಗ್ಗೆ ಎರಡು ಮಾತಿಲ್ಲ. ವಿಚಾರಣೆ ಮಾಡಬೇಕಾದ ಸಂದರ್ಭದಲ್ಲಿ ಇದಕ್ಕೆ ಯಾರ್‍ಯಾರು ಕಾರಣ, 33 ಕೋಟಿ ರೂಪಾಯಿಗಳ ಅಡ್ವಾನ್ಸ್ ಕೊಡುವುದಕ್ಕೆ ಯಾರ್‍ಯಾರು ಕಾರಣರಾಗಿದ್ದಾರೆ, ಅವರ ಮೇಲೆ ಕ್ರಮ ಕೈಗೊಳ್ಳಬೇಕು ಮತ್ತು ಇದೇ condition ಹಾಕಿ ಕೊಡುವುದಾದರೆ, ಮತ್ತೆ ಎಷ್ಟು ಗುತ್ತಿಗೆದಾರರು ಭಾಗಿಯಾಗುತ್ತಾರೆಂದು ಹೇಳಲು ಸಾಧ್ಯವಿಲ್ಲ. ಈ condition ಮೊದಲೇ ಹಾಕಿದ್ದರೆ ರಾಜ್ಯಾದ್ಯಂತ ಬೇಕಾದಷ್ಟು ಜನರು ಸಾವಿರಾರು ಕೋಟಿ ರೂಪಾಯಿಗಳ ವ್ಯವಹಾರ ಮಾಡುವಂತಹ ವ್ಯಕ್ತಿಗೆ ಶೇಕಡ 15ರಷ್ಟು ಅಡ್ವಾನ್ಸ್ ಕೊಡುವಂತಹ ಅವಶ್ಯಕತೆ ಏಕೆ?

ಇದಕ್ಕೆ ಸಾಮಾನ್ಯ ಕಂಟ್ರಾಕ್ಟರ್ ಬರಬಹುದಿತ್ತು. ಇದನ್ನು ಕೊಡುತ್ತಾರೆಂದಿದ್ದರೆ ಇದರಲ್ಲಿ ಬೇಕಾದಷ್ಟು ಜನರು ಭಾಗಿಯಾಗುತ್ತಿದ್ದರು. ಇವರಿಗೇ ಈ ಅಡ್ವಾನ್ಸ್ ಕೊಡುವಂಥಾದ್ದೇನಿತ್ತು? ಇದನ್ನೆಲ್ಲಾ ನೋಡಿದಾಗ ಇದರಲ್ಲಿ ಏನೋ ಗೋಲ್‌ಮಾಲ್ ನಡೆದಿದೆ ಎನ್ನುವಂತಹ ಅನುಮಾನಗಳು ನಮ್ಮನ್ನು ಕಾಡುತ್ತಿರುವುದರಿಂದ ವಿಚಾರಣೆ ಮಾಡುವುದಕ್ಕೆ ನೀವ್ಯಾರೂ ಅನ್ಯಥಾ ಭಾವಿಸಬಾರದು. ಆಡಳಿತ ಮಾಡಬೇಕಾದ ಸಂದರ್ಭದಲ್ಲಿ ನಮ್ಮ ಕೆಳಗಿನ ಅಧಿಕಾರಿಗಳಾಗಲಿ, ನಮ್ಮವರ ಮೇಲೆ ಯಾರಾದರೂ ಪ್ರಭಾವ ಬೀರಿದ್ದರೆ ನಾವು ಅಂಜಬೇಕೇ ಹೊರತು ಇಲ್ಲದಿದ್ದರೆ ಅಂಜಬಾರದು ಎಂಬುದನ್ನು ಇಲ್ಲಿ ಹೇಳುವುದಕ್ಕೆ ನಾನು ಬಯಸುತ್ತಿದ್ದೇನೆ. ಮತ್ತು ಯಾವುದೇ ಕಾರಣಕ್ಕೂ ಸಹ ಇದನ್ನು ಮುಂದೆ ತೆಗೆದುಕೊಂಡು ಹೋಗಬೇಕೆನ್ನುವಂತಹ ವಿಚಾರ ಸರ್ಕಾರಕ್ಕಿಲ್ಲ. ನ್ಯಾಯಾಲಯದಲ್ಲಿ ಅವರು ಬರೆದಿದ್ದನ್ನು ನೀವು ನೋಡಿದಿರಿ. ನ್ಯಾಯಾಲಯದಲ್ಲಿ ಅವರು ಹೇಳಿದ್ದಾರೆ. ರಾಮನಗರದ ನ್ಯಾಯಾಲಯದಲ್ಲಿ ಮೊನ್ನೆ ಅವರು ಏನು ಒಂದು ಅರ್ಜಿ ಹಾಕಿದ್ದಾರೆ....

ಶ್ರೀ ಹೆಚ್.ಡಿ.ರೇವಣ್ಣ:– ಅದು ಯಾವ ದಿನಾಂಕ ಎಂಬುದನ್ನು ಹೇಳಿ.

ಶ್ರೀ ಸಿ.ಎಂ.ಉದಾಸಿ:– 24.09.2007ಕ್ಕೆ ಅವರು ಏನು ಹೇಳುತ್ತಾರೆಂದರೆ, for the terms of the agreement and work order the plaintiff/contractor, the defendant No.9, to obtain a mark out of the land in question. But till October-2007 the plaintiff did not receive any communication from the defendant No.9 in that regard. The defendant No.9 ಅಂದರೆ, the Executive Engineer. ಅವರು ಮಾಡಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿರಬೇಕಾದರೆ, ನಮ್ಮಿಂದ ಹರಕತ್ತಾಗಿದೆ ಎಂಬ ಪ್ರಶ್ನೆಗಿಂತಲೂ ಹೆಚ್ಚಾಗಿ land acquistion ಮಾಡಿ ಅದನ್ನು possessionಗೆ ಕೊಡಬೇಕಾದರೆ ವಿಳಂಬವಾಗಿದ್ದು ಮತ್ತು land ಇಲ್ಲದೆ ಟೆಂಡರ್ ಕರೆದ ಮೂರು ತಿಂಗಳ ನಂತರ ಇವತ್ತು ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಅನುಮೋದನೆ ಕೊಡುವುದಾದರೆ ಇದರ ಹಿಂದೆ ಏನೇನು ಇರಬಹುದು ಎಂಬ ಅನುಮಾನ ಕೇವಲ ಡ್ರಾಯಿಂಗ್ ಮೇಲೆ plan estimate ಮಾಡಿರಬೇಕೆಂಬ ಅನುಮಾನ ನಮ್ಮನ್ನು ಕಾಡುತ್ತಿದೆ. ಈ ಕಾರಣದಿಂದ 33 ಕೋಟಿ ರೂಪಾಯಿಗಳ ಅಡ್ವಾನ್ಸ್ ಕೊಟ್ಟಿದ್ದು ಸಹ ಕಾನೂನುಬಾಹಿರವಾಗಿರುವುದರಿಂದ Karnataka Transparency Act ಪ್ರಕಾರ ಇದೂ ಒಂದು ಲೋಪವೇ ಆಗಿದೆ. ಇದಕ್ಕೆ ಏನು ಕಾರಣ ಹೇಳಿದರು? ಕ್ಯಾಬಿನೆಟ್‌ನಲ್ಲಿ ಅಪ್ರೂವಲ್ ಮಾಡಿದ್ದೀರಿ, ಟೆಂಡರ್‌ದಾರರು ಮೂರು ಮಂದಿ ಇದ್ದಾರೆಂದು ಹೇಳಿದ್ದಾರೆ. ಕ್ಯಾಬಿನೆಟ್‌ನಲ್ಲಿ ಅಪ್ರೂವಲ್ ಮಾಡಿದ್ದಾರೆಂದು ಹೇಳಿರುವಾಗ, ಅದನ್ನು ಕ್ಯಾಬಿನೆಟ್‌ಗೆ ತರಬೇಕಾದ ಸಂದರ್ಭದಲ್ಲಿ ಆತ ಮೊದಲು ಅಡ್ವಾನ್ಸ್ ಕೊಡಬೇಕೆಂದು ಎಲ್ಲಿಯೂ ಕೇಳಿಯೇ ಇಲ್ಲ. ಗುತ್ತಿಗೆದಾರರು ಮೊದಲು ಕೇಳಿಲ್ಲ. ಟೆಂಡರ್ ಕಂಡಿಷನ್‌ನಲ್ಲಿ ಇಲ್ಲದೇ ಇರುವುದನ್ನು ನಂತರ ತರುವ

ಅವಶ್ಯಕತೆಯಾದರೂ ಏನಿತ್ತು? ಮೊದಲು ಆತ ಕೇಳಿಯೇ ಇಲ್ಲವಲ್ಲ. ಟೆಂಡರ್ ಹಾಕಿದ ಮೇಲೆ ಅದು accept ಆದ ನಂತರ ಕೇಳುವುದಕ್ಕೆ ಪ್ರಾರಂಭಿಸುತ್ತಾನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೆ, ಇದರ details ಅಷ್ಟೇನೂ ನಾನು ಓದಲಿಲ್ಲ. ಆದರೆ, ಕೆಲವು ಕಾಗದ ಪತ್ರಗಳನ್ನು ನಾನು ಮುಂಜಾನೆ ನೋಡಿದೆ. ಅವರು ಈಗಾಗಲೇ ಹೇಳಿದರು. ಕ್ಯಾಬಿನೆಟ್ ಸೆಕ್ರೆಟೇರಿಯಟ್‌ನ Business Transaction Rules ಪ್ರಕಾರ 5 ಕೋಟಿಗಿಂತಲೂ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕಾದರೆ, ಮಂಜೂರು ಮಾಡಬೇಕಾದರೆ, ಅದು ಕ್ಯಾಬಿನೆಟ್ ಅಪ್ರೂವಲ್ ಇಲ್ಲದೇ ಆಗುವುದಿಲ್ಲ. 33 ಕೋಟಿ ರೂ.ಮತ್ತು ನಿಮ್ಮ ಅಪ್ರೂವಲ್ ಇಲ್ಲದೆ ಬಿಡುಗಡೆಯಾಗುವುದಿಲ್ಲ. ಒಂದು ವೇಳೆ ಅಧಿಕಾರಿಗಳ ಲೋಪ–ದೋಷಗಳಿದ್ದರೆ ಅವರ ಇತಿಮಿತಿಯಲ್ಲಿ ಕೋಟಿಯೋ, 50 ಲಕ್ಷವೋ ಅವರಿಗೆ ಏನು financial powers ಕೊಡುತ್ತೀರೋ, ಅದನ್ನು ಒಪ್ಪಿಕೊಳ್ಳಬಹುದು. ಆದರೆ, 33 ಕೋಟಿ ಬಿಡುಗಡೆಯಾಗಬೇಕಿದ್ದರೆ, ಕ್ಯಾಬಿನೆಟ್ ಅಪ್ರೂವಲ್ ಇಲ್ಲದೆ, Finance Minister ಅವರ ಅಪ್ರೂವಲ್ ಇಲ್ಲದೆ ಅಥವಾ Finance Secretary ರುಜು ಇಲ್ಲದೇ ಹೇಗಾಯಿತು? ಅಂದರೆ, ಆಗ ನೀವಿಬ್ಬರೂ ಚೆನ್ನಾಗಿದ್ದಿರಿ. ಯಾರ್ಯಾರು? ರೇವಣ್ಣನವರು ಮತ್ತು ನೀವು. ಮಾಡಿಕೊಂಡುಬಿಟ್ಟಿರಿ. ಈಗ ನಮ್ಮ ಮುಂದೆ ಬಂದು ನೀನು ಹಾಗೆ ಮಾಡಿದ್ದೀಯಾ, ಇದು ಹಾಗಿದೆ, ಇದು ಹೀಗೆದೆ ಎಂದರೆ ನಾವೇನು ಹೇಳಬೇಕು? ಇದಕ್ಕೆ ಇಬ್ಬರೂ ಹೊಣೆಗಾರರೇ. ಇದು ಮೊದಲನೆಯದು. ಎರಡನೆಯದು, ಕೇಳುತ್ತೇನೆ. Land approval ಆಗಲಾರದೆ ಇದನ್ನು ಕೊಟ್ಟರು. Mobilize ಮಾಡತಕ್ಕಂಥ amount ಅನ್ನು ಗುತ್ತಿಗೆದಾರರು ಕೇಳಲೇ ಇಲ್ಲ, ಅದನ್ನೂ ಇವರು ಕೊಟ್ಟರು. ಇವೆಲ್ಲವನ್ನೂ ಕೊಡಬೇಕೆಂದರೆ, ನೀವೆಲ್ಲರೂ ಪರಸ್ಪರ ಮಾತನಾಡದೆ ಕೊಡಲು ಸಾಧ್ಯವೇ ಇಲ್ಲ. ಅನಂತರ, ಮೂರನೆಯದಾಗಿ, land ಎಲ್ಲಾ acquire ಆಗಿ ಕೇವಲ a part of land ಮಾತ್ರ KIADBಯಿಂದ ಆಗಬೇಕು ಎನ್ನುವಂಥಾದ್ದು. ಅದರೊಳಗೆ ನಾನು ನೋಡಿದೆ. ಮತ್ತು ಅಷ್ಟು portion ಅಂದರೆ, ಅದು 40 ಎಕರೆ ಇರಬಹುದು, 30 ಎಕರೆ ಇರಬಹುದು. out of hundreds of acre, a portion of land ಮಾತ್ರ ಆಗಿಲ್ಲ. ಉಳಿದದ್ದೆಲ್ಲವನ್ನೂ ಕೊಟ್ಟಿದ್ದಾರೆ ಎನ್ನುವುದು ಆಯಿತು. ನೀವು ಹೇಳಿದ್ದನ್ನೇ ನಾನೂ ಹೇಳಿದ್ದೇನೆ. ಅಭ್ಯಾಸ ಮಾಡಿಲ್ಲವೆಂದು ಅದಕ್ಕೋಸ್ಕರವೇ ನಾನು ಹೇಳಿದೆ. ಅವರು ತೋರಿಸಿದ್ದು, ಮತ್ತು ನೀವು ಹೇಳಿದ್ದನ್ನು ಕೇಳಿದ್ದೇನೆ ಅಷ್ಟೆ. ಅದಕ್ಕೆ ನಾನು ಕೇಳುವುದೇನೆಂದರೆ, ಇಷ್ಟೆಲ್ಲಾ ಆದಮೇಲೂ Finance Departmentನವರು ಇದನ್ನು ತಿಳಿದುಕೊಳ್ಳದೆ ದುಡ್ಡು ಏಕೆ ರಿಲೀಸ್ ಮಾಡಿದರು? ಅಧ್ಯಕ್ಷರೆ, ಇದು ಯಾವಾಗಲೂ ಏನಾಗುತ್ತದೆಂದರೆ, ಹೀಗೆ ಬೇಕಾದವರು ಯಾವಾಗ ಬೇಕೋ ಆಗ ರಿಲೀಸ್ ಮಾಡುವುದು, ಕೆಲವು ಸಲ

ಏನೆಂದರೆ, ಹಣವನ್ನು ರಿಲೀಸ್ ಮಾಡುವಾಗ ನಮಗೆಲ್ಲರಿಗೂ ಪುಸ್ತಕದಲ್ಲಿ 5 ಕೋಟಿ, 10 ಕೋಟಿ, 20 ಕೋಟಿ ತೋರಿಸುವುದು. ಈಗ ಉದಾಸಿಯವರಿಗೆ, ರೇವಣ್ಣನವರಿಗೆ ಬೇಕಾಯಿತೆಂದರೆ, ಒಂದೇ ಕೋಟಿ ತೋರಿಸುವುದು. 1 ಕೋಟಿ ತೋರಿಸಿ 10 ಕೋಟಿ ಖರ್ಚು ಮಾಡುವುದು! ಆದರೆ, 100 ಕೋಟಿ ತೋರಿಸಿದಲ್ಲಿ ಎರಡೇ ಕೋಟಿ ಖರ್ಚು ಮಾಡುವುದು! ಇಲ್ಲಿಂದ ಎಲ್ಲವನ್ನೂ ಒಯ್ದು transfer ಮಾಡುವುದು. ಅದಕ್ಕೋಸ್ಕರ, ದಯವಿಟ್ಟು ನೀವು ಅದನ್ನು ಹೇಳಿಕೊಂಡು ನಿಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಬೇಡಿ. ನೀವು ಏನು ತಪ್ಪು ಮಾಡಿದ್ದೀರಿ, ಅದನ್ನೂ ಕೂಡ ಒಪ್ಪಿಕೊಳ್ಳಿ. ಇದು ನಿಮ್ಮಿಂದಲೂ ತಪ್ಪಾಗಿದೆ, ಲೋಪವಾಗಿದೆ, 5 ಕೋಟಿಗಳಿಗೆ ಮಾತ್ರ ನಿಮಗೆ ಅಧಿಕಾರವಿದ್ದರೂ 33 ಕೋಟಿ ನಿಮ್ಮ ಇಲಾಖೆಯ ಅನುಮತಿಯಿಂದ, ನಿಮ್ಮ signatureನಿಂದಲೇ ಹೋಗಿದೆ ಎನ್ನುವುದನ್ನು ತಾವು ಒಪ್ಪಿಕೊಳ್ಳಿ.

ಶ್ರೀ ಸಿ.ಎಂ.ಉದಾಸಿ:- ಸನ್ಮಾನ್ಯ ಸಭಾಧ್ಯಕ್ಷರೆ, ಇದು ಕ್ಯಾಬಿನೆಟ್‌ಗೆ ಬಂದು ಆಗಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಇದು ಕ್ಯಾಬಿನೆಟ್ ಮುಂದೆ ಬಂದು ಅದಕ್ಕೆ ಅಪ್ರೂವಲ್ ಕೊಟ್ಟಿದ್ದಾರೆ ಎನ್ನುವುದಕ್ಕೆ ನನ್ನದು ಎರಡು ಮಾತಿಲ್ಲ. ಪ್ರಶ್ನೆ ಏನು ಇದೆ ಎಂದರೆ ಈಗ ತಾಂತ್ರಿಕ ಒಪ್ಪಿಗೆ ಇಲ್ಲದೆಯೇ Financial approval ಆಗದೆಯೇ ಇದರ ಟೆಂಡರ್ ಕರೆದಿದ್ದು ಮೊದಲನೆಯ ತಪ್ಪು. ಇದರ ಜೊತೆಗೆ 5 ಕೋಟಿ ಮೇಲೆ ಟೆಂಡರ್ ಕೊಡಬೇಕಾದರೆ ಕ್ಯಾಬಿನೇಟ್ ಅಪ್ರೂವಲ್ ತೆಗೆದುಕೊಂಡು ಮಾಡಬೇಕಾಗಿತ್ತು. ಆದರೂ ಇದನ್ನು ಮಾಡಿದ್ದಾರೆಂದರೆ ಆ ಟೆಂಡರ್ documents ಬಗ್ಗೆಯೇ disputed point ಬಂದ ಮೇಲೆ, ಅದು ನಮ್ಮ ಗಮನಕ್ಕೆ ಬಂದ ಮೇಲೂ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಡಿ ಎಂದರೆ ಯಾವ ರೀತಿಯಾಗಿ ವಾದ ಮಾಡುತ್ತೀರೊ ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನೀವು Secretariat Transaction Rules ಓದಲಾರದಯೆ ಅಪ್ರೂವ್ ಹೇಗೆ ಮಾಡುತ್ತೀರಿ? ನಿಮ್ಮ Secretariat Transaction Rules ಪ್ರಕಾರ...

ಶ್ರೀ ಸಿ.ಎಂ.ಉದಾಸಿ:- ತಪ್ಪು ಮಾಹಿತಿ ಕೊಟ್ಟಿರುವುದನ್ನು ಈಗ ಓದಲು ಪ್ರಾರಂಭ ಮಾಡುತ್ತಿದ್ದೇನೆ. ತಪ್ಪು ಮಾಹಿತಿ ಕೊಟ್ಟಿದ್ದಾರೆ ಎಂಬುದು ಗೊತ್ತಾಗಿದೆಯೆಂದು ಅದನ್ನು ಈಗ ಓದುತ್ತಿದ್ದೇನೆ.

ಡಾ:ಹೆಚ್.ಸಿ.ಮಹದೇವಪ್ಪ:- ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅಲ್ಲಿ ಗುತ್ತಿಗೆದಾರ ನನಗೆ negotiation ನಲ್ಲಿ ಮುಂಗಡವಾಗಿ ಹಣ ಕೊಡಿ ಎಂದು ಕೇಳಿಲ್ಲ. ಬಡ್ಡಿಯನ್ನೂ ಹಾಕಿಲ್ಲ. ಇವರು 33 ಕೋಟಿ ಕೊಡಬೇಕಾಗಿದ್ದರೆ ಹಣಕಾಸು ಇಲಾಖೆ ಏನು ಮಾಡುತ್ತಿತ್ತು? ಇವೆಲ್ಲವನ್ನು ಹಣಕಾಸು ಇಲಾಖೆಯವರು ನೋಡದೇ ಏನು ಮಾಡುತ್ತಿದ್ದರು?

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಲೋಕೋಪಯೋಗಿ ಸಚಿವರು ಸಭೆಗೆ ಸರಿಯಾದ ವಿಷಯವನ್ನು ಹೇಳಬೇಕು. ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯವು Medical Education Departmentಗೆ ಸಂಬಂಧಿಸಿದ್ದು. ತಮ್ಮ ಮುಖ್ಯಮಂತ್ರಿಯವರು ನಿನ್ನೆ ಸದನದಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. 15.03.2007ರಲ್ಲಿ ಕಾಮಗಾರಿ ಟೆಂಡರ್ ಅಧಿಸೂಚನೆ ಆಡಳಿತಾತ್ಮಕ ಅನುಮೋದನೆ ಇಲ್ಲದೆಯೆ ಕೊಟ್ಟಿದ್ದಾರೆ ಎಂದು ನಿನ್ನೆ ಹೇಳಿಕೆ ಕೊಟ್ಟಿದ್ದಾರೆ. ಅದಕ್ಕೆ ಸೀಮಿತವಾಗಿ ತಾವು ಹೇಳಿದ್ದೀರಿ, ಅದನ್ನು ಒಪ್ಪಿಕೊಳ್ಳುತ್ತೇನೆ. 12.03.2007 ರ ಮೆಡಿಕಲ್ ಎಜ್ಯುಕೇಷನ್ ಕಾರ್ಯದರ್ಶಿಯವರ ಪತ್ರವನ್ನು ಓದುತ್ತೇನೆ. 1457/2007. 12.03.2007 ರ ಪತ್ರವನ್ನು ಲಗತ್ತಿಸಿದೆ. ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ತೀರ್ಮಾನ. ಬೇಕಾದರೆ ನಿಮಗೆ ಅದರ ಪ್ರತಿಯನ್ನು ಕಳುಹಿಸಿಕೊಡುತ್ತೇನೆ. 12.03.2007 ರಲ್ಲಿ ಆರೋಗ್ಯ ಇಲಾಖೆಯ ಮೆಡಿಕಲ್ ಎಜ್ಯುಕೇಷನ್ ಕಾರ್ಯದರ್ಶಿಯವರು ಈ ಟೆಂಡರ್ ಕರೆಯಲು ಅನುಮತಿ ಕೊಟ್ಟಿರುವುದನ್ನು ಮೊದಲು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದರ ಪ್ರತಿಯನ್ನು ಬೇಕಾದರೆ ತಮಗೆ ಕಳುಹಿಸಿಕೊಡುತ್ತೇನೆ. ಬೇಕಾದರೆ ನಿಮ್ಮ ಕಾರ್ಯದರ್ಶಿಯವರಿಂದ ಅದನ್ನು ತರಿಸಿಕೊಳ್ಳಿ. 15.03.2007ರಲ್ಲಿ P.W.D. ಕಾರ್ಯದರ್ಶಿಯವರು ಕೊಟ್ಟಿರುವ ಪತ್ರ ಇದೆ. ಮುಖ್ಯ ಇಂಜಿನಿಯರ್ ರವರಿಗೆ ಈ ರೀತಿ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದಿಂದ 100 ಕೋಟಿ 2007 ರಲ್ಲಿ 2008 ರಲ್ಲಿ 20 ಕೋಟಿ ಆರ್ಥಿಕ ಸಹಾಯ ನಿರೀಕ್ಷಿಸಿ ಕೇಂದ್ರದಿಂದ, ರಾಜ್ಯ ಸರ್ಕಾರದಿಂದ 55 ಕೋಟಿ 2007–2008ರಲ್ಲಿ, ಈ ರೀತಿ ದುಡ್ಡು ಇದೆ ಟೆಂಡರ್ ಕರಿಯಪ್ಪ ಎಂದು P.W.D ಕಾರ್ಯದರ್ಶಿ, 69, ಲೋಕೋಪಯೋಗಿ ಇಲಾಖೆ, ಇಪಿಎ:2007, ದಿನಾಂಕ:15.03.2007. ದಯಮಾಡಿ ನೀವು ಇದನ್ನು ನೋಟ್ ಮಾಡಿಕೊಳ್ಳಿ. ತಾವು ತಾಳ್ಮೆಯಿಂದಿರಿ. ನೀವು ಎರಡು ಸಲ ಲೋಕೋಪಯೋಗಿ ಸಚಿವರಾಗಿದ್ದರು. ಇದರ ಪ್ರತಿಯನ್ನು ನಿಮಗೆ ಕಳುಹಿಸುತ್ತೇನೆ. ನೋಟ್ ಮಾಡಿಕೊಳ್ಳಿ. 12.03.2007 ರಲ್ಲಿ ಮೆಡಿಕಲ್ ಎಜ್ಯುಕೇಷನ್ ಕಾರ್ಯದರ್ಶಿಯವರು ಮೆಡಿಕಲ್ ಎಜ್ಯುಕೇಷನ್ ಸಚಿವರ ಅನುಮತಿಯನ್ನು ತೆಗೆದುಕೊಂಡು ಪತ್ರವನ್ನು ಕೊಟ್ಟಿದ್ದಾರೆ. ಬೇಕಾದರೆ ಫೈಲ್ ತೆಗೆದುಕೊಂಡು ಬಂದು ಇಡಿ. ಎರಡನೆಯದ್ದು, 15.03.2007ರಂದು ಟೆಂಡರ್ ಕರೆದು ನೋಟಿಫಿಕೇಷನ್ ಹಾಕಿದ್ದಾರಲ್ಲ, 15.03.2007ರಲ್ಲಿ ಟೆಂಡರ್ ಹಾಕಿದ್ದಾರೆ. ಟೆಂಡರ್ ಹಾಕಿದಾಗ ಯಾರೂ Mobilization advanceನ್ನು ಹೇಳುವುದಿಲ್ಲ. ಆದರೆ, ಟೆಂಡರ್ booklet ಕೊಡುತ್ತಾರಲ್ಲ ಆ bookletನಲ್ಲಿ ಇದು ಇದೆಯೋ ಇಲ್ಲವೋ ಎನ್ನುವುದನ್ನು ಸಭೆಯ ಮುಂದಿಡಿ. 15.03.2007ರಲ್ಲಿ ಟೆಂಡರ್ bookletನಲ್ಲಿರುವ ಕಂಡೀಷನ್ ಇದೆಯಲ್ಲ ಆ ಟೆಂಡರ್ bookletನ್ನು ನಾಲ್ಕು ಜನ ಗುತ್ತಿಗೆದಾರರಿಗೆ ಕೊಡುತ್ತೀರಲ್ಲ ಅದರಲ್ಲಿ 33 ಕೋಟಿ advance ಗೆ include ಆಗಿತ್ತೋ ಇಲ್ಲವೋ

ಎಂಬುದನ್ನು ಸಭೆಯ ಮುಂದೆ ಟೆಂಡರ್ booklet ನ್ನು ಇಡಿ. ಇಲ್ಲ ಎಂದರೆ ನೀವು ಏನು ಹೇಳಿದರು ಭಾಗಿಯಾಗುತ್ತೇನೆ. ಸಭೆಯನ್ನು ತಪ್ಪುದಾರಿಗೆ ಎಳೆಯಬಾರದು.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ನೀವು ಹೇಳುವುದು ಅವರು ಹೇಳುವುದು dispute ಮಾಡುತ್ತಿದ್ದೀರಿ. ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಇಲ್ಲಿ ಇಟ್ಟುಬಿಡಿ ನೋಡೋಣ. ನಮಗೂ ಗೊತ್ತಾಗಲಿ, ಯಾರ್‍ಯಾರು ಏನೇನು ಹೊಡೆದಿದ್ದಾರೆ ಎಂಬುದು ಗೊತ್ತಾಗಲಿ.

ಶ್ರೀ ಸಿ.ಎಂ.ಉದಾಸಿ:- ಇದರ ಅವಶ್ಯಕತೆ ಇಲ್ಲ.

ಶ್ರೀ ಸಿದ್ದರಾಮಯ್ಯ:- Let us examine the documents. Place all the documents before the House. We will go through the documents.

ಶ್ರೀ ಹೆಚ್.ಡಿ.ರೇವಣ್ಣ:- ಅದು ಸರಿ. ಇದರ ಬಗ್ಗೆ ಸದನದ ಸಮಿತಿ ಮಾಡಿ.

ಶ್ರೀ ಸಿದ್ದರಾಮಯ್ಯ:- We will find out. ಯಾರು, ಏನೇನಾಗಿದೆ, ಅಧಿಕಾರಿಗಳು ಯಾರು, ಅವರು ನೀವು ಏನೇನು ಎಂಬುದೆಲ್ಲ ಹೊರಕ್ಕೆ ಬರಲಿ. ದಯವಿಟ್ಟು ಅದನ್ನು ಮಾಡಿ You please come out ಇವರು ಕ್ಯಾಬಿನೇಟ್ ಮುಂದೆ ಬಂದಿದೆಯೆಂದು ಅವರೇ ಒಪ್ಪಿಕೊಳ್ಳುತ್ತಿದ್ದಾರೆ. ಇವತ್ತಿನ ಮುಖ್ಯಮಂತ್ರಿಯವರು ಅವತ್ತಿನ ಉಪಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರು. ಅವರು ಹಣವನ್ನು ಬಿಡುಗಡೆ ಮಾಡಿದ್ದಾರೆ.

ಶ್ರೀ ಸಿ.ಎಂ.ಉದಾಸಿ:- ಅವರು ಇದ್ದಾಗ ಬಿಡುಗಡೆ ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ:- ಇನ್ನು ಯಾರು ಇದ್ದಾಗ ಬಿಡುಗಡೆ ಮಾಡಿದರು?

ಶ್ರೀ ಸಿ.ಎಂ.ಉದಾಸಿ:- ಬಿಡುಗಡೆಯದ್ದು ಬೇರೆ ವಿಚಾರ. ಹಣ ಬಿಡುಗಡೆಯಾಗಿದ್ದು 24.09.2007ಕ್ಕೆ

(ಗೊಂದಲ)

ಅಧ್ಯಕ್ಷರು:- ಒಬ್ಬರು ಮಾತನಾಡಿ.

ಹೆಚ್.ಸಿ.ಬಾಲಕೃಷ್ಣ:- ಇವೆಲ್ಲಾ ಚರ್ಚೆ ಬೇಡ. ಇದರ ಬಗ್ಗೆ ಸದನದ ಸಮಿತಿ ಆಗಲಿ. ಯಾರ್‍ಯಾರು ಏನೇನು ಮಾಡಿದ್ದಾರೆ ಏನೇನಾಯಿತು ಎಂಬುದು ಎಲ್ಲರಿಗೂ ಗೊತ್ತಾಗಲಿ.

ಶ್ರೀ ಸಿ.ಎಂ.ಉದಾಸಿ:- ವಿಚಾರಣೆ ಮಾಡುತ್ತೇವೆಂದರೆ ನೀವೇ ಬೇಡವೆಂದು ಹೇಳುತ್ತೀರಲ್ಲ?

(ಗೊಂದಲ)

24.09.2007 ರಂದು ಮುಂಗಡ ಹಣವನ್ನು ನೀಡಿರುವುದು. 5.10.2007ಕ್ಕೆ Government dissolve ಆಗಿದ್ದು. ಸರ್ಕಾರ ಬೀಳುವ 11 ದಿವಸ ಮೊದಲು ಇದು ಆಗಿದೆ ಎಂಬುದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಇವೆಲ್ಲಾ ಈ ರೀತಿ ಇರಬೇಕಾದರೆ ಇದರ ಬಗ್ಗೆ ವಿಚಾರಣೆಗೆ ನಿವೃತ್ತ ಅಧಿಕಾರಿಗಳನ್ನು

ನೇಮಿಸುತ್ತೇವೆಂದರೆ ಏಕೆ ಆಕ್ಷೇಪ ಮಾಡಬೇಕು. ನಿಮಗೆ ಅಷ್ಟೊಂದು ಭರವಸೆ ಇದ್ದರೆ ಏಕೆ ಆಕ್ಷೇಪ ಮಾಡುತ್ತೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಬೇಕಾದರೆ ವಿಚಾರಣೆ ಮಾಡಿ ಒಂದು ತಿಂಗಳಿನಲ್ಲಿ ವರದಿ ಕೊಡಿ ಎಂದು ಹೇಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಅದರ ದಾಖಲಾತಿಗಳನ್ನೆಲ್ಲ ಒಂದು ಸಲ ಇಟ್ಟುಬಿಡಿ. ನಾವೂ ಅದನ್ನು ನೋಡುತ್ತೇವೆ. ಅದು 5.10.2007ರಲ್ಲಿ ಆಯಿತೇ, 3.10.2007ರಲ್ಲಿ ಆಯಿತೇ, ನೀವು withdraw ಮಾಡಿಕೊಂಡ ಮೇಲೆ ಆಯಿತೇ? ಆಮೇಲೆ ಆಯಿತೆ ಎಲ್ಲವನ್ನು ಸ್ವಲ್ಪ ನೋಡೋಣ. ಯಾರ್‍ಯಾರು ಇದ್ದಾರೆ, ರೇವಣ್ಣನವರದ್ದು ತಪ್ಪೋ, ಇವರದ್ದು ತಪ್ಪೋ, ನಿಮ್ಮದು ತಪ್ಪೋ ಎಂಬುದನ್ನು ನೋಡೋಣ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಸಚಿವರು 24.09.2007ರಂದು ಮುಂಗಡ ಹಣ ಬಿಡುಗಡೆಯಾಯಿತು ಎಂದು ಹೇಳುತ್ತಿದ್ದಾರೆ. ಹಣಕಾಸು ಇಲಾಖೆಯಿಂದ ಸಹಮತಿ ಪಡೆದು ಸನ್ಮಾನ್ಯ ಇವತ್ತಿನ ಮುಖ್ಯಮಂತ್ರಿಯವರು ಅಂದು ಹಣಕಾಸು ಸಚಿವರಾಗಿದ್ದರು, ಅವರೇ ಅದಕ್ಕೆ ಅನುಮತಿ ಕೊಟ್ಟಿದ್ದಾರೆ. ಬೇಕಾದರೆ ಕಡತವನ್ನು ಸದನಕ್ಕೆ ತರಿಸಿ. 16.08.2007 ರಲ್ಲಿ ಸಂಖ್ಯೆ:1623, ವೆಚ್ಚ–3, ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯ ಸಹಮತಿ ಪಡೆದು ಹೊರಡಿಸಲಾಗಿದೆ. ವೈದ್ಯಕೀಯ ಶಿಕ್ಷಣ ಇಲಾಖೆಗೆ 18.07.2007ನೇ ಇಸವಿಯಲ್ಲಿ ಆಗಿದೆ. ಬೇಕಾದರೆ ಇದನ್ನು ಕಳುಹಿಸಿಕೊಡುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಯವರೇ ಅಂದು ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರಾಗಿದ್ದರು. ಆದೇಶದ ಪ್ರತಿ ಕಳುಹಿಸಿಕೊಡುತ್ತೇನೆ. ಅವರು ಉಪಮುಖ್ಯಮಂತ್ರಿಯಾಗಿದ್ದ ಕಾಲದಲ್ಲೇ ಹಣ ಬಿಡುಗಡೆಯಾಗಿದೆ. ಆರೋಗ್ಯ ಇಲಾಖೆಯ ಆದೇಶದ ಪ್ರತಿಯನ್ನು ತಮಗೆ ಕಳುಹಿಸಿಕೊಡುತ್ತೇನೆ. ನಿಮ್ಮ ಪ್ರಧಾನ ಕಾರ್ಯದರ್ಶಿಯವರ ಮಾತನ್ನು ಕೇಳಿ ಅರ್ಥಂಬರ್ಥ ಹೇಳಲು ಹೋಗಬೇಡಿ. ಪೂರ್ತಿ ಓದಿಕೊಂಡು ಬನ್ನಿ. ಇದರ ಪ್ರತಿ ಇದ್ದರೆ ತೆಗೆದುಕೊಳ್ಳಿ. ಆದ್ದರಿಂದ ಇದರ ಬಗ್ಗೆ ಸದನದ ಸಮಿತಿ ಮಾಡಿ. ಇದರಲ್ಲಿ ಐದು ಜನ ಸಚಿವರುಗಳು involve ಆಗಿದ್ದಾರೆ. ಮುಖ್ಯಮಂತ್ರಿಗಳು, ಲೋಕೋಪಯೋಗಿ ಸಚಿವರು, ಹಣಕಾಸು ಸಚಿವರು, ಕೈಗಾರಿಕಾ ಸಚಿವರು ಈ ರೀತಿ ಐದು ಜನ ಸಚಿವರು ಇದರಲ್ಲಿ involve ಆಗಿದ್ದಾರೆ. ಅಧಿಕಾರಿಗಳ ಕೈಯಲ್ಲಿ ಮಾಡಲು ಆಗದಿದ್ದರೆ ಸದನದ ಸಮಿತಿ ಮಾಡಿ. ಅದೇನು findings ಬರಲಿ.

ಅಧ್ಯಕ್ಷರು:– ರೇವಣ್ಣನವರೆ ಇದನ್ನು ಮುಗಿಸಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ:–..... ಅದು ಈಗ ಈಚೆಗೆ ಬರಲಿ. 2 ಕೋಟಿ 9 ಲಕ್ಷ ರೂ.ಗಳೆಂದು ಹೇಳುತ್ತಿದ್ದೀರಲ್ಲಾ, ನೀವು 9 ತಿಂಗಳಿನಿಂದ ಏನು ಮಾಡುತ್ತಿದ್ದೀರಿ?

(ಗೊಂದಲ)

.... ಈ ಬಗ್ಗೆ ಸದನ ಸಮಿತಿ ಮಾಡಿ.

(ಗೊಂದಲ)

ಅಧ್ಯಕ್ಷರು:– ಮಾನ್ಯ ರೇವಣ್ಣನವರೆ, ದಯವಿಟ್ಟು ಕುಳಿತುಕೊಳ್ಳಿ. ಈ ವಿಷಯದ ಚರ್ಚೆಯನ್ನು ಇಲ್ಲಿಗೇ ಮುಗಿಸೋಣ.

(ಗೊಂದಲ)

ಶ್ರೀ ಆರ್.ಅಶೋಕ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ತನಿಖೆ ಮಾಡುತ್ತೇವೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಈ ಕಡೆಗೆ ಮತ್ತು ಆ ಕಡೆಗೆ, ಎರಡೂ ಕಡೆ ಗೋಲ್‌ಮಾಲ್ ನಡೆದಂತೆ ಕಾಣುತ್ತದೆ. ಅವರೂ ಹೊಡೆದಿದ್ದಾರೆ, ಇವರೂ ಹೊಡೆದಿದ್ದಾರೆ, ಇಬ್ಬರೂ ಹೊಡೆದಿದ್ದಾರೆ.

(ಗೊಂದಲ)

ಅಧ್ಯಕ್ಷರು:– Please, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಸದನ ಸಮಿತಿ ಮಾಡಿ. ಯಾರ್‍ಯಾರು ಎಷ್ಟೆಷ್ಟು ಹಂಚಿಕೊಂಡರು ಎಂಬುದು ಹೊರಗಡೆ ಬರಲಿ.

(ಗೊಂದಲ)

ಅಧ್ಯಕ್ಷರು:– Please, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಆರ್.ಅಶೋಕ್:– ಮಾನ್ಯ ಅಧ್ಯಕ್ಷರೆ, ಈ ಸದನದ ನಾಯಕರಾದ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ statement ವೊಂದನ್ನು ಮಾಡಿದ್ದಾರೆ. ಇದರ ಬಗ್ಗೆ ತನಿಖೆ ಮಾಡುತ್ತೇನೆಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ ಹೇಳಿರುವುದರಿಂದ, ಇದರ ಬಗ್ಗೆ ತನಿಖೆಗೆ ಸರ್ಕಾರ ಒಪ್ಪಿರುವುದರಿಂದ, ಇದರಲ್ಲಿ ಬೇರೆ ಇನ್ನೇನೂ ಪ್ರಶ್ನೆಯೇ ಇಲ್ಲ. ಆದ್ದರಿಂದ......

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳು, ಮುಖ್ಯಮಂತ್ರಿಗಳು ಎಲ್ಲರೂ ಇರುವುದರಿಂದ ನಿವೃತ್ತ ಅಧಿಕಾರಿಗಳಿಂದ ತನಿಖೆ ಮಾಡಿಸುವುದು ಬೇಡ. ಸದನಕ್ಕೆ ಗೊತ್ತಾಗಲಿ, ಸದನ ಸಮಿತಿ ಮಾಡಿ. ಸದನದಲ್ಲಿ ಈ ಬಗ್ಗೆ ತೀರ್ಮಾನವಾಗಲಿ....

(ಗೊಂದಲ)

ಇದರಲ್ಲಿ ಮುಖ್ಯಮಂತ್ರಿಗಳಿದ್ದಾರೆ, Health Minister ಇದ್ದಾರೆ, ಮಾಜಿ ಮುಖ್ಯಮಂತ್ರಿಗಳಿದ್ದಾರೆ, ಮಾಜಿ ಲೋಕೋಪಯೋಗಿ ಸಚಿವರು ಇದ್ದಾರೆ. ಎಲ್ಲರೂ....

(ಗೊಂದಲ)

ಅಧ್ಯಕ್ಷರು:– Please, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಮಂತ್ರಿಗಳು ಒಂದು ಒಳ್ಳೆಯ point ಅನ್ನು ಹೇಳಿದ್ದಾರೆ....

ಅಧ್ಯಕ್ಷರು:– ಈಗ ಇದರ ಬಗ್ಗೆ ಈಗಾಗಲೇ ಚರ್ಚೆ ಸಾಕಷ್ಟು ಆಗಿದೆ. ಇದನ್ನು ಇಲ್ಲಿಗೇ ಮುಗಿಸೋಣ. ಇನ್ನೂ ಚರ್ಚಿಸಬೇಕಾಗಿರುವ ವಿಷಯ ಬಹಳಷ್ಟು ಇದೆ. ನಿಯಮ 69ರ ಅಡಿಯಲ್ಲಿ ಇನ್ನೂ ಮೂರು ವಿಷಯಗಳನ್ನು ಚರ್ಚಿಸಬೇಕಾಗಿದೆ, Calling Attentions ಕೂಡ ಇವೆ. ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ, ಅದರ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದೀರಿ.

(ಗೊಂದಲ)

ಏನಾದರೂ ಮಾತನಾಡುವುದಾದರೆ ಒಬ್ಬೊಬ್ಬರೇ ಮಾತನಾಡಿ. ಎಲ್ಲರೂ ಹೀಗೆ ಒಟ್ಟಿಗೇ ಎದ್ದು ನಿಂತು ಮಾತನಾಡಿದರೆ ಹೇಗೆ? Please, ಎಲ್ಲರೂ ಕುಳಿತುಕೊಳ್ಳಿ. ಯಾರಾದರೂ ಒಬ್ಬರು ಮಾತನಾಡಿ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ನಾನೊಂದು submission ಮಾಡಬಯಸುತ್ತೇನೆ. ಇಲ್ಲೊಂದು ಸರ್ಕಾರಿ ಆದೇಶವಿದೆ. ಇಷ್ಟು ಹೊತ್ತು ಮಾನ್ಯ ಮಂತ್ರಿಗಳು ನೀಡಿರುವ ಹೇಳಿಕೆಯನ್ನು ನಾವು ನೋಡುತ್ತಿದ್ದೇವೆ. ನಾವು possession hand over ಮಾಡಿಲ್ಲ, mobilisation advance ಅನ್ನು ಕೊಡುವುದಕ್ಕೋಸ್ಕರ ಇವತ್ತು ಟೆಂಡರ್‌ನಲ್ಲಿ specification ಇರಲಿಲ್ಲ, ಇವತ್ತು ಅದಕ್ಕೋಸ್ಕರವಾಗಿ ಅಧಿಕಾರಿಗಳನ್ನು suspend ಮಾಡಿದ್ದೇವೆ, enquiry ಮಾಡುತ್ತಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಈಗ ಮಾನ್ಯ ರೇವಣ್ಣನವರು ಕೋಟ್ ಮಾಡಿದ Government Order ಅನ್ನು ನಾವು ಈಗ ನೋಡಿದೆವು. ಸರ್ಕಾರದಿಂದಲೇ ಈ ಆದೇಶ issue ಆಗಿದೆ. "ಶೇಕಡ 10 ರಷ್ಟು ಮುಂಗಡ mobilisation advance 33.37 ಕೋಟಿ ರೂ.ಗಳನ್ನು 2007–08ನೇ ಸಾಲಿನ ಲೆಕ್ಕ ಶೀರ್ಷಿಕೆ so and so..." ಅದಕ್ಕೆ ಸರ್ಕಾರ ಬಿಡುಗಡೆ ಮಾಡಿದೆ ಎಂದು ಆದೇಶದಲ್ಲಿದೆ. ಅದಕ್ಕೆ 'ಈ.ಪಾಪಣ್ಣ, ಸರ್ಕಾರದ ಅಧೀನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ' ಇವರು ಸಹಿ ಮಾಡಿದ್ದಾರೆ. ಈ ಆದೇಶ 17.08.2007ರಲ್ಲಿ ಹೊರಡಿಸಲಾಗಿದೆ.

ಸರ್ಕಾರಿ ಆದೇಶ issue ಆದ ಮೇಲೆ, ಕೆಳಗಿರತಕ್ಕವರು ಅದನ್ನು implement ಮಾಡಿದರೆ, ಅದು ತಪ್ಪಾಗುತ್ತದೆಯೇ? ಇದಕ್ಕೆ ಸರ್ಕಾರವೇ ಆದೇಶ ಮಾಡಿದೆ. ಇದಕ್ಕೆ ಹಣಕಾಸಿನ ಸಚಿವರ ಒಪ್ಪಿಗೆ ಇಲ್ಲದಿರುವುದಕ್ಕೆ ಸಾಧ್ಯವೇ ಇಲ್ಲ. ಇದರಲ್ಲಿ ಎಲ್ಲೋ ಒಂದು ಕಡೆ ಲೋಪ ಇದೆ, ಅದನ್ನು ಎಲ್ಲೋ ಒಂದು ಕಡೆಗೆ ತೋರಿಸತಕ್ಕಂಥ ಕೆಲಸವಾಗಿದೆ. 'ಬೆಟ್ಟ ಅಗೆದು ಗೊಣ್ಣೆ ಹುಳ ಹಿಡಿದರು' ಎನ್ನುವ ರೀತಿಯಲ್ಲಿ ಮಾಡತಕ್ಕದ್ದು ಸರಿಯಲ್ಲ. ದಯಮಾಡಿ ಈಗ records ಅನ್ನು ತರಿಸಿ. ಇದನ್ನು ಒಬ್ಬ IAS Officer enquiry ಗೆ ಕೊಟ್ಟರೆ. ಆತ ಒಬ್ಬ ಅಧಿಕಾರಿಯನ್ನು suspend ಮಾಡಿದ್ದು ಸರಿಯೋ ತಪ್ಪೋ ಎಂದು ಹೇಳುವುದಕ್ಕೆ 4 ತಿಂಗಳು ತೆಗೆದುಕೊಳ್ಳುತ್ತಾನೆ, ಅದು ಬೇಡ. ದಯಮಾಡಿ ಮಾನ್ಯ ಸ್ಪೀಕರ್‌ರವರು ತಮ್ಮ ಛೇಂಬರ್‌ಗೆ recordsನ್ನು ತರಿಸಲಿ. ಬಹುಶಃ ಇದು ಯಾರಿಗೂ ಗೊತ್ತಿಲ್ಲದೆ ಇರತಕ್ಕದ್ದೇನಲ್ಲ. ಎಲ್ಲರಿಗೂ records ಗೊತ್ತಾಗುತ್ತದೆ. ಹಣಕಾಸಿನ ಇಲಾಖೆಯದೇ ತಪ್ಪು. ಈಗಿನ ಮುಖ್ಯಮಂತ್ರಿಗಳೇ ಆಗ ಹಣಕಾಸಿನ ಮಂತ್ರಿಗಳಾಗಿದ್ದರು. ಇದರಲ್ಲಿ ಯಾರ್ಯಾರು ಪಾಲುದಾರರಾಗಿದ್ದಾರೆ, ಲೋಪ ಯಾರಿಂದ ಆಗಿದೆ ಎನ್ನುವ ಸತ್ಯಾಂಶ ಈ ಸಭೆಗೆ ಗೊತ್ತಾಗಲಿ. ದಯಮಾಡಿ ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟ ಎಲ್ಲಾ ಕಡತಗಳನ್ನು ತಮ್ಮ ಛೇಂಬರ್‌ಗೆ ತರಿಸಿ, ತೀರ್ಮಾನ ಮಾಡತಕ್ಕದ್ದು ಒಳ್ಳೆಯದು. ಇವತ್ತು ಬೆಳಿಗ್ಗೆ ಪೇಪರ್‌ನಲ್ಲಿ ನೋಡಿದೆವು. ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಂತೆ land acquistion ಅನ್ನು High Court upheld ಮಾಡಿದೆ. ಆದ್ದರಿಂದ, ಇದರ ಬಗ್ಗೆ ಇನ್ನಷ್ಟು ವಿಳಂಬ ಮಾಡದೆ, ಆದಷ್ಟು ಶೀಘ್ರವಾಗಿ ಇದರ ಕೆಲಸ ಮಾಡಲಿಕ್ಕೆ ಸಹಾಯವಾಗುವಂತೆ ಮಾಡಬೇಕು. Enquiry ಎಂದು ಇನ್ನೊಂದು ಆರು ತಿಂಗಳೋ, ವರ್ಷವೋ ಮಾಡುವುದರಿಂದ ಖಂಡಿತ ವಿಶ್ವವಿದ್ಯಾನಿಲಯಕ್ಕೆ ದೊಡ್ಡ ಪೆಟ್ಟು ಬೀಳುತ್ತದೆ. ಮಾನ್ಯ ಬಚ್ಚೇಗೌಡರೆ, ದಯಮಾಡಿ ತಾವು ಅರ್ಥ ಮಾಡಿಕೊಳ್ಳಿ. ಒಬ್ಬ IAS Officerಗೆ ನೀವು terms of reference ಏನೆಂದು ಕೊಡುತ್ತೀರಿ. ನೀವು ಕೊಡತಕ್ಕದ್ದು ನಮಗೆ ಗೊತ್ತಾಗುವುದಿಲ್ಲ. ಅಧಿಕಾರಿ ಯಾರೊ ಒಬ್ಬರನ್ನು suspend ಮಾಡಿದ್ದೇವೆ, ಅದು ಸರಿಯೋ? ಅಲ್ಲವೋ? ಎಂದು ನೀವು ವರದಿ ಕೇಳುತ್ತೀರಿ. ಇದರಲ್ಲಿರುವ ಪ್ರಶ್ನೆ ಅದಲ್ಲ. ಇದರಲ್ಲಿ involve ಆಗಿರತಕ್ಕವರು ಅಧಿಕಾರಿಗಳಲ್ಲ. ಇದರಲ್ಲಿ ಸರ್ಕಾರ ಮತ್ತು ಸರ್ಕಾರದ ಮಂತ್ರಿಗಳು ಬಿಟ್ಟರೆ ಬೇರೆ ಯಾರು ಇಲ್ಲ. ಇದನ್ನು ಏಕೆ ಇಟ್ಟುಕೊಂಡು ಚರ್ಚೆ ಮಾಡುತ್ತೀರಿ? ದಯಮಾಡಿ ಕಡತಗಳನ್ನು ತರಿಸಿ, ಆಗ ಸತ್ಯಾಂಶ ಗೊತ್ತಾಗುತ್ತದೆ. ಮಾನ್ಯ ಕಟ್ಟಾರವರೆ, ನೀವು 2007ರಲ್ಲಿ ನೀವು ಇರಲಿಲ್ಲವೆಂದು ಹೇಳುವುದಾದರೆ, ನೀವ್ಯಾಕೆ ಚಿಂತೆ ಮಾಡುತ್ತೀರಿ? ವಿಶ್ವವಿದ್ಯಾನಿಲಯ ಆಗಬೇಕೋ? ಬೇಡವೋ? ಬೇಗ ವಿಶ್ವವಿದ್ಯಾನಿಲಯ ಪ್ರಾರಂಭವಾಗಬೇಕೋ ಬೇಡವೋ? ದಯಮಾಡಿ records ತರಿಸಿ ಎಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು:- ಒಬ್ಬೊಬ್ಬರೇ ಮಾತನಾಡಿ.

(ಗೊಂದಲ)

ಶ್ರೀ ಸಿ.ಎಂ.ಉದಾಸಿ:- ಮಾನ್ಯ ಅಧ್ಯಕ್ಷರೆ, ಒಬ್ಬ ಅಧಿಕಾರಿ ತಪ್ಪು ಮಾಹಿತಿಯನ್ನು ಕೊಟ್ಟಾಗ.....

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ:- ದಯಮಾಡಿ ಮಾನ್ಯ ಸಚಿವರು ಯೀಲ್ಡ್ ಆಗಬೇಕು.

(ಗೊಂದಲ)

ಶ್ರೀ ಸಿ.ಎಂ.ಉದಾಸಿ:- ...... ಇದು ತಪ್ಪಲ್ಲವೇ?......

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:- ...... ಸರ್ಕಾರಿ ಆದೇಶ ಯಾರದು? ಹಣ ಬಿಡುಗಡೆ ಮಾಡಿದ್ದಾರೆ ಎನ್ನುವ ಕಾರಣಕ್ಕೋಸ್ಕರ ನೀವು ಅಧಿಕಾರಿಗಳ ವಿರುದ್ಧ action ತೆಗೆದುಕೊಳ್ಳುವುದಾದರೆ ಹೇಗೆ? ಸರ್ಕಾರಿ ಆದೇಶವನ್ನು ಮಂತ್ರಿಗಳು ಮಾಡಿ, ಅಧಿಕಾರಿಗಳನ್ನು suspend ಮಾಡಿರುವುದು ಯಾವ ನ್ಯಾಯ ಇದು?...

(ಗೊಂದಲ)

ಅಧ್ಯಕ್ಷರು:- ಎಲ್ಲರೂ ಈ ರೀತಿಯಾಗಿ ಒಟ್ಟಿಗೇ ಮಾತನಾಡಿದರೆ, ಯಾವುದೂ ಕೂಡ record ಗೆ ಹೋಗುವುದಿಲ್ಲ. ಹೀಗೆ ಪರಸ್ಪರ ನೀವು ಮಾತನಾಡುವುದಾದರೆ, ಯಾವುದೂ record ಗೆ ಹೋಗುವುದಿಲ್ಲ. ಯಾರಾದರೂ ಒಬ್ಬರೇ ಮಾತನಾಡಿ. ಯಾರಾದರೂ ಒಬ್ಬರು ಯೀಲ್ಡ್ ಆಗಿ. ಎಲ್ಲರೂ ಮಾತನಾಡುವುದಾದರೆ, ಏನು ತಿಳಿಯುತ್ತದೆ? ಎಲ್ಲರೂ ಮಾತನಾಡುವಂತಹ ಅವಶ್ಯಕತೆ ಇಲ್ಲ. Please, ಒಬ್ಬರು ಮಾತ್ರ ಮಾತನಾಡಿ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:- .... xxx xxx xxx xxx

(ಗೊಂದಲ)

ಅಧ್ಯಕ್ಷರು:- ಮಾನ್ಯ ಜಯಚಂದ್ರರವರೆ, ನೀವೇನೋ ಹೊಸದಾಗಿ ಹೇಳಲಿಕ್ಕೆ ಹೊರಟಿದ್ದೀರಿ. ನಿಲುವಳಿ ಸೂಚನೆ ಅಡಿಯಲ್ಲಿ ಪ್ರಸ್ತಾಪಿಸಲು ನೋಟಿಸ್ ಕೊಟ್ಟಾಗ, ಅವರು ಆ ವಿಷಯವನ್ನು ತಮ್ಮ ನೋಟಿಸ್‌ನಲ್ಲಿ ಹೇಳಿದ್ದಾರೆಯೇ? ಮಂತ್ರಿಗಳ ಬಗ್ಗೆ ಅದರಲ್ಲಿ ಏನಾದರೂ ಇದೆಯೇ? 'ಮಂತ್ರಿಗಳು involve ಆಗಿದ್ದಾರೆ' ಎಂದು ನೀವೇನು ಈಗ ಹೇಳುತ್ತಿದ್ದೀರಿ. ಆ ಬಗ್ಗೆ ಪ್ರಸ್ತಾಪಿಸಲು ಹೊಸದಾಗಿ ನೀವೇನಾದರೂ ನೋಟಿಸ್ ಕೊಟ್ಟಿದ್ದೀರಾ? ಅದರಲ್ಲಿ ನೀವು specific allegation ಏನಾದರೂ ಮಾಡಿದ್ದೀರಾ? ಅವರು ಕೊಟ್ಟಿರುವ ನಿಲುವಳಿ

ಸೂಚನೆಯಲ್ಲಿ 'ಮಂತ್ರಿಗಳು involve ಆಗಿದ್ದಾರೆ' ಎಂದು ಅವರೇನಾದರೂ ಹೇಳಿದ್ದಾರೆಯೇ? ಮಾನ್ಯ ಸಭಾಧ್ಯಕ್ಷರ ಆದೇಶದ ಪ್ರಕಾರ ಕಡತದಿಂದ ತೆಗೆದುಹಾಕಲಾಗಿದೆ. ಸುಮ್ಮನೆ ಹಾಗೆ ಮಾತನಾಡುತ್ತಾ ಹೋದರೆ ಏನಾಗುತ್ತದೆ? ಆ ಪ್ರಸ್ತಾಪ ಅವರ ನಿಲುವಳಿಸೂಚನೆಯಲ್ಲಿ ಬರಬೇಕು. (ಗೊಂದಲ) ಯಾರಾದರು ಮಂತ್ರಿಗಳು involve ಆಗಿದ್ದಾರೆಂದು ನೀವು ಆಪಾದನೆ ಮಾಡುವುದಾದರೆ specific notice ಕೊಡಿ. ಜಯಚಂದ್ರರವರೆ, ಮಂತ್ರಿಗಳು involve ಆಗಿದ್ದಾರೆಂದು ನೀವು ಆಪಾದನೆ ಮಾಡುತ್ತಿದ್ದಿರಿ, ಮಾಡುವಾಗ specific notice ಕೊಡಿ, interpretation ಮಾಡುವುದು ಬೇಡ, ನೀವು specific ಆಗಿ notice ಕೊಡಿ. ಯಾರೋ ಮಂತ್ರಿಗಳು ಇದರಲ್ಲಿ ಇನ್ವಾಲ್ವ್ ಆಗಿದ್ದಾರೆಂದರೆ, ನೀವು notice ಕೊಡಿ.(ಗೊಂದಲ)

ಶ್ರೀ ಆರ್.ಅಶೋಕ್(ಸಾರಿಗೆ ಸಚಿವರು):- ಅವರು(ಜಯಚಂದ್ರ) ಮಾತನಾಡುವಾಗ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಸೇರಿದ್ದಾರೆಂದು ಹೇಳಿದ್ದಾರೆ, ದಯವಿಟ್ಟು ಅದನ್ನು ಕಡತದಿಂದ ತೆಗೆಸಿ ಹಾಕುವುದು.

(ಗೊಂದಲ)

ಅಧ್ಯಕ್ಷರು:- ಎಲ್ಲರು ಮಾತನಾಡುವಂತಿಲ್ಲ ಒಬ್ಬರು ಮಾತನಾಡುವುದು, ನೀವು ಇಲ್ಲಿ ಮಾತನಾಡುವುದು ಯಾವುದೂ ದಾಖಲೆಗೆ ಹೋಗುವುದಿಲ್ಲ. ನಿಲುವಳಿ ಸೂಚನೆಯನ್ನು ಕೊಟ್ಟವರು ಅವರು. ಜಯಚಂದ್ರರವರು ಈಗ ಮಂತ್ರಿಗಳ ಇನ್ವಾಲ್ವ್‌ಮೆಂಟ್ ಇದೆ ಎಂದು ಹೇಳಿದರು, ಇಲ್ಲಿ ರೂಲ್ಸ್ ಪ್ರಕಾರ ಏನಿದೆ ಎಂದರೆ, "No allegation of a defamatory or incriminatory nature shall be made by a member against any person unless the member has given previous intimation to the Speaker and also to the Minister concerned so that the Minister may be able to make an investigation into the matter for the purpose of reply;"

ಶ್ರೀ ಸಿದ್ದರಾಮಯ್ಯ:- ಯಾರ ಮೇಲೋ ಅಲಿಗೇಷನ್ ಮಾಡಿಲ್ಲ, ಏನು ಹೇಳಿದರೆಂದು ನಿಮಗೆ ಹೇಳಿಬಿಡುತ್ತೇನೆ.

(ಗೊಂದಲ)

ಅಧ್ಯಕ್ಷರು:- ಮಂತ್ರಿಗಳು ಇನ್ವಾಲ್ವ್ ಆಗಿದ್ದಾರೆಂದು ಹೇಳಿದರು, subject change ಆಯಿತು, ಇಲ್ಲಿ ಅಧಿಕಾರಿಗಳು ಪಾರಾಗಿಬಿಟ್ಟರು, ಇಲ್ಲಿ ಏನಾಗುತ್ತದೆ ನೋಡಿ, ಅವರು ನಿಲುವಳಿ ಸೂಚನೆಯ ಮೇಲೆ ಯಾವ ಮಂತ್ರಿಗಳ ಮೇಲು ಅಲಿಗೇಷನ್ ಮಾಡಿಲ್ಲ, ನೀವು ಅಧಿಕಾರಿಗಳ ಇನ್ವಾಲ್ವ್‌ಮೆಂಟ್ ಇಲ್ಲವೆಂದು ತಾವು ಹೇಳುತ್ತೀರಿ, ಈಗ ಮಂತ್ರಿಗಳ ಮೇಲೆ ಹೋಯಿತು. ಮಂತ್ರಿಗಳನ್ನು ಇನ್ವಾಲ್ವ್ ಮಾಡಿ, ಆದರೆ ನಮಗೆ specific notice ಕೊಡಿ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:- ಸರ್ಕಾರಿ ಆದೇಶವಾಗಬೇಕಾದರೆ ಮಂತ್ರಿಗಳ ಸಹಿ ಆಗಿರಲೇಬೇಕು, ಆಗಿದ್ದ ಮಂತ್ರಿಗಳ್ಯಾರು?

ಅಧ್ಯಕ್ಷರು: ಆಗಿದ್ದರೆ ಹೇಳಿ, ಅವರ involvement ಇದೆ ಎಂದು ನೋಟಿಸ್ ಕೊಡಿ, ನೇರವಾಗಿ ಅಲಿಗೇಷನ್ ಮಾಡಿಬಿಡುವುದೇ

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ(ವಿರೋಧ ಪಕ್ಷದ ನಾಯಕರು):- ಪ್ರಶ್ನೆ ಇರುವುದಿಷ್ಟೆ, ನಾವು ಯಾರ ವಿರುದ್ಧವಾಗಿ ನಿರ್ದಿಷ್ಟವಾಗಿ ಆಪಾದನೆ ಮಾಡಬೇಕಾದರೂ ನೋಟೀಸ್ ಕೊಡಬೇಕು, ಹೌದಾ? ಅದು defamatory ಇರಬಾರದು, ಆಮೇಲೆ ಅಲಿಗೇಷನ್ ಮಾಡಬೇಕಾದರೆ ನೋಟೀಸ್ ಕೊಡಬೇಕು. ಆದರೆ ಅವರು ಇಲ್ಲಿ ಹೇಳುವುದೇನೆಂದರೆ, ಯಾವುದೇ ಒಂದು ಸರ್ಕಾರಿ ಆದೇಶ ಹೊರಬರಬೇಕಾದರೆ, G.O issue ಆಗಬೇಕಾಗಿದ್ದರೆ, ಆ ಫೈಲ್‌ನಲ್ಲಿ ಸಂಬಂಧಪಟ್ಟಂಥ Medical Education Secretary, Medical Education Minister, Finance Secretary, Finance Minister ಇಷ್ಟೆಲ್ಲಾ ನೋಡಿದ ಮೇಲೆ ಕ್ಯಾಬಿನೆಟ್‌ಗೆ ಬರುತ್ತದೆ. ಅಂತಿಮವಾಗಿ ಕ್ಯಾಬಿನೆಟ್ ಅಪ್ರೂವಲ್ ಆದ ಮೇಲೆ 2-3 ದಿವಸ ಇಟ್ಟಿಕೊಂಡು, ತದ ನಂತರ ಪುನಃ cabinest secretary ಯವರು ಸಂಬಂಧಪಟ್ಟ ಇಲಾಖೆಗೆ ವಾಪಸ್ ಕಳುಹಿಸಿ ಆಮೇಲೆ ಈ ಜಿಓ ಹೊರಡಿಸಲಾಗುತ್ತದೆ. ಅದಕ್ಕಾಗಿ ಇಲ್ಲಿ ಅವರದು ಪ್ರಶ್ನೆ ಇಷ್ಟೆ. ಈ ಸರ್ಕಾರಿ ಆದೇಶವಾಗಬೇಕಾದರೆ ಸಂಬಂಧಪಟ್ಟಂಥ ಮಂತ್ರಿಗಳು ಸಹಿ ಮಾಡದೆ ಆರ್ಡರ್ issue ಮಾಡುವುದಿಲ್ಲ ಅವರ್‍ಯಾರು? Medical Education Minister ಯಾರು? Finance Minister ಯಾರು?

(ಗೊಂದಲ)

ಅಧ್ಯಕ್ಷರು:- ಜಯಚಂದ್ರರವರು ಆ ರೀತಿ ಹೇಳಲಿಲ್ಲ, ಇದರಲ್ಲಿ ಮಂತ್ರಿಗಳು ಇನ್ವಾಲ್ವ್ ಆಗಿದ್ದಾರೆ, ಅಧಿಕಾರಿಗಳು ಯಾರದು ಜವಾಬ್ದಾರಿ ಇಲ್ಲ, ಮಂತ್ರಿಗಳು ಇನ್ವಾಲ್ವ್ ಇದ್ದಾರೆಂದು ಅವರು ಹೇಳಿದರು.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ(ಇಂಧನ ಸಚಿವರು):- ವಿರೋಧಪಕ್ಷದ ನಾಯಕರೆ, ನೀವು ಹೇಳಿದ್ದು ಬೇರೆ, ಅವರು ಹೇಳಿದ್ದು ಬೇರೆ, ಅವರು ನೇರವಾಗಿ ಮಂತ್ರಿಗಳು ಇನ್ವಾಲ್ವ್ ಆಗಿದ್ದಾರೆಂದು ಹೇಳಿದರು, ನೀವು ಹೇಳಿದ್ದಕ್ಕು ಅವರು ಹೇಳಿದ್ದಕ್ಕು ಭಾರಿ ವ್ಯತ್ಯಾಸವಿದೆ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- Revanna has got that order with consent of all these people.

ಶ್ರೀ ಬಸವರಾಜ ಬೊಮ್ಮಾಯಿ:- ಸನ್ಮಾನ್ಯ ಅಧ್ಯಕ್ಷರೆ, ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ಬಗ್ಗೆ ಬಹಳ ದೊಡ್ಡದಾಗಿ ಚರ್ಚೆಯಾಗುತ್ತಿದೆ

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ:- ಅಧ್ಯಕ್ಷರೆ, ನಾವು ಜಲಸಂಪನ್ಮೂಲ ಸಚಿವರಿಗೆ ಪ್ರಶ್ನೆ ಹಾಕಿಲ್ಲ, ನಾನು ನಿಲುವಳಿ ಸೂಚನೆಗೆ ಸಹಿ ಹಾಕಿದ್ದೇನೆ, ನಾನು ಹೇಳಬೇಕಲ್ಲವೇ? ನನಗೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:- ಸದಸ್ಯರಾದ ಜಯಚಂದ್ರರವರು, ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಇನ್ವಾಲ್ವ್ ಆಗಿದ್ದಾರೆಂದು ಹೇಳಿರುವುದನ್ನು ಕಡತದಿಂದ ಮೊದಲು ತೆಗೆಸಬೇಕು, ಅವರು ಮಾತಿನ ಭರದಲ್ಲಿ ಅದನ್ನು ಹೇಳಿದ್ದಾರೆ.

ಶ್ರೀ ಆರ್.ಅಶೋಕ್:- ಮುಖ್ಯಮಂತ್ರಿಗಳು ಹಾಗು ಮಂತ್ರಿಗಳ ಮೇಲೆ ಹೇಳಿರುವುದನ್ನು ಕಡತದಿಂದ ತೆಗೆಸಬೇಕು, ಅದು ತಪ್ಪು, ಅವರು ನೋಟಿಸ ಕೊಡದೆ ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು:- ಓಕೆ, ಅದನ್ನು ತೆಗೆಸುತ್ತೇನೆ.

(ಗೊಂದಲ)

ರೇವಣ್ಣನವರು ಮಾತನಾಡಿದ ಮೇಲೆ ಈ ವಿಷಯ ಕ್ಲೋಸ್, ಇದಕ್ಕೆ ಎಷ್ಟು ಟೈಂ ಕೊಡಬೇಕು, ಎಲ್ಲಿಯವರೆಗೆ ಟೈಂ ಕೊಡೋಣ. ಅವರ ವಿಷಯವನ್ನು ಹೇಳಿದರು, ಉತ್ತರವನ್ನು ಕೊಟ್ಟರು, ನೀವು ಹೇಳಿದಿರಿ ಇದನ್ನು ಯಾವ ಎಂಡ್‌ಗೆ ತೆಗೆದುಕೊಂಡು ಹೋಗುವುದು.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಮುಖ್ಯಮಂತ್ರಿಗಳು ತನಿಖೆಗೆ ಆರ್ಡರ್ ಮಾಡಿದ್ದಾರೆ, ನೀವು ಈಗ ಆ ಎಲ್ಲಾ ದಾಖಲಾತಿಗಳನ್ನು ತರಿಸಿ ನೋಡುವುದಕ್ಕೆ ನಮಗೆ ಅವಕಾಶ ಕೊಟ್ಟುಬಿಟ್ಟರೆ, ನಾವು ಯಾರು ತಪ್ಪಿತಸ್ಥರೆಂಬುದನ್ನು ಪತ್ತೆಹಚ್ಚಬಹುದೊ? ಆಗ ಒಟ್ಟಿಗೆ ಇದ್ದರು ಏನೇನು ಮಾಡಿಕೊಂಡರೋ ಗೊತ್ತಿಲ್ಲ, ಈಗ ಬೇರೆ ಬೇರೆಯಾಗಿದ್ದಾರೆ. ನಾನು ಯಾರ ಹೆಸರನ್ನು ಹೇಳುವುದಿಲ್ಲ, ಏನಾಗಿದೆ ಎಂಬುದನ್ನು ಹೇಳಬೇಕಲ್ಲ? ಅವರೇ enquiry ಆಗಲಿ, enquiry ಆಗಲಿ ಎಂದು ಹೇಳುತ್ತಿದ್ದಾರಲ್ಲ, ಸದನ ಸಮಿತಿಯಾಗಲಿ, enquiry ಆಗಲಿ ಎಂದು ಹೇಳುತ್ತಿದ್ದಾರಲ್ಲ..

(ಗೊಂದಲ)

ಶ್ರೀ ಬಿ.ಸಿ.ಪಾಟೀಲ್:- ಗಂಡ-ಹೆಂಡತಿ ಸಂಸಾರಸ್ಥರಾಗಿದ್ದಾಗ ಏನು ಮಾಡಿದರೆಂಬುದು ನಮಗೆ ಗೊತ್ತು, ಈಗ ಡೈವರ್ಸ್ ಆಗಿದೆಯಲ್ಲ ಆ ಬಗ್ಗೆ

ಕೆದಕಿಕೊಂಡು ಹೋಗುವುದು ಸೂಕ್ತವಲ್ಲ, ಮಾಡಿಕೊಂಡು ಹೋದರೆ ಇಂಥ ನೂರಾರು ಹಗರಣಗಳು ಬಯಲಿಗೆ ಬರುತ್ತವೆ.

ಶ್ರೀ ಕೆ.ಎಸ್.ಈಶ್ವರಪ್ಪ:– ನಿನ್ನೆ, ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದನಂತರ ಮಾನ್ಯ ರೇವಣ್ಣ, ಮಾನ್ಯ ಕುಮಾರಸ್ವಾಮಿ ಎಲ್ಲರು ಹಿರಿಯರು, ಇಲ್ಲೆಲ್ಲಾ ಚರ್ಚೆ ಮಾಡಿದ್ದಾರೆ, ಅವಕಾಶ ಕೊಡಲಾಗಿದೆ. ಮುಖ್ಯಮಂತ್ರಿಗಳು, ಇದರ ಬಗ್ಗೆ ತನಿಖೆ ಮಾಡಲಾಗುವುದೆಂದು ತುಂಬಾ ಸ್ಪಷ್ಟವಾಗಿ ಘೋಷಣೆ ಮಾಡಿಯೂ ಆಗಿದೆ...

(ಗೊಂದಲ)

ಶ್ರೀ ಸಿದ್ದರಾಮಯ್ಯ:– House Committee ಆಗಲಿ

ಶ್ರೀ ಆರ್.ರೋಷನ್ ಬೇಗ್:– Officers ನಿಂದ ತನಿಖೆ ಮಾಡಿಸಿದರೆ impartial ಆಗಿ ಆಗುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:– ರಾಜೀವ್‌ಗಾಂಧಿ ಯೂನಿವರ್ಸಿಟಿ ಕಟ್ಟುವಂತಹ ಸಂದರ್ಭದಲ್ಲಿ ನಡೆದಿರುವುದು ಜನತೆಗೆ ಗೊತ್ತಿದೆ. ಯಾರು ಮುಖ್ಯಮಂತ್ರಿಯಾಗಿದ್ದರು, ಯಾರು ಉಪಮುಖ್ಯಮಂತ್ರಿಯಾಗಿದ್ದರು, ಯಾರು PWD Minister ಆಗಿದ್ದರು, ಯಾರು Finance Minister ಆಗಿದ್ದರು, ಎಂದು ಗೊತ್ತಿದೆ. ಈಗಾಗಲೇ ಕೆಲವು ದಾಖಲೆಗಳನ್ನು ಅಧಿಕೃತವಾಗಿ PWD Minister ಹೇಳಿದ್ದಾರೆ. ಅವರ ಕಡೆ ಏನು ದಾಖಲೆಗಳಿವೆ ಅದನ್ನು ಅವರು ಕೊಟ್ಟಿದ್ದಾರೆ. ಇವೆಲ್ಲವೂ ಸತ್ಯಾಂಶ ಬರಲಿ ಎಂದು ಸರ್ಕಾರ ತನಿಖೆಗೆ ಆದೇಶ ಮಾಡಿದೆ.

ಶ್ರೀ ಆರ್.ರೋಷನ್ ಬೇಗ್:– ಯಾರು ತನಿಖೆ ನಡೆಸುವುದು? Officers ಆ?

(ಗೊಂದಲ)

ಶ್ರೀ ಸಿದ್ದರಾಮಯ್ಯ: House Committee ಮಾಡಿ enquiryಗೆ ಆರ್ಡರ್ ಮಾಡಿ. ನಿನ್ನೆ ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಟ್ಟಿರಲಿಲ್ಲ. ಈಗ ಇದರ ಬಗ್ಗೆ ಬೆಳಕನ್ನು ಚೆಲ್ಲಿದ್ದೀರಿ, ಎರಡೂ ಕಡೆ ತಪ್ಪು ಆಗಿದೆ ಅನ್ನುವುದು ಗಮನಕ್ಕೆ ಬಂದಿದೆ ಇವಾಗ. ಸದನ ಸಮಿತಿಯನ್ನು ಮಾಡಿ. ಸತ್ಯ ಹೊರಗಡೆ ಬರಲಿ. ನೀವೇ enquiry ಗೆ ಆರ್ಡರ್ ಮಾಡಿದ್ದೀರಿ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ:– ಸದನ ಸಮಿತಿ ಮಾಡಿ ಎಂದರೆ ಸದನ ಸಮಿತಿ ಮಾಡಬೇಕು. CBI enquiry ಎಂದರೆ CBI enquiry ಮಾಡಬೇಕು. ಸರ್ಕಾರ ಇವರ ಹೇಳಿದ ಹಾಗೆ ಕೇಳಿಕೊಂಡು ಬಿದ್ದಿರಬೇಕು. ನೀವು ಹೇಳಿದ ಮಾತು ಕೇಳುವುದಿಲ್ಲ ನಾವು ತೀರ್ಮಾನ ಮಾಡಿದ್ದೇ ಮಾಡುವುದು.

ಶ್ರೀ ಸಿದ್ದರಾಮಯ್ಯ:- ನಾವು ಹೇಳುವುದು ನಾವು ಹೇಳುತ್ತೇವೆ. ನೀವು ಮಾಡುವುದು ನೀವು ಮಾಡುತ್ತೀರಿ. It is a different thing ಜನ ತೀರ್ಮಾನ ಮಾಡುತ್ತಾರೆ ultimately.

ಅಧ್ಯಕ್ಷರು:- ಒಬ್ಬರು ಯಾರಾದರೂ ಮಾತನಾಡಿ. ಎಲ್ಲರೂ ಮಾತನಾಡುವ ಹಾಗಿಲ್ಲ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ನೆನ್ನೆ ಈ ವಿಷಯ ಏನು ನಿಲುವಳಿ ಸೂಚನೆ ನಮ್ಮ ಸ್ನೇಹಿತರು ನಾವು ಎಲ್ಲ ಸೇರಿ ತಂದಿದ್ದೇವೆ. ನೆನ್ನೆ ಅವರು suo=motu ಡಿಸಿಷನ್ ತೆಗೆದುಕೊಂಡಿದ್ದಾರೆ. ಅಲ್ಲಿ ಹೇಳಿದ್ದಾರೆ ಮಾನ್ಯ ರೇವಣ್ಣನವರೇ ಕೇಳಿದ್ದಾರೆ ಅದಕ್ಕೋಸ್ಕರ ಒಬ್ಬ ನಿವೃತ್ತ IAS ಅಧಿಕಾರಿಯಿಂದ ತನಿಖೆ ನಡೆಸುತ್ತೇವೆ ಎಂದು ಹೇಳಿದರು. ನಿವೃತ್ತ IAS ಅಧಿಕಾರಿಯಿಂದ ತನಿಖೆ ಮಾಡಿಸಿ ಎಂದು ರೇವಣ್ಣನವರು ಏನು ಕೇಳಲಿಲ್ಲ. ಆ ಮೇಲೆ ನಂತರ ಸದಸ್ಯರುಗಳು ಅದು conclude ಆಗಲಿಲ್ಲ. ನಿನ್ನೆಯ ಚರ್ಚೆಯ ಕೊನೆಗೆ ಅಧ್ಯಕ್ಷರು ಇವತ್ತು ನಿಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ನಾಳೆ ಸರ್ಕಾರದಿಂದ ಉತ್ತರ ಕೊಡಿಸುತ್ತೇನೆ ಎಂದು ಹೇಳಿದರು. ಅಧ್ಯಕ್ಷರು ಏನು ರೂಲಿಂಗ್ ಕೊಟ್ಟಿದ್ದಾರೆ, ಇವತ್ತು ಚರ್ಚೆಗೆ ಅನುವು ಮಾಡಿ ಕೊಟ್ಟಿದ್ದಾರೆ. ಅದರ ಮೇಲೆ ಚರ್ಚೆ ನಡೆಯಿತು. ಇವತ್ತು ಸದನ ಸಮಿತಿ ಮಾಡಲಿಕ್ಕೆ ಸರ್ಕಾರಕ್ಕೆ ಯಾತಕ್ಕೆ ಭಯ? ನಿಮಗೆ ವಿಷಯ ಗೊತ್ತಿಲ್ಲ ಕುಳಿತುಕೊಳ್ಳಿ. ವಿಷಯ ಗೊತ್ತಿಲ್ಲದೆ ಏಕೆ ಮಾತನಾಡುತ್ತೀರಿ?

(ಗೊಂದಲ)

ಅಧ್ಯಕ್ಷರು:- ಸದಸ್ಯರು ಎಲ್ಲರೂ ಕುಳಿತುಕೊಳ್ಳಬೇಕು. ಪರಸ್ಪರ ಯಾರೂ ಮಾತನಾಡಿಕೊಳ್ಳಬಾರದು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ನಾವು ಯಾವ ಕಾರಣಕ್ಕೋಸ್ಕರ ಇವತ್ತು ಸದನ ಸಮಿತಿ ಮಾಡಿ ಎಂದು ತಮಗೆ ಮನವಿ ಮಾಡುತ್ತಿದ್ದೇವೆಂದರೆ, ಇದರಲ್ಲಿ ಯಾರು ಏನೂ ಗಾಬರಿ ಆಗಬೇಕಾಗಿಲ್ಲ. ಇದರಲ್ಲಿ ಯಾವುದೇ ರೀತಿಯ ಅವ್ಯವಹಾರ ಆಗಿದೆ ಎಂದು ನಾನು ಇಲ್ಲಿ ಆಪಾದನೆ ಮಾಡುತ್ತಿಲ್ಲ. ಇಲ್ಲಿ ಕೆಲವು ಸರ್ಕಾರದ ನಿರ್ಧಾರಗಳನ್ನು ಮಾಡತಕ್ಕಂತಹ ಸಂದರ್ಭದಲ್ಲಿ ಸಣ್ಣ ಪುಟ್ಟ ಲೋಪದೋಷಗಳು ಆಗಿರಬಹುದು. ತೀರ್ಮಾನಗಳು ಮಾಡತಕ್ಕಂಥದ್ದರಲ್ಲಿ ಆಗಿದ್ದರೆ ಇದನ್ನು ಅವ್ಯವಹಾರ ಎಂದು ಏಕೆ ಹೇಳುತ್ತೀರಿ?33 ಕೋಟಿ ರೂ. ಕೊಟ್ಟ ತಕ್ಷಣ ಯಾರೋ ಏನೋ ದುಡ್ಡು ತಿಂದಿದಾರೆ ಎಂದು ನಿಮ್ಮ ಅಭಿಪ್ರಾಯ ಇರಬಹುದು. ಅದಕ್ಕೋಸ್ಕರ ಒಬ್ಬ ನಿವೃತ್ತ IAS ಅಧಿಕಾರಿಯಿಂದ 4-5 ಇಲಾಖೆಗಳ ಮಂತ್ರಿಗಳು, ಮುಖ್ಯ ಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಪ್ರಮುಖ ಇಲಾಖೆಗಳು ಏನಿವೆ, ಎಲ್ಲಾ ಕಾರ್ಯದರ್ಶಿಗಳ ತೀರ್ಮಾನಗಳಿವೆ ಏನು ಇದರಲ್ಲಿ ಇವೆ, ಒಬ್ಬ ನಿವೃತ್ತ IAS ಅಧಿಕಾರಿಯಿಂದ find ourt ಮಾಡುವುದಕ್ಕಾಗುವುದಿಲ್ಲ.

Engineer ಪ್ರಶ್ನೆ ಅಲ್ಲ. ಇದರಲ್ಲಿ ಮುಖ್ಯ ಮಂತ್ರಿ ಆಗಿ ನಾನು ಕೆಲಸ ಮಾಡಿದ್ದೇನೆ, ಮುಖ್ಯ ಮಂತ್ರಿಯಾಗಿ ಅಂದಿನ ಸಚಿವ ಸಂಪುಟದಲ್ಲಿ ಏನು ತೀರ್ಮಾನ ಮಾಡಿದ್ದೇವೆ, ಉಪ ಮುಖ್ಯಮಂತ್ರಿಗಳಾಗಿದ್ದ ಇವತ್ತಿನ ಮುಖ್ಯಮಂತ್ರಿಗಳಿದ್ದಾರೆ, ಲೋಕೋಪಯೋಗಿ ಸಚಿವರಿದ್ದಾರೆ, Medical Education Minister ಇದ್ದಾರೆ. ಇದೆಲ್ಲಾ ಒಬ್ಬ ಸಾಮಾನ್ಯ ನಿವೃತ್ತ IAS ಅಧಿಕಾರಿಯಿಂದ ಈ ವಿಷಯಗಳ ಬಗ್ಗೆ ನ್ಯಾಯವಾದ findings ಕೊಡುವುದಕ್ಕಾಗುವುದಿಲ್ಲ ಎನ್ನುವ ದೃಷ್ಟಿಯಿಂದ ಸದನದ ಎರಡೂ ಭಾಗದ ಸದಸ್ಯರುಗಳನ್ನು ಸದನ ಸಮಿತಿಯಲ್ಲಿ ತಾವು ಆಯ್ಕೆ ಮಾಡಿ ಇರತಕ್ಕಂತಹ ಎಲ್ಲಾ ಕಡತಗಳನ್ನು ಪರಿಶೀಲನೆ ಮಾಡತಕ್ಕಂಥದ್ದಕ್ಕೆ ಸದನದ ಮುಂದೆ ಇಡುವುದಕ್ಕೆ ಅನುವು ಮಾಡಿ ಕೊಟ್ಟಾಗ ಈ ರಾಜ್ಯದ ಜನತೆಗೆ ಸರಿಯಾದ ಸಂದೇಶ ಹೋಗುತ್ತದೆ.

(ಗೊಂದಲ)

ಅಧ್ಯಕ್ಷರು:– ಉದಾಸಿಯವರು ಹೇಳಲಿ. ಆ ಮೇಲೆ ನೀವು ಮಾತನಾಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ(ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಉದಾಸಿಯವರು ಮಾತನಾಡಲಿ. ತದನಂತರ ರೇವಣ್ಣನವರಿಗೂ ಮಾತನಾಡುವುದಕ್ಕೆ ತಾವು ಅವಕಾಶ ಮಾಡಿಕೊಡಿ.

ಅಧ್ಯಕ್ಷರು:– ಕೊಡುತ್ತೇನೆ ಎಂದು ನಾನು ಹೇಳಿದೆನಲ್ಲ. ಉದಾಸಿಯವರೆ, ತಾವು ಈಗ ಮಾತನಾಡಿ.

ಶ್ರೀ ಸಿ.ಎಂ.ಉದಾಸಿ(ಲೋಕೋಪಯೋಗಿ ಸಚಿವರು):– ಮಾನ್ಯ ಅಧ್ಯಕ್ಷರೆ, ನಮಗೆ ಪ್ರಶ್ನೆ ಏನು ಬಂದಿರುವುದೇನೆಂದರೆ, 337 ಕೋಟಿ ರೂಪಾಯಿಗಳಿಗೆ ಏನು ಟೆಂಡರ್ ಆಗಿದೆಯಲ್ಲಾ, ಪ್ಲಾನ್ ಎಸ್ಟಿಮೇಟ್ ಇಲ್ಲದೇ ಮತ್ತು ತಾಂತ್ರಿಕ ಅನುಮೋದನೆ ಇಲ್ಲದೆ ಮತ್ತು ಆಡಳಿತಾತ್ಮಕ ಅನುಮೋದನೆ ಇಲ್ಲದೇ, ಈ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಅನುಮೋದನೆ ಎರಡು ತಿಂಗಳ ನಂತರ ತೆರೆಯುತ್ತಾ ಇವೆ. ಈ ಸಂದರ್ಭದಲ್ಲಿ ಕೇವಲ ಡ್ರಾಯಿಂಗ್‌ನ ಮೇಲೆ ಟೆಂಡರ್‌ನ್ನು ಕರೆಯಬೇಕಾದಂಥ ಸಂದರ್ಭದಲ್ಲಿ ಪ್ಲಾನ್ ಎಸ್ಟಿಮೇಟ್ ಎಷ್ಟು ಮಾಡಿದ್ದಾರೆ ಎನ್ನುವಂಥ ಅನುಮಾನಗಳು ನಮಗೆ ಕಾಡುತ್ತಿವೆ. 330 ಕೋಟಿ ರೂಪಾಯಿಗಳಿಗೆ ಏನು ಟೆಂಡರ್ ಆಯಿತಲ್ಲಾ ಇದರಲ್ಲಿ ನಮಗೆ ಅನುಮಾನಗಳು ಅಡಗಿಕೊಂಡಿವೆ. ಇದಲ್ಲದೇ ಟೆಂಡರ್ ಕರೆಯಬೇಕಾದಂಥ ಸಂದರ್ಭದಲ್ಲಿ ಇವೊತ್ತು ಅವರಿಗೆ mobilization advance ಕೊಡುತ್ತೇವೆ ಎನ್ನುವಂಥಾದ್ದನ್ನು ಡಾಕ್ಯುಮೆಂಟ್ಸ್‌ನಲ್ಲಿ ಟೆಂಡರ್ ಕಂಡೀಶನ್ ಹಾಕಿಲ್ಲ ಎನ್ನುವುದೂ ಕೂಡ ಇರುವುದರಿಂದ, ಈ ಕಂಡೀಶನ್ ಇಟ್ಟಿದ್ದರೆ ಇನ್ನೂ ಅನೇಕ ಜನ ಇದರಲ್ಲಿ participation ಆಗುತ್ತಿದ್ದರು ಎನ್ನುವುದು ಎರಡನೆಯ ಮಾತು. ಆದರೆ ಮೊದಲೇ ಇದರಲ್ಲಿ ಅನುಮಾನ ಇರುವುದು ಏನೆಂದರೆ, ಈ ಟೆಂಡರ್ ಎಸ್ಟಿಮೇಟ್ ಬಗ್ಗೆಯೇ

ನಮಗೆ ಅನುಮಾನ ಇರುವುದರಿಂದ ಈ ಸಮಸ್ಯೆ ನಮ್ಮ ಎದುರುಗಡೆ ಬಂದಿದೆ ಎನ್ನುವುದು ಒಂದು ಮಾತು. ಇನ್ನು ಇವೊತ್ತು 33 ಕೋಟಿ ರೂಪಾಯಿಗಳನ್ನು ಜಮೀನನ್ನೇ ಸ್ವಾಧೀನಪಡಿಸಿಕೊಳ್ಳದೇ, ಭೂಮಿ ನಮ್ಮ ಕಬ್ಜಾದಲ್ಲಿ ಇಲ್ಲದೇ ಟೆಂಡರ್ ಕರೆದಿರುವಂಥ ವ್ಯವಸ್ಥೆ, ಅದಕ್ಕಾಗಿ ಭೂಮಿ ಯಾವಾಗ ಕಬ್ಜಾ ಪಡೆದರು ಎನ್ನುವುದನ್ನು ನಾವು 7 ನೇ ತಿಂಗಳಿನಲ್ಲಿ ಕಬ್ಜಾಗೆ ಬರುತ್ತದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುವಂಥ ವ್ಯವಸ್ಥೆ ಮಾಡಿದ್ದೇನೆ. 9ನೇ ತಿಂಗಳಿನಲ್ಲಿ ಕೂಡ ಕಂಟ್ರ್ಯಾಕ್ಟರೇ ಬರೆಯುತ್ತಾನೆ. ಕಂಟ್ರ್ಯಾಕ್ಟರ್ ಬರೆದದ್ದನ್ನು ನಾನು ನಿಮಗೆ ಓದಿ ಹೇಳಿದೆ. ನಾವು ಬರೆದದ್ದಲ್ಲ. ಕಂಟ್ರ್ಯಾಕ್ಟರ್ ಅಲ್ಲಿ ಹೋದಾಗ ಆಗಿರುವಂಥ ಪರಿಸ್ಥಿತಿಯನ್ನು ನಾನು ಓದಿ ಹೇಳಿದೆ. ನಮಗೆ ಅಲ್ಲಿ ಭೂಮಿ ಲಭ್ಯವಿಲ್ಲವೆನ್ನುವುದನ್ನು ಕಂಟ್ರ್ಯಾಕ್ಟರ್ ಸ್ಪಷ್ಟವಾಗಿ ವ್ಯಕ್ತಪಡಿಸುತ್ತಾನೆ. ಆ ವರದಿಯನ್ನು ಓದಿ ನಿಮಗೆ ಇದರಲ್ಲಿ 9ನೇ ತಿಂಗಳಿನಲ್ಲಿ ಏನಾಯಿತು ಎನ್ನುವುದನ್ನು ಓದಿ ಹೇಳುತ್ತಿದ್ದೇನೆ. ಹೀಗೆಲ್ಲಾ ಇರಬೇಕಾದರೆ 33 ಕೋಟಿ ರೂಪಾಯಿಗಳನ್ನು ಅಡ್ವಾನ್ಸ್ ಕೊಡುವ ಅವಶ್ಯಕತೆ ತರಾತುರಿ ಏನಿತ್ತು ಎನ್ನುವುದು ಸ್ವಾಭಾವಿಕವಾಗಿ ಅನುಮಾನ ಬರುತ್ತದೆ. ಇದಕ್ಕೆ ಶಿಫಾರಸ್ಸು ಮಾಡಿದಂಥ ಅಧಿಕಾರಿಗಳಾಗಲಿ, ಅವರು ಮಾಡಿರುವಂಥ ಲೋಪದೋಷಗಳಲ್ಲಾಗಲಿ, ಇದರಲ್ಲಿ ಇಲಾಖಾಧಿಕಾರಿಗಳು ಮತ್ತು ಗುತ್ತಿಗೆದಾರರ ಮಧ್ಯದಲ್ಲಿ nexus ಇರಬೇಕು ಎನ್ನುವ ಬಗ್ಗೆ ನಮಗೆ ಅನುಮಾನಗಳು ಕಾಡುತ್ತಿರುವುದರಿಂದ ಇದರ ಬಗ್ಗೆ ವಿಚಾರಣೆ ಆಗಬೇಕು ಎನ್ನುವ ಉದ್ದೇಶದಿಂದ ಮುಖ್ಯಮಂತ್ರಿಗಳು ಆದೇಶವನ್ನು ಮಾಡಿದ್ದಾರೆ. ಮುಖ್ಯಮಂತ್ರಿಗಳು ನಿನ್ನೆಯೇ ಆದೇಶವನ್ನು ಮಾಡಿರುವಾಗ ಇವೊತ್ತು ಮತ್ತೆ ನಾನು ಹೇಳುತ್ತಿದ್ದೇನೆ, ಮತ್ತೊಂದು ಸದನ ಸಮಿತಿ ಅವಶ್ಯಕತೆ ಇರುವುದಿಲ್ಲ. ಒಂದು ತಿಂಗಳಿನಲ್ಲಿ ವರದಿ ಕೊಡಬೇಕು. ಆ ವರದಿಯಲ್ಲಿ ಯಾರು ದಾರಿ ತಪ್ಪಿಸಿದರು ಎನ್ನುವುದೂ ಕೂಡ ಗೊತ್ತಾಗುತ್ತದೆ. ಯಾರು ಯಾರು ಇದರಲ್ಲಿ ಷಾಮೀಲಾಗಿದ್ದಾರೆ ಎನ್ನುವುದೂ ಕೂಡ ವ್ಯವಸ್ಥೆಯಲ್ಲಿ ಹೊರಗೆ ಬರುತ್ತದೆ. ಅದಕ್ಕೆ ತಾವು ದಯವಿಟ್ಟು ಅವಕಾಶ ಮಾಡಿಕೊಡಿ. ವಿಚಾರಣೆಯಾಗಲಿ ಎನ್ನುವುದನ್ನು ನಾನು ಇಲ್ಲಿ ಹೇಳಬಯಸುತ್ತೇನೆ.

(ಗೊಂದಲ)

ಅಧ್ಯಕ್ಷರು:– ರೇವಣ್ಣನವರೆ ತಾವು ಮಾತನಾಡಿ.

(ಗೊಂದಲ)

ಅಧ್ಯಕ್ಷರು:– ಸಿದ್ದು ಸವದಿಯವರೆ, ದಯವಿಟ್ಟು ತಾವು ಕುಳಿತುಕೊಳ್ಳಿ. ಅಶೋಕ್ ಪ್ಲೀಸ್ ಕುಳಿತುಕೊಳ್ಳಿ. ಸೋಮಶೇಖರ್ ರೆಡ್ಡಿಯವರೆ ಪ್ಲೀಸ್.

ಶ್ರೀ ಸೋಮಶೇಖರ ರೆಡ್ಡಿ:– ಮಾನ್ಯ ಅಧ್ಯಕ್ಷರೆ, ಪ್ರತಿ ಸಾರಿ ನೀವು ಅವರಿಗೇ ಮಾತನಾಡಲು ಅವಕಾಶ ಕೊಡುತ್ತೀರಿ. ನಮಗೆ ಅವಕಾಶವೇ ಕೊಡುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಅಧ್ಯಕ್ಷರೆ, ನಾಳೆಯೂ ಒಂದು ದಿವಸ ಸದನ ಕಲಾಪ ವಿಸ್ತರಣೆ ಮಾಡಿ ಅವರಿಗೆಲ್ಲಾ ಮಾತನಾಡಲು ಅವಕಾಶ ಕೊಡಿ

ಸಾರ್. ನಾವು ಇನ್ನೂ ಒಂದು ವಾರ ಕುಳಿತುಕೊಳ್ಳುತ್ತೇವೆ. ನಮ್ಮದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು:- ರೇವಣ್ಣನವರೆ ಈಗ ತಾವು ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಸಚಿವರು ಎರಡ್ಮೂರು ಆಪಾದನೆಗಳನ್ನು ಮಾಡಿದ್ದಾರೆ. ಎಸ್ಟಿಮೇಟ್ ಸರಿಯಿಲ್ಲವೆಂದು ಒಂದು ಅಪಾದನೆಯನ್ನು ಮಾಡಿದ್ದಾರೆ. ಆಮೇಲೆ ಲ್ಯಾಂಡೇ ಇರಲಿಲ್ಲವೆಂದು ಹೇಳುತ್ತಾರೆ. ಕೆ.ಐ.ಎ.ಡಿ.ಬಿ.ಯವರು ತಾನೆ ಭೂಮಿಯನ್ನು ಅಕ್ವೈರ್ ಮಾಡಿರುವುದು. ಕೆ.ಐ.ಎ.ಡಿ.ಬಿ.ಯವರು ಲ್ಯಾಂಡ್ ಅಕ್ವಿಸಿಶನ್‌ನಲ್ಲಿ ಫೋರ್ ಒನ್ ಮಾಡಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ಈಗಾಗಲೇ ಹೇಳಿದಿರಲ್ಲಾ.

ಶ್ರೀ ಹೆಚ್.ಡಿ.ರೇವಣ್ಣ:- ತಾವು ಒಂದು ನಿಮಿಷ ಸುಮ್ಮನಿರಿ ಸಾರ್. ಎರಡು ನಿಮಿಷ ನಾನು ಹೇಳುವವರೆಗೆ ಸುಮ್ಮನಿರಿ. ಸಾರ್ ನಿಮಗೆ ಡಾಕ್ಯುಮೆಂಟ್ಸ್‌ನ್ನು ಕೊಡುತ್ತೇನೆ. ನಾನು ನಿಮಗೆ ನಮ್ಮನ್ನೆಲ್ಲಾ ಬಲಿ ಹಾಕೋಕ್ಕೆ ಡಾಕ್ಯುಮೆಂಟ್ಸ್ ಕೊಡುತ್ತೇನೆ. ನೀವು ಸ್ವಲ್ಪ ತಾಳ್ಮೆಯಿಂದ ಇರಿ ಸಾರ್ ನೀವು. ನಮಗೆ ಬಲಿ ಹಾಕುವುದಕ್ಕೆ ಡಾಕ್ಯುಮೆಂಟ್ಸ್ ಕೊಡುತ್ತೇನೆ ನೀವು ಸುಮ್ಮನಿದ್ದರೆ. ಮಾನ್ಯ ಅಧ್ಯಕ್ಷರೆ, 27ನೇ ತಾರೀಖು ನೋಟಿಫಿಕೇಶನ್ ಅನ್ನು ಕೆ.ಐ.ಎ.ಡಿ.ಬಿ.ಯಿಂದ ಮಾಡಿದ್ದಾರೆ. ಯಾವುದು ಪ್ಲಾನ್ ಏನೂ ಇಲ್ಲದೇ ಮಾಡಿದ್ದಾರೆ ಎಂದು ಹೇಳಿದ್ದಾರೆ, ಒಪ್ಪಿಕೊಳ್ಳುತ್ತೇನೆ ಸಾರ್. ಕೆ.ಐ.ಎ.ಡಿ.ಬಿ.ಯಿಂದ 20 ಸಾವಿರ ಎಕರೆ ಜಮೀನು ಅಕ್ವೈರ್ ಮಾಡಿದ್ದಾರೆ ಫೋರ್ ಒನ್‌ನಲ್ಲಿ. 20 ಸಾವಿರ ಎಕರೆ ಜಮೀನು. ಕೇವಲ ಫೋರ್ ಒನ್.

ಅಧ್ಯಕ್ಷರು:- ರೇವಣ್ಣನವರೆ, ನೀವು ನೇರವಾಗಿ ಈ ಸಬಜೆಕ್ಟ್‌ಗೆ ಬನ್ನಿ. ಕೆ.ಐ.ಎ.ಡಿ.ಬಿ.ಯದು ಬೇಡ.

ಶ್ರೀ ಹೆಚ್.ಡಿ.ರೇವಣ್ಣ:- ಕೆ.ಐ.ಎ.ಡಿ.ಬಿ.ವಿಷಯ ಹೇಳಬೇಕಾಗುತ್ತದೆ. 20 ಸಾವಿರ ಎಕರೆ ಜಮೀನು ಅಕ್ವೈರ್ ಮಾಡಿ, ಇದರಲ್ಲಿ ನಿಮ್ಮ ಉದ್ಯೋಗ ಮಿತ್ರದಲ್ಲಿ ಪ್ಲಾನ್ ಇಲ್ಲ, ಸೈಟ್ ಇಲ್ಲ, ನೂರು ನೂರು ಎಕರೆ ಜಮೀನನ್ನು, ಫೋರ್ ಒನ್ ಆದ ತಕ್ಷಣವೇ 20 ಸಾವಿರ ಎಕರೆ ಜಮೀನನ್ನು ಅಕ್ವೈರ್ ಮಾಡಿ ಅಲಾಟ್ ಮಾಡಿದ್ದಾರೆ. ಅಲಾಟ್ ಫೈನಲ್, ಅದು 1 ಸಾವಿರ ಕೋಟಿ ರೂಪಾಯಿ ಮಾಡಿದ್ದಾರೆ. ಇದನ್ನೂ ಅದನ್ನೂ ಎರಡನ್ನೂ ಟ್ಯಾಲಿ ಮಾಡಿ ಎನ್‌ಕ್ವೈರಿ ಮಾಡುವುದಕ್ಕೆ ತಾಕತ್ತು ಇದೆಯೇ ಕೇಳಿ.

ಅಧ್ಯಕ್ಷರು:- ಅದು ಬಿಡಿ. ಆ ಸಬ್ಜೆಕ್ಟ್ ಬಗ್ಗೆ ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ. ರೇವಣ್ಣನವರೆ, ನೋಡಿ ಈ ರೀತಿ ಬೇರೆಯದ್ದಕ್ಕೆ ಕಂಪೇರ್ ಮಾಡಬೇಡಿ. ಆ ಸಬ್ಜೆಕ್ಟ್ ಮೇಲೆ ಮಾತನಾಡಲು ಬೇರೆ ರೂಪದಲ್ಲಿ ನೋಟಿಸ್ ಕೊಡಿ. ಅದನ್ನು ಬಿಟ್ಟು ನೀವು ಈ ರೀತಿ ವಾದ ಮಾಡಿದರೆ ಅರ್ಥವಿಲ್ಲ. ಆ ವಿಷಯದ ಮೇಲೆ ಮಾತನಾಡಲು ಬೇರೆ ನೋಟಿಸ್ ಕೊಡಿ.

(ಗೊಂದಲ)

ಅಧ್ಯಕ್ಷರು:– ಈಗ ಈ ಸಬ್ಜೆಕ್ಟ್ ಕ್ಲೋಸ್. ಈಗ ಈ ವಿಷಯದ ಮೇಲಿನ ಚರ್ಚೆ ಸಾಕು. ತಾವೂ ಕೂಡ ಹೇಳಿದ್ದೀರಿ. ಸರ್ಕಾರದವರು ಕೂಡ ಉತ್ತರವನ್ನು ಕೊಟ್ಟಿದ್ದಾರೆ. ಅವರು ಎನ್‌ಕ್ವೈರಿ ಕಮಿಶನ್ ಮಾಡುತ್ತೇವೆಂದು ಹೇಳಿದ್ದಾರೆ. ಆದುದರಿಂದ ಈ ವಿಷಯದ ಮೇಲಿನ ಚರ್ಚೆಯನ್ನು ಇಲ್ಲಿಗೇ ಮುಕ್ತಾಯಗೊಳಿಸುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೆ, ಅವರಿಬ್ಬರ ದೃಷ್ಟಿಯಿಂದ ಇದು ಕ್ಲೋಸ್, ಓಪನ್ ಪ್ರಶ್ನೆಯಲ್ಲ.

ಅಧ್ಯಕ್ಷರು:– ಕ್ಲೋಸ್, ಓಪನ್ ಎಂಬ ಬಗ್ಗೆ ಅವರಿಬ್ಬರಿಗೆ ಬಿಟ್ಟಿದ್ದು. ಆದರೆ ನಾನು ಅಧ್ಯಕ್ಷನಾಗಿ ಸದನದಲ್ಲಿ ಇನ್ನೂ ಹಲವಾರು ವಿಷಯಗಳ ಬಗ್ಗೆ ನಡಾವಳಿ ನಡೆಯಲು ಅವಕಾಶ ಮಾಡಿಕೊಡಬೇಕು. ಈಗ ಈ ವಿಷಯಕ್ಕೆ ನಾನು ಚರ್ಚೆಗೆ ಅವಕಾಶ ಕೊಟ್ಟಿದ್ದೆ. ಈಗ ನಾನು ಕ್ಲೋಸ್ ಮಾಡಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೆ, ನಾವೆಲ್ಲರೂ ಕೂಡ ಈ ಚರ್ಚೆಯಲ್ಲಿ ಭಾಗವಹಿಸಿದ್ದೇವೆ. ಈ ವಿಷಯ ಈಗ ಈ ಸದನದ ಸ್ವತ್ತಾಗಿದೆ. ಈ ಸದನದ ಸ್ವತ್ತಾದ ಮೇಲೆ ಅದಕ್ಕೆ ಸಮಾಧಾನಕರವಾದಂಥ ಉತ್ತರ ಸಿಗಬೇಕು. ಈಗೇನಾಗಿದೆಯೆಂದರೆ,

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್ ಕೊಟ್ಟಮೇಲೂ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:– ಪ್ಲಿಸ್, ನಾನು ಈಲ್ಡ್ ಆಗಿಲ್ಲ.

(ಗೊಂದಲ)

ಅಧ್ಯಕ್ಷರು:– ಈ ವಿಷಯದ ಚರ್ಚೆಯನ್ನು ಮುಕ್ತಾಯ ಮಾಡಿದ್ದೇನೆ. ಈಗ ಬೇರೆ ವಿಷಯಗಳ ಬಗ್ಗೆ ಚರ್ಚೆಯಾಗಬೇಕಿದೆ. ಇನ್ನೂ ಕಾಲಿಂಗ್ ಅಟೆನ್‌ಶನ್‌ಗಳೀವೆ. ಬಹಳಷ್ಟು ಸದಸ್ಯರು ನಮ್ಮ ಕಾಲಿಂಗ್ ಅಟೆನ್‌ಶನ್‌ಗಳು ಚರ್ಚೆಗೆ ಬರಲೇ ಇಲ್ಲವೆಂದು ಕೇಳುತ್ತಿದ್ದಾರೆ.

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಅಧ್ಯಕ್ಷರೆ, ತಾವು ಈಗಾಗಲೇ ರೂಲಿಂಗ್ ಕೊಟ್ಟಿದ್ದೀರಿ. ಅದಕ್ಕೂ ಮುಂಚೆ ಚರ್ಚೆಯಲ್ಲಿ ಭಾಗವಹಿಸಲು ಎಲ್ಲರಿಗೂ ಸಾಕಷ್ಟು ಅವಕಾಶವನ್ನು ಮಾಡಿಕೊಟ್ಟಿದ್ದೀರಿ.

ಅಧ್ಯಕ್ಷರು:– ರೂಲ್ 69ರ ಪ್ರಕಾರ ಎರಡು ತಾಸು ಚರ್ಚೆ ಮಾಡಲು ಅವಕಾಶ ಕೊಟ್ಟಿದ್ದೆ. ಆದರೆ ಈ ವಿಷಯದ ಮೇಲೆ ಮೂರು ತಾಸು ಚರ್ಚೆಯಾಗಿದೆ. ಇನ್ನೂ ಎಲ್ಲಿಯವರೆವಿಗೆ ಇದನ್ನು ತೆಗೆದುಕೊಂಡು ಹೋಗುವುದು. ಅವರು ಹೌಸ್ ಕಮಿಟಿಯಾಗಬೇಕೆನ್ನುತ್ತಾರೆ. ಇವರು ಆಗುವುದಿಲ್ಲವೆನ್ನುತ್ತಾರೆ. ಹೀಗಿದ್ದರೂ ಇದನ್ನು ಎಲ್ಲಿಯವರೆವಿಗೆ ತೆಗೆದುಕೊಂಡು ಹೊಗುವುದು. ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಅನುಭವವಿದ್ದವರಿದ್ದೀರಿ. ಈ ವಿಷಯವನ್ನು ಎಲ್ಲಿಯವರೆವಿಗೆ

ತೆಗೆದುಕೊಂಡು ಹೋಗುತ್ತೀರಿ? ಒಂದು ವಿಚಾರಣೆ ಮಾಡಲು ನೇಮಕ ಮಾಡಿದ್ದೇವೆಂದು ಅವರು ಹೇಳಿದ್ದಾರೆ. ಇವರು ಜಂಟಿ ಸದನ ಸಮಿತಿ ಮಾಡಬೇಕೆನ್ನುತ್ತಾರೆ, ಮಾಡುವುದಿಲ್ಲವೆಂದು ಸರ್ಕಾರದವರು ಹೇಳುತ್ತಾರೆ. ಎರಡು ತಾಸು ಚರ್ಚೆಯಾಗಬೇಕಾದ ಕಡೆ ಮೂರು ತಾಸು ಚರ್ಚೆಯಾಗಿದೆ. ಆದರೂ ಈ ವಿಷಯದ ಬಗ್ಗೆ ಇನ್ನೂ ಎಲ್ಲಿಯವರೆವಿಗೆ ಚರ್ಚೆಗೆ ಅವಕಾಶ ಕೊಡಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಾವು ಚರ್ಚೆಗೆ ಹೋಗುವುದಿಲ್ಲ. ನಾವು ನಿಮ್ಮಲ್ಲಿ ಅಪೀಲ್ ಮಾಡುತ್ತಿದ್ದೇವೆ.

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್ ಕೊಟ್ಟಿದ್ದಿರಿ. ತಾವು ಬೇರೆ ವಿಷಯ ತೆಗೆದುಕೊಳ್ಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಾವು ಚರ್ಚೆ ಮಾಡಿದ ಮೇಲೆ ಒಂದು ನಿರ್ಣಯಕ್ಕೆ ಬರಬೇಕು.

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ಅಧ್ಯಕ್ಷರೆ, ತಾವು ಅವರಿಗೆ ಮಾತನಾಡಲು ಅವಕಾಶ ಕೊಟ್ಟಿಲ್ಲ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕರು ಅನುಮತಿ ಕೊಟ್ಟಿದ್ದಾರೆಯಾದ ಕಾರಣ ಅವರು ಮಾತನಾಡುತ್ತಿದ್ದಾರೆ.

ಶ್ರೀ ಕೆ.ಎಸ್.ಈಶ್ವರಪ್ಪ:- ಎಲ್ಲಿ ಕೊಟ್ಟಿದ್ದಾರೆ? ಎಲ್ಲಿ ಕೊಟ್ಟಿದ್ದಾರೆ?

ಶ್ರೀ ಸಿದ್ದರಾಮಯ್ಯ:- ಅವರನ್ನು ನೀವು ಕೇಳಿ, ಮಾನ್ಯ ಅಧ್ಯಕ್ಷರು ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು ಅನುಮತಿ ಕೊಟ್ಟಿರುವುದರಿಂದ ಅವರು ಮಾತನಾಡುತ್ತಿದ್ದಾರೆ. ಹೀಗೆ ನೀವು ಮಧ್ಯೆ ಎದ್ದು ನಿಂತು ಮಾತನಾಡಿ ಡಿಸ್ಟರ್ಬ್ ಮಾಡಿದರೆ ಹೇಗೆ?

ಶ್ರೀ ಕೆ.ಎಸ್.ಈಶ್ವರಪ್ಪ:- ಅವರು ಅನುಮತಿ ಕೊಟ್ಟಿಲ್ಲ. ಇವರೇ ಎದ್ದು ನಿಂತು ಕೊಂಡು ಸುಮ್ಮನೆ ಮಾತನಾಡುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ನೀವು ವಿರೋಧ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಅನುಮತಿ ಕೊಟ್ಟಿಲ್ಲವೆ?

ಅಧ್ಯಕ್ಷರು:- ಆಯಿತು. ನೀವು ಈಗ ಕುಳಿತುಕೊಳ್ಳಿ.

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್ ಕೊಟ್ಟಿದ್ದೀರಿ ಎಂದು ಹೇಳುತ್ತಿದ್ದೇವೆ. ನೀವು ಎಷ್ಟು ಹೊತ್ತಾದರೂ ಅವರಿಗೆ ಚರ್ಚೆಗೆ ಅವಕಾಶ ಕೊಡಿ. ನಾವು ತಲೆ ಹಾಕುವುದಿಲ್ಲ. ಸರ್ಕಾರದ ಉತ್ತರವನ್ನು ಈಗಾಗಲೇ ಕೊಟ್ಟಾಗಿದೆ. ಮಾನ್ಯ ಕುಮಾರಸ್ವಾಮಿಯವರು ನಿವೃತ್ತ ಅಧಿಕಾರಿಯಿಂದ ವಿಚಾರಣೆ ಏಕೆ ಎಂದು ಕೇಳಿದ್ದಾರೆ. ಅವರು ಹೇಳಿದ ಹಾಗೆ ನಾವು ಕೇಳುವುದಕ್ಕಾಗುವುದಿಲ್ಲ. ಹೌಸ್ ಕಮಿಟಿ ಮಾಡಿ, ಸಿ.ಬಿ.ಐ. ಕಮಿಟಿಗೆ ಕೊಡಿ ಎಂದು ಅವರು ಹೇಳಿದಂತೆಲ್ಲಾ ಕೇಳುವುದಕ್ಕೆ ಆಗುವುದಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ತುಂಬಾ ಸ್ಪಷ್ಟವಾಗಿ ಹೇಳಿದ್ದಾರೆ. ನಾವು ತನಿಖೆಯನ್ನು ಈಗಿರುವಂಥ ಅಧಿಕಾರಿಗಳ ಮುಖಾಂತರ ಮಾಡಿದರೆ

ಅನುಮಾನ ಬರುತ್ತದೆ, ಸರಿಹೋಗುವುದಿಲ್ಲ. ಅದಕ್ಕೋಸ್ಕರ IAS ನಿವೃತ್ತ ಅಧಿಕಾರಿಗಳಿಂದ ಮಾಡಿಸುತ್ತೇವೆ ಎಂದರೆ ಮತ್ತೂ ಕೂಡ ನೀವು ಈ ರೀತಿ ಮಾಡುವುದಿಲ್ಲ. ಇನ್ನು ಮುಂದೆ ನೀವುಂಟು ಅವರುಂಟು, ನಾವಂತೂ ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೆ, ಈಗ ನನ್ನ ಪ್ರಶ್ನೆ ಇಷ್ಟೆ....

ಅಧ್ಯಕ್ಷರು:– ಒಂದು ನಿಮಿಷ, ಇವರ ಮಾತು ಮುಗಿದತಕ್ಷಣ ನೀವು statement ಕೊಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ನಾನು ಈಗ ಇದನ್ನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ, ತಮಗೆ ಗೊತ್ತಿದೆ, ಚರ್ಚೆಯಲ್ಲಿ ಭಾಗವಹಿಸಲಿಲ್ಲ. ಆದರೆ ನಮ್ಮ ಮುಂದೆ ಈಗ ಇರತಕ್ಕಂಥ issue ಏನೆಂದರೆ, 350 ಕೋಟಿ ರೂಪಾಯಿ contract approval ಮತ್ತು 33 ಕೋಟಿ ರೂಪಾಯಿ mobilization ಮಾಡುವುದಕ್ಕೆ advance ಕೊಟ್ಟಿದೆ, ಇದು ಒಂದು ವಾದ ವಿವಾದ, allegation, counter allegation ನಡೆದಿದೆ. ಈ ಮಧ್ಯದಲ್ಲಿ ಅದು ಸರಿಯೋ ತಪ್ಪೋ ಎಂದು IAS officers ಅನ್ನು....

ಅಧ್ಯಕ್ಷರು:– Please ಕುಳಿತುಕೊಳ್ಳಿ, ಒಂದೆರಡು ನಿಮಿಷ ತಡೆಯಿರಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ:– Retired IAS officerನಿಂದ enquiry ಸರಿ ಹೋಗುವುದಿಲ್ಲವೆನ್ನುವ ಮಾತು ಏಕೆ ಹೇಳುತ್ತಿದ್ದೇನೆಂದರೆ, ಇಲ್ಲಿ ಇರುವಂಥಾದ್ದು directlly file ಮೇಲೆ signature ಮಾಡಿದ್ದಕ್ಕಾಗಿ...

(ಗೊಂದಲ)

ಅಧ್ಯಕ್ಷರು:– ಮಾನ್ಯ ವಿರೋಧ ಪಕ್ಷದ ನಾಯಕರೇ, ಇದನ್ನೆಲ್ಲಾ ಅವರು ಹೇಳಿದರು. ಅದಕ್ಕೆ ನೀವು ಹೇಳಿದಿರಿ, ಅವರು ಹೇಳಿದರು, ಈಗ ಸರ್ಕಾರದವರು ತಯಾರಿಲ್ಲ. ಆದುದರಿಂದ ನೀವು ಪದೇ ಪದೇ ಅದನ್ನೇ ಕೇಳಬೇಡಿ. ಚರ್ಚೆಗೆ ಅವಕಾಶ ಕೊಡಬೇಕು ಎಂದು ಇದೆ, ನನ್ನ duty ನಾನು ಮಾಡಿ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ. ಇದಕ್ಕೆ ರೂಲ್ 69 ಪ್ರಕಾರ ಒಂದು ಗಂಟೆ ಕಾಲ ಚರ್ಚೆಗೆ ಅವಕಾಶ ಕೊಡಬೇಕು. ಈಗ ಮೂರು ಗಂಟೆ ಅವಕಾಶ ಕೊಟ್ಟಿದ್ದೇನೆ. ನಾನು ಮುಂದಿನ proceedings ನಡೆಸಬೇಕು. ಇನ್ನು Calling attention, Rule 69 ಮೇಲೆ ಮಾತನಾಡುವಂತಹ ವಿಚಾರ ಇವೆ. ನಾನು ಈ ವಿಚಾರವನ್ನು ಇಲ್ಲಿಗೆ close ಮಾಡಿದ್ದೇನೆ. ದಯವಿಟ್ಟು ಸಹಕರಿಸಿ. ಇದರ ಮೇಲೆ ಹೆಚ್ಚಿಗೆ ನಾನು ಮಾತನಾಡುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೆ, ತಾವು ಯೋಚನೆ ಮಾಡಿ. House Committee ಮಾಡಿ....

ಅಧ್ಯಕ್ಷರು:– ಈಗ ಜನಾರ್ಧನ ರೆಡ್ಡಿಯವರು ಇನ್ನೊಂದು subject ಬಗ್ಗೆ ಹೇಳುತ್ತಾರೆ. ಬಹುಶಃ ಅವರು ನಿಮ್ಮ subject ಬಗ್ಗೆ ಕಮಿಟಿ ಮಾಡುವುದಕ್ಕೆ ಒಪ್ಪಿಕೊಂಡ ಹಾಗೆ ಕಾಣುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– IAS officers ಹೇಗೆ ಮಾಡಬೇಕು?

ಅಧ್ಯಕ್ಷರು:– ಯಾರು ಅದನ್ನು ಒಪ್ಪಿಕೊಂಡಿದ್ದಾರೆ ಅವರನ್ನು ಕೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ನೀವು ಮಾಡಿ ಸಾರ್, ಇದು ನಮ್ಮ appeal, House Committee ಮಾಡಿ, ನಿಮ್ಮ ಕೈಯಲ್ಲಿ ಇದೆ.

ಅಧ್ಯಕ್ಷರು:– ಈಗ ಸರ್ಕಾರದ ಉತ್ತರವನ್ನು ಕೇಳಿದಿರಿ, ಎಲ್ಲಾ ಆಗಿದೆ, ಈ ವಿಷಯದಲ್ಲಿ ನಾನು ಚರ್ಚೆಯನ್ನು ಮುಕ್ತಾಯಗೊಳಿಸಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ವಿಷಯ ಹೊರಗೆ ಬರಬೇಕು ಎಂದರೆ ಗೊತ್ತಾಗಬೇಕಲ್ಲ.

ಅಧ್ಯಕ್ಷರು:– ಈ ವಿಷಯದಲ್ಲಿ ನಾನು ಚರ್ಚೆಯನ್ನು ಮುಕ್ತಾಯಗೊಳಿಸಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಯಾರ್ಯಾರು signature ಮಾಡಿದ್ದಾರೆ, ಯಾರು ಇಲ್ಲ, ಯಾರ responsibility ಇತ್ತು? we have to see.

(ಗೊಂದಲ)

ಅಧ್ಯಕ್ಷರು:– ಇನ್ನು ಬೇರೆ ವಿಷಯಗಳು ಇವೆ, ದಯವಿಟ್ಟು ಅದಕ್ಕೆ ಅವಕಾಶ ಕೊಡಿ. ಇನ್ನು ಬೇರೆ ಬೇರೆ proceedings ನಡೆಸಬೇಕಾಗಿದೆ, ದಯವಿಟ್ಟು co-operation ಕೊಡಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಇಲ್ಲಿ document ಇಡುತ್ತಿದ್ದೇವೆ. ಇದರ ಮೇಲೆ ಸರ್ಕಾರಕ್ಕೆ ಮಾಡುವುದಕ್ಕೆ ಇವತ್ತು ಯೋಗ್ಯತೆ ಇಲ್ಲವೆಂದರೆ, ಏತಕ್ಕೆ ಈ document ಇಡುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು:– ಬೇರೆ ವಿಷಯ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ:– ಮಾನ ಮರ್ಯಾದೆ ಈ ಸರ್ಕಾರಕ್ಕೆ ಇದೆಯಾ?

ಅಧ್ಯಕ್ಷರು:– ಅವರು ತಯಾರಿಲ್ಲ, ನೀವು ಬೇಕೆಂದು ಹೇಳುತ್ತೀರಿ, ಇನ್ನು ಇದನ್ನು ಎಲ್ಲಿಯವರೆಗೆ ಎಳೆದುಕೊಂಡು ಹೋಗುವುದು?

(ಗೊಂದಲ)

(ಈ ಹಂತದಲ್ಲಿ JD(S) ಶಾಸಕರು ಧರಣಿ ಮಾಡಲು ಬಾವಿಗೆ ಬಂದರು)

(ಗೊಂದಲ)

ಅಧ್ಯಕ್ಷರು:– ಈಗಾಗಲೇ ರೂಲ್ 69 ಮೇಲೆ ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ಅವಕಾಶ ಕೊಟ್ಟಿದ್ದೇನೆ. ಅದಕ್ಕೆ ಒಂದು ಗಂಟೆ ಕಾಲ ಅವಕಾಶ ಇದೆ, ಇಲ್ಲಿ ಮೂರು ಗಂಟೆಗಿಂತ ಹೆಚ್ಚಿಗೆ ಚರ್ಚೆ ಮಾಡಿದ್ದೀರಿ. ಅದಕ್ಕೆ ಈಗಾಗಲೇ ಸರ್ಕಾರ ಉತ್ತರ ಕೊಟ್ಟಿದೆ. ಸ್ಪಷ್ಟೀಕರಣ ಕೇಳಿದ್ದೀರಿ. ರೂಲ್ 71 ಪ್ರಕಾರ ಕೂಡ ಚರ್ಚೆ ಮಾಡುವುದಕ್ಕೆ ಏನು limitations ಇದೆ, ಅದರ ಪ್ರಕಾರ ಕೂಡ ನಾನು ಅವಕಾಶವನ್ನು ಕೊಟ್ಟಿದ್ದೇನೆ. ಆದುದರಿಂದ ಆ ಅವಧಿ ಮುಗಿದಿದೆ. ಮುಂದೆ ಇನ್ನು ಹಲವಾರು ವಿಷಯಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ. ದಯವಿಟ್ಟು ತಾವು ತಮ್ಮ ಸ್ಥಾನಗಳಿಗೆ ಹೋಗಿ ಮುಂದಿನ proceedings ನಡೆಯುವುದಕ್ಕೆ ಸಹಕಾರ ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ನೀವು ಬಹಳ rigid ಆಗುವುದಕ್ಕೆ ಹೋಗಬೇಡಿ.

ಅಧ್ಯಕ್ಷರು:– ನಾನು rigid ಆಗಿಲ್ಲ.

ಶ್ರೀ ಸಿದ್ದರಾಮಯ್ಯ:– ಸರ್ಕಾರ ಮೊಂಡುತನ ತೋರಿಸುತ್ತದೆ ಎಂದು ನೀವು rigid ಆಗುವುದಕ್ಕಾಗುವುದಿಲ್ಲ.

ಅಧ್ಯಕ್ಷರು:– ನಾವೇನು rigid ಇಲ್ಲ, ನಿಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು, ಕೊಟ್ಟಿದ್ದೇವೆ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೇ, ಒಂದು ಮನವಿ, ಇದರಲ್ಲಿ ಏನಾಗಿದೆ ಎಂದರೆ, ಮಾನ್ಯ PWD Minister ಉದಾಸಿಯವರಿಂದ ಹೇಳಿಕೆ, ರೇವಣ್ಣನವರು ಮಾಡಿದಂತಹ ಹೇಳಿಕೆ, ಕುಮಾರಸ್ವಾಮಿಯವರು ಮಾಡಿದಂತಹ ಹೇಳಿಕೆ ಇವೆಲ್ಲವನ್ನು ನೋಡಿದರೆ Chief Minister meetingನಲ್ಲೆಲ್ಲಾ ಇದ್ದಾರೆ, ಅವರೂ ಕೂಡ sign ಮಾಡಿದ್ದಾರೆ. ಹಿಂದೆ ಇದ್ದಂತಹ Deputy C.M ಇದ್ದಾರೆ, ಅವರು sign ಮಾಡಿದ್ದಾರೆ. PWD Minister ಇದ್ದಾರೆ. Medical Education Minister ಇದ್ದಾರೆ.

ಅಧ್ಯಕ್ಷರು:– ನಾವು ಈ ವಿಷಯದಲ್ಲಿ ಚರ್ಚೆಯನ್ನು ಮುಗಿಸಿದ್ದೇನೆ. ಇದರ ಬಗ್ಗೆ ಇನ್ನು ಮುಂದೆ ಚರ್ಚೆಯಾದರೆ ದಾಖಲೆಯಲ್ಲಿ ಹೋಗುವುದಿಲ್ಲ.

ಶ್ರೀ ಸಿದ್ದರಾಮಯ್ಯ:– ನೀವು recordಗೆ ಹೋಗುವುದಿಲ್ಲವೆಂದರೆ ನಾವು ಏಕೆ ಇಲ್ಲಿಗೆ ಬರಬೇಕು? ನಾವು ಏನು ವಿಷಯ ಎತ್ತುವ ಹಾಗೆ ಇಲ್ಲ, ಏನೂ ಚರ್ಚೆ ಮಾಡುವ ಹಾಗೆ ಇಲ್ಲ ಎಂದು order ಮಾಡಿಬಿಡಿ, ಇಲ್ಲಿಗೆ ಬರುವುದೇ ಬೇಡ. ಯಾವುದನ್ನು ಚರ್ಚೆ ಮಾಡಬಾರದು, ಯಾವುದನ್ನು ಹೇಳಬಾರದು, ಅನುಮಾನ ಬಂದರೂ ಕೂಡ ಈ ರಾಜ್ಯದ ಜನತೆಗೆ ಹೇಳಲೇಬಾರದು. ಸಾರ್ವಜನಿಕ ಹಣ ಯೂರು ಬೇಕಾದರೂ ಲೂಟಿ ಹೊಡೆಯಲಿ ಮಾತನಾಡಲೇಬಾರದು.

ಅಧ್ಯಕ್ಷರು:- ಈ ಬಗ್ಗೆ ಮೂರು ತಾಸು ಚರ್ಚೆಯಾಗಿದೆ. ಇನ್ನು ಚರ್ಚೆ ಮಾಡುತ್ತೇವೆ ಎಂದರೆ ನಾನು ನಿಮಗೆ ಏನು ಹೇಳಬೇಕು?

ಶ್ರೀ ಸಿದ್ದರಾಮಯ್ಯ:- ನಾನು ಏನು ಹೇಳುವುದೇನೆಂದರೆ, IAS officers ಕೈಯಲ್ಲಿ ಇದನ್ನು ತನಿಖೆ ಮಾಡುವುದಕ್ಕೆ ಆಗುವುದಿಲ್ಲ, ನಿಷ್ಪಕ್ಷಪಾತ ತನಿಖೆಯಾಗುವುದಿಲ್ಲ, ಸತ್ಯ ಹೊರಬರುವುದಿಲ್ಲ. ಅದಕ್ಕೋಸ್ಕರ ದಯಮಾಡಿ ನಿಮ್ಮ ಅಧಿಕಾರವನ್ನು ಉಪಯೋಗಿಸಿ ಸದನ ಸಮಿತಿ ಮಾಡಿ. ಸತ್ಯ ಹೊರಗಡೆ ಬರಲಿ. ಯಾರ್‍ಯಾರು ತಪ್ಪಿತಸ್ಥರು ಇದ್ದಾರೆ ಅವರಿಗೆ ಶಿಕ್ಷೆಯಾಗಲಿ.

ಅಧ್ಯಕ್ಷರು:- ಬೇಡ, ಅಧಿಕಾರವನ್ನು ಯಾರಿಗೂ ಕೊಡುವುದು ಬೇಡ, ನೀವು ಇದ್ದೀರಿ, ಸರ್ಕಾರ ಇದೆ. ಇದರಲ್ಲಿ ಸಭಾಧ್ಯಕ್ಷರನ್ನು pictureಗೆ ತರುವುದಕ್ಕೆ ಹೋಗಬೇಡಿ. ಉತ್ತರ ಕೊಟ್ಟಿದ್ದಾರೆ, ಪದೇ ಪದೇ discuss ಮಾಡುವುದು ಅಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- If everybody escapes....

ಅಧ್ಯಕ್ಷರು:- ಜನಾರ್ಧನ ರೆಡ್ಡಿಯವರು ಏನೋ ಹೇಳುತ್ತಾರೆ.

ಶ್ರೀ ಎಂ.ಶ್ರೀನಿವಾಸ ಪ್ರಸಾದ್:- ಸರ್ಕಾರ ಈ ರೀತಿಯಾಗಿ ಮೊಂಡುತನ ಮಾಡುತ್ತಿದ್ದರೆ, ನಾವು ಇನ್ನು ಸುಮ್ಮನೆ ಇರುವುದಕ್ಕಾಗುವುದಿಲ್ಲ. We also can't keep quite.

ಅಧ್ಯಕ್ಷರು:- ಜನಾರ್ಧನ ರೆಡ್ಡಿಯವರೇ, ಯಾವುದರ ಬಗ್ಗೆ ಹೇಳುತ್ತೀರಿ, Air port ಬಗ್ಗೆ...

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಇದು ಏನೆಂದರೆ hit and run, ಅವರಿಗೆ ಬೇಕಾಗಿರುವುದನ್ನು ಹೇಳುವುದು, ಬೇಕಾಗಿಲ್ಲದೆ ಇರುವುದನ್ನು ಬಿಡುವುದು.

ಅಧ್ಯಕ್ಷರು:- ನನ್ನ ಪ್ರಕಾರ ಈ subject close ಆಗಿದೆ. ಮುಂದಿನ proceedings ಮಾಡುವುದಕ್ಕೆ ಸಹಕಾರ ಕೊಡಿ ಎಂದು ನಾನು ವಿನಂತಿ ಮಾಡುತ್ತಿದ್ದೇನೆ. ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ. ನೋಡಿ ಈ ರೀತಿ ಮಾಡಿದರೆ ಏನು ಮಾಡಬೇಕು? ಸದನ orderನಲ್ಲಿ ಇಲ್ಲವೆಂದರೆ ಏನು ಮಾಡಬೇಕು? ಈ ರೀತಿ ನಿಂತುಬಿಟ್ಟು House orderನಲ್ಲಿ ಇಲ್ಲವೆಂದು ನೀವೇ ಹೇಳಿಬಿಟ್ಟರೆ ಏನು ಮಾಡುವುದು?

ಶ್ರೀ ಜನಾರ್ಧನ ರೆಡ್ಡಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಡಿ.ಕೆ.ಶಿವಕುಮಾರ್‌ರವರು Bangalore International Airport ಬಗ್ಗೆ ಗಂಭೀರವಾದಂತಹ ವಿಷಯ ಏನು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ಅವರು ಸದನ ಸಮಿತಿಯನ್ನು ಏನು ಮಾಡಬೇಕೆಂದು ಹೇಳಿದ್ದಾರೆ, ಸದನ ಸಮಿತಿಯನ್ನು ಮಾಡುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ಈಗಾಗಲೇ

ಅನುಮತಿಯನ್ನು ಕೊಟ್ಟಿದ್ದಾರೆ. ಸದನ ಸಮಿತಿಯನ್ನು ರಚನೆ ಮಾಡುವುದಕ್ಕೆ ನಾವು ಒಪ್ಪಿಕೊಂಡು ಅನುಮತಿಯನ್ನು ಕೊಡುತ್ತೇವೆ.

ಅಧ್ಯಕ್ಷರು:– ಸದನ ಸಮಿತಿಯನ್ನು ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಮಾನ್ಯ ಡಿ.ಕೆ.ಶಿವಕುಮಾರ್‌ರವರು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದರು, ಅದಕ್ಕೆ ಸರ್ಕಾರದ ಪರವಾಗಿ ಸದನ ಸಮಿತಿಯನ್ನು ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಅದನ್ನು ನಾವು constitute ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು:– ನೋಡಿ, ನಾನು ಮತ್ತೊಮ್ಮೆ request ಮಾಡುತ್ತೇನೆ, ತಾವು ತಮ್ಮ ಸ್ಥಾನಕ್ಕೆ ಹೊಗಿ. ಅವರಿಗೆ ನಾನೇನು ಒತ್ತಾಯ ಮಾಡಿಲ್ಲ. ಅವರೇ ಮಾಡಿದ್ದಾರೆ. ಅವರನ್ನು convince ಮಾಡಿ, ಇದು ಸರ್ಕಾರಕ್ಕೆ ಬಿಟ್ಟಿದ್ದು. ಸರ್ಕಾರದವರು oppositionನವರು ಇದ್ದೀರಿ, ನಾನು decision ತೆಗೆದುಕೊಳ್ಳುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– House is not in order, How can you debate...

ಅಧ್ಯಕ್ಷರು: ಈ ವಿಷಯವನ್ನು ಈಗ close ಮಾಡಿದ್ದೇನೆ. ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ. ಇನ್ನು proceedings ಬಹಳ ಇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: No, this is.....

ಅಧ್ಯಕ್ಷರು: Calling attention ಸಲುವಾಗಿ ಎಲ್ಲಾ ಶಾಸಕರು wait ಮಾಡುತ್ತಿದ್ದಾರೆ. ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ, ನಿಮ್ಮದು ಸಹ ಸಾಕಷ್ಟು Calling attentions ಇವೆ, ದಯವಿಟ್ಟು proceedings ನಡೆಸುವುದಕ್ಕೆ ಅವಕಾಶ ಕೊಡಿ. ಕೊನೆಯದಾಗಿ ನಾನು request ಮಾಡುತ್ತಿದ್ದೇನೆ, ನಿಮ್ಮ ಸ್ಥಾನಕ್ಕೆ ಹೋಗಿ. ಈಗ ಸದನವನ್ನು 10 ನಿಮಿಷದವರೆಗೆ ಮುಂದಕ್ಕೆ ಹಾಕಿದ್ದೇನೆ.

(ಸದನದ ಕಲಾಪವು 6 ಗಂಟೆ 49 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ 10 ನಿಮಿಷದ ನಂತರ ಸಮಾವೇಶಗೊಳ್ಳಲು ತೀರ್ಮಾನಿಸಿತು)

[ಸದನವು ಪುನಃ 8 ಗಂಟೆ 33 ನಿಮಿಷಕ್ಕೆ ಸಮಾವೇಶಗೊಂಡಿತು, ಈ ಸಂದರ್ಭದಲ್ಲಿ ಜೆಡಿ[ಎಸ್]ನ ಸದಸ್ಯರು ಸದನದ ಬಾವಿಯಲ್ಲಿದ್ದರು]

ಅಧ್ಯಕ್ಷರು: ಒಂದು <u>ಪ್ರಕಟಣೆ</u>

ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಈ ದಿವಸ ನೀಡಿರುವ ಪತ್ರದಲ್ಲಿ ಕೋರಿರುವಂತೆ ಕೆಳಕಂಡ ಸದಸ್ಯರು ಕಾಂಗ್ರೆಸ್ ಶಾಸಕಾಂಗ ಪದಾಧಿಕಾರಿಗಳಾಗಿರುತ್ತಾರೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಶ್ರೀ ಟಿ.ಬಿ.ಜಯಚಂದ್ರರವರು ಉಪನಾಯಕರು, ಶ್ರೀ ಸಿ.ಎಸ್.ನಾಡಗೌಡರವರು,

ಶ್ರೀ ಅಭಯಚಂದ್ರ ಜೈನ್ ಅವರು ಮುಖ್ಯ ಸಚೇತಕರು. ಮತ್ತೆ ಇನ್ನೊಂದು ಪ್ರಕಟಣೆ ಇದೆ.

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ, ಒಂದು, 2008ನೇ ಸಾಲಿನ ಕರ್ನಾಟಕ ಧನವಿನಿಯೋಗ ಸಂಖ್ಯೆ:1 ವಿಧೇಯಕ, 2008 ನೇ ಸಾಲಿನ ಕರ್ನಾಟಕದ ಧನವಿನಿಯೋಗ ವಿಧೇಯಕ 2008ನೇ ಸಾಲಿನ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ವಿಧೇಯಕ, 2008ನೇ ಸಾಲಿನ ಕರ್ನಾಟಕ ಕಾನೂನು[ತಿದ್ದುಪಡಿ] ವಿಧೇಯಕ, 2008ನೇ ಸಾಲಿನ ಕರ್ನಾಟಕ ಮೋಟಾರು ವಾಹನಗಳ ತೆರಿಗೆ [ತಿದ್ದುಪಡಿ] ವಿಧೇಯಕ, ಹಾಗು 2008ನೇ ಸಾಲಿನ ಕರ್ನಾಟಕ ಸ್ಟ್ಯಾಂಪ್ಸ್[ತಿದ್ದುಪಡಿ] ವಿಧೇಯಕಗಳಿಗೆ ವಿಧಾನಪರಿಷತ್ತು ಯಾವುದೇ ತಿದ್ದುಪಡಿಗಳಿಲ್ಲದೆ ತನ್ನ ಸಹಮತವನ್ನು ನೀಡಿರುವುದು ಎಂದು ತಿಳಿಸಿರುತ್ತಾರೆ.

[ಗೊಂದಲ]

ಈಗಾಗಲೇ ತಾವು ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಬಗ್ಗೆ ತಾವೇನು ಧರಣಿಯನ್ನು ಕುಳಿತ್ತಿದ್ದಿರಿ, ಈ ವಿಷಯದ ಬಗ್ಗೆ ನಾನು ತಮ್ಮಲ್ಲಿ ಈಗಾಗಲೇ ವಿನಂತಿ ಮಾಡಿಕೊಂಡಿದ್ದೆನೆ. ಈ ವಿಷಯ ಚರ್ಚೆಯಾಗಿದೆ, ತಾವು ಮತ್ತು ಉದಾಸಿಯವರನ್ನು ಮತ್ತೊಮ್ಮೆ ಕರೆಯಿಸಿ ಹೇಳಿದ್ದೇನೆ, ಚರ್ಚೆಯಾಗಿದೆ ಅವರು ಉತ್ತರವನ್ನು ಕೊಟ್ಟಿದ್ದಾರೆ. ಅದಕ್ಕೆ ತಾವು ದಯವಿಟ್ಟು ತಮ್ಮ ಸ್ಥಾನಕ್ಕೆ ಹೋದರೆ ಗಮನ ಸೆಳೆಯುವ ಸೂಚನೆ ಮತ್ತು ಇನ್ನಿತರ ವಿಷಯಗಳನ್ನು ತೆಗೆದುಕೊಳ್ಳಬಹುದು, ಉಳಿದ ವಿಷಯಗಳನ್ನು ತೆಗೆದುಕೊಳ್ಳಲು ನಾನು ತಯಾರಿದ್ದೇನೆ, ಧರಣಿಯನ್ನು ಮುಕ್ತಾಯ ಮಾಡಿ, ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ ಎಂದು ನಾನು ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳಿತ್ತೇನೆ.

[ಈ ಸಂದರ್ಭದಲ್ಲಿ ಮಾನ್ಯ ಜೆಡಿ[ಎಸ್]ನಾಯಕರಾದ ಶ್ರೀ ಕುಮಾರಸ್ವಾಮಿಯವರು ತಮ್ಮ ಆಸನಕ್ಕೆ ತೆರಳಿದರು]

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುವಾಗ ಅನುಮಾನಾಸ್ಪದವಾಗಿದೆ ಎಂಬ ಪದವನ್ನು ಈ ಒಂದು ವಿಷಯದಲ್ಲಿ 10–12 ಸಾರಿ ಉಪಯೋಗ ಮಾಡಿದ್ದಾರೆ. ಆದುದರಿಂದ ಅವರು ಅನುಮಾನವಿದೆ ಎಂದು ಅವರೇನು ಹೇಳುತ್ತಿದ್ದಾರೆ, ಆ ದೃಷ್ಟಿಯಿಂದಲೆ ನಾವು ಸದನ ಸಮಿತಿ ಮಾಡಿ ಎಂದು ಹೇಳುತ್ತಿದ್ದೇವೆ. ಅವರು ಪದೇ ಪದೇ ಅನುಮಾನ ಎಂಬುವ ಪದವನ್ನು ಹೇಳಿದ್ದಾರೆ.

[ಗೊಂದಲ]

ಅಧ್ಯಕ್ಷರು: ನಾನು ಈಗಾಗಲೆ ಈ ಬಗ್ಗೆ ರೂಲಿಂಗ್ ಕೊಟ್ಟಿದ್ದೇನೆ, ಮತ್ತೆ ಬೇರೆ ವಿಷಯ ಪ್ರಸ್ತಾಪ ಮಾಡುವಾಗ ತೆಗೆದುಕೊಳ್ಳೋಣ. ದಯವಿಟ್ಟು ತಮ್ಮ ಸ್ಥಾನಕ್ಕೆ ತೆರಳಿ ಉಳಿದ ಕಾರ್ಯಕಲಾಪಗಳನ್ನು ತೆಗೆದುಕೊಳ್ಳೋಣ, ಈಗ ಆ ವಿಷಯ ಮುಗಿಯಿತು ನಾನು ಆ ವಿಷಯವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ.

[ಈ ಸಂದರ್ಭದಲ್ಲಿ ಸದಸ್ಯರಾದ ಮಾನ್ಯ ಹೆಚ್.ಡಿ.ರೇವಣ್ಣನವರು ತಮ್ಮ ಆಸನಕ್ಕೆ ತೆರಳಿದರು]

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ನಿಮ್ಮ ಕೊಠಡಿಗೆ ಲೋಕೋಪಯೋಗಿ ಮಂತ್ರಿಗಳನ್ನು ಕರೆಯಿಸಿದ್ದಿರಿ, ನಮ್ಮನ್ನೂ ಕರೆಯಿಸಿದ್ದಿರಿ, ಎಲ್ಲಾ ದಾಖಲೆಗಳನ್ನು ಅಲ್ಲಿ ಇಟ್ಟಿದ್ದೇವೆ, ಎಲ್ಲಾ ದಾಖಲೆಗಳನ್ನು ತೋರಿಸಿಕೊಟ್ಟಿದ್ದೇವೆ, ಇದರಲ್ಲಿ 5 ಜನ ಮಂತ್ರಿಗಳು involve ಆಗಿರುವುದರಿಂದ ಸದನ ಸಮಿತಿಯನ್ನು ರಚಿಸಬೇಕೆಂದು ನಿಮ್ಮ ಕೊಠಡಿಯಲ್ಲಿ ಲೋಕೋಪಯೋಗಿ ಮಂತ್ರಿಗಳಿಗೆ ದಾಖಲಾತಿ ಸಮೇತ ಕೊಟ್ಟಿದ್ದೇನೆ. ಅದಕ್ಕೆ ತಾವು ಸದನ ಸಮಿತಿ ರಚನೆಯನ್ನು ಪ್ರಕಟಿಸಬೇಕೆಂದು ಮಾಡಬೇಕೆಂದು ನಿಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ ಸ್ವಾಮಿ. ಏಕೆಂದರೆ, ಇದರಲ್ಲಿ 5 ಜನ ಮಂತ್ರಿಗಳು involve ಆಗಿರುವುದು ಒಬ್ಬರಲ್ಲ ಇಬ್ಬರಲ್ಲ. ಆದುದರಿಂದ 5 ಜನ ಮಂತ್ರಿಗಳಿಂದ ಹಿಡಿದು, ಅಧಿಕಾರಿಗಳಿಂದ ಹಿಡಿದು ತನಿಖೆಯಾಗಬೇಕಾಗಿದೆ.

[ಗೊಂದಲ]

ಅಧ್ಯಕ್ಷರು: ನಾನು ಈಗಾಗಲೇ ಈ ವಿಷಯದ ಬಗ್ಗೆ ರೂಲಿಂಗ್ ಅನ್ನು ಕೊಟ್ಟಿದ್ದೇನೆ, ಈ ವಿಷಯವನ್ನು ಮುಕ್ತಾಯಗೊಳಿಸಿದ್ದೇನೆ, ಮತ್ತೆ ಪದೇ ಪದೇ ಅದೇ ವಿಷಯದ ಬಗ್ಗೆ ಚರ್ಚೆ ಮಾಡುವುದಾದರೆ ಯಾವುದೆ ಅರ್ಥವಿಲ್ಲ. ನೀವು ಉಳಿದ ವಿಷಯಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಆಸಕ್ತಿ ತೋರಿಸಿದರೆ ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ, ಬೇರೆ ವಿಷಯಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ಬೆಳಿಗ್ಗಿನಿಂದ ಬಹಳಷ್ಟು ಜನರು Calling Attention ಬಗ್ಗೆ ಕಾಯುತ್ತಿದ್ದಾರೆ.

[ಗೊಂದಲ]

ಶ್ರೀ ಹೆಚ್.ಡಿ.ರೇವಣ್ಣ: ಸದನ ಸಮಿತಿಯನ್ನು ಮಾಡುವುದಕ್ಕೆ ಹೆದರಿಕೆ ಏಕೆ ಇದೆ, ಏತಕ್ಕೆ ಹೆದರಿಕೊಳ್ಳಬೇಕು?

[ಗೊಂದಲ]

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೆ, ಮೇಲ್ಮನೆಯಲ್ಲಿ ಯಡಿಯೂರಪ್ಪನವರು ಸೈಕಲ್ ಬಗ್ಗೆ ಪ್ರಸ್ತಾವ ಬಂದಾಗ House Committee

ಮಾಡಲು ಒಪ್ಪಿಕೊಂಡಿದ್ದಾರೆ, ನೀವು ನೋಡಿ verify ಮಾಡಿ, ಇಲ್ಲಿ ಅವರು ಆರ್ಡರ್ ಯಾರು ಮಾಡಿದ್ದಾರೆ ಅವರೆ ಇವತ್ತಿನ ದಿವಸ ತನಿಖೆಯಾಗಲಿ ಎನ್ನುತ್ತಿದ್ದಾರೆ ಅದಕ್ಕೆ ನಿಮ್ಮ ಅಧ್ಯಕ್ಷತೆಯಲ್ಲೆ ಆಗಲಿ, ಬೇರೆಯವರು ಬೇಡ.

ಅಧ್ಯಕ್ಷರು: ಈ ವಿಷಯದ ಬಗ್ಗೆ further ಚರ್ಚೆ ಇಲ್ಲ, ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ. ಬಹಳ ಮಹತ್ವದ Calling Attentions ಇವೆ ತೆಗೆದುಕೊಳ್ಳೋಣ, ಮುಂದಿನ ಕಾರ್ಯಕಲಾಪಗಳನ್ನು ತೆಗೆದುಕೊಳ್ಳೋಣ.

[ಗೊಂದಲ]

[ಈ ಸಂದರ್ಭದಲ್ಲಿ ಸದಸ್ಯರಾದ ಮಾನ್ಯ ಹೆಚ್.ಸಿ.ಬಾಲಕೃಷ್ಣರವರು ತಮ್ಮ ಆಸನಕ್ಕೆ ತೆರಳಿದರು]

ಶ್ರೀ ಹೆಚ್.ಸಿ.ಬಾಲಕೃಷ್ಣ: ಅಧ್ಯಕ್ಷರೆ, ನಮಗೆ ರೇವಣ್ಣನವರ ಮೇಲೆ ಅನುಮಾನವಿದ, ದಯಮಾಡಿ ಸದನ ಸಮಿತಿಯನ್ನು ರಚಿಸಿ. [ಗೊಂದಲ]

(ಗೊಂದಲ)

ಅಧ್ಯಕ್ಷರು: ಈಗ ಇದರ ಬಗ್ಗೆ ಸಾಕಷ್ಟು ವಿಷಯಗಳು ಚರ್ಚೆಯಾಗಿದೆ. ಇನ್ನು ಗಮನಸೆಳೆಯುವ ಸೂಚನೆ ಮುಖ್ಯವಾದ ಅನೇಕ ವಿಚಾರಗಳು ಇದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಉದಾಸಿಯವರು ಹೇಳಿದಂತೆ ನಮಗೆ ರೇವಣ್ಣನವರ ಮೇಲೆಯೇ ಅನುಮಾನ ಇದೆ! ಆದ್ದರಿಂದ ದಯಮಾಡಿ ಸದನದ ಸಮಿತಿ ಮಾಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ವಿಚಾರಣೆಗೆ ನಿವೃತ್ತ ಐ.ಎ.ಎಸ್. ಅಧಿಕಾರಿಯನ್ನು ನೇಮಕ ಮಾಡಿದ್ದೀರಿ. ಇದರಲ್ಲಿ ಮಾಜಿ ಮುಖ್ಯಮಂತ್ರಿ, ಮಾಜಿ ಲೋಕೋಪಯೋಗಿ ಸಚಿವರು, ಹಾಲಿ ಮುಖ್ಯಮಂತ್ರಿ, ಹಾಲಿ ಲೋಕೋಪಯೋಗಿ ಸಚಿವರು, ಹಾಲಿ ಗೃಹ ಸಚಿವರು ಇದ್ದಾರೆ. ಪಾಪ ನಿವೃತ್ತ ಐ.ಎ.ಎಸ್. ಅಧಿಕಾರಿ ಇವರನ್ನೆಲ್ಲ ಸಮನ್ ಮಾಡಿ ಕರೆದು statement ತೆಗೆದುಕೊಳ್ಳಲು ಆಗುತ್ತದೆಯೆ ನೀವೇ ಹೇಳಿ.

ಅಧ್ಯಕ್ಷರು: ನಿಲುವಳಿ ಸೂಚನೆಯಲ್ಲಿ ಹಾಲಿ ಮುಖ್ಯಮಂತ್ರಿ, ಮಂತ್ರಿ, ಮಾಜಿ ಮಂತ್ರಿ, ಮುಖ್ಯಮಂತ್ರಿ ಎಂಬ subject ಇಲ್ಲ. ಇದು ಯಾವುದೂ ಇಲ್ಲ. ಇದರಲ್ಲಿ ಯಾವುದೋ ಮಂತ್ರಿಗಳ ಬಗ್ಗೆ, ಮುಖ್ಯಮಂತ್ರಿಗಳ ಬಗ್ಗೆ ಪ್ರಸ್ತಾವ ಮಾಡಿರಲಿಲ್ಲ. ಅವರುಗಳು ಇದರಲ್ಲಿ ಇಲ್ಲ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ಇದು ಹತ್ತು ಜನರ ಹಣ. ಇದನ್ನು ಕಂಡುಹಿಡಿಯಬೇಕು.